ಶ್ರೀ ಕ್ಯಾತ್ಸಂದ್ರ ರಾಜಣ್ಣ (ಬೆಳ್ಳಾವಿ) ಮಾನ್ಯ ಅಧ್ಯಕ್ಷರೇ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಸೂಚಿಸಿದ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವವನ್ನು ಅನುಮೋದಿಸುತ್ತೇನೆ

ಅಧ್ಯಕ್ಷರು ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವವನ್ನು ಮಂಡಿಸಲಾಯಿತು

ಅಧ್ಯಕ್ಷರು – ಮಾಧುಸ್ವಾಮಿಯವರೇ, ಕುಮಾರ್ ಬಂಗಾರಪ್ಪನವರು urgent ಆಗಿ ಶೂನ್ಯವೇಳೆ ಕೇಳುತ್ತೇನೆಂದು ಹೇಳುತ್ತಿದ್ದಾರೆ

ಶ್ರೀ ಜೆ ಸಿ ಮಾಧುಸ್ವಾಮಿ – ಆಗಬಹುದು

7 ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಲಾದ ವಿಷಯಗಳು

ವಿಷಯ ಅ) ಜನವರಿ 2007 ದಿನಾಂಕ 13 ರಿಂದ 22 ರವರೆಗೆ ಸೊರಬದಲ್ಲಿ ನಡೆದ ಎನ್ ಎಸ್ ಎಸ್ ಕ್ಯಾಂಪ್ ಸಂಬಂಧದಲ್ಲಿ ಸೊರಬ ಸರ್ಕಲ್ ಇನ್ಸಪೆಕ್ಟರ್‌ರವರ ಅಸಭ್ಯ ವರ್ತನೆ, ದಬ್ಬಾಳಿಕೆ ಬಗ್ಗೆ

ಶ್ರೀ ಎಸ್ ಕುಮಾರ್ ಬಂಗಾರಪ್ಪ (ಸೊರಬ) – ದಿನಾಂಕ 13 ರಿಂದ 22ನೇ ದಿನಾಂಕದವರೆಗೆ ಒಂದು ಎನ್ ಎಸ್ ಎಸ್ ಕ್ಯಾಂಪ್ ನಮ್ಮ ತಾಲ್ಲೂಕಿನಲ್ಲಿ ನಡೆಯಿತು 22ನೇ ದಿನಾಂಕದಂದು ಗುದ್ದಲಿ, ಪಿಕಾಸಿ ಎಲ್ಲಾ ಸಾಮಗ್ರಿಗಳನ್ನು ಹಾಕಿ ಊರಿನವರೆಲ್ಲಾ ಸೇರಿ ಮಕ್ಕಳನ್ನೆಲ್ಲರನ್ನು ಊರಿನಿಂದ ಬೀಳ್ಕೊಟ್ಟೆವು ನಂತರ ವಾಪಸ್ಸು ಬರಬೇಕಾದರೆ ಆ ತಾಲ್ಲೂಕಿನ ಸರ್ಕಲ್ ಇನ್ಸ್‌ಪೆಕ್ಟರ್ ಆ ಲಾರಿಯನ್ನು ನಿಲ್ಲಿಸಿ ಆ ಹುಡುಗರ ಸಮೇತ ಎಲ್ಲರನ್ನು ಸ್ಟೇಷನ್ನಿಗೆ ಕರೆದುಕೊಂಡು ಹೋಗಿ ಇಟ್ಟುಕೊಂಡರು ನಂತರ ಗ್ರಾಮಸ್ಥರು ಸ್ಟೇಷನ್ನಿಗೆ ಹೋಗಿ ಇದು ಎನ್ ಎಸ್ ಎಸ್ ಕ್ಯಾಂಪ್‌ನಿಂದ ನಡೆಯುತ್ತಿರುವುದು ಎಂದು ವಿನಂತಿಸಿದರು ಅಲ್ಲಿ ಬಸ್ಸಿನ ಸೌಕರ್ಯ ಇಲ್ಲದಿರುವುದರಿಂದ ಸೊರಬದಿಂದ 3–4 ಕಿ ಮೀ interior ನಲ್ಲಿರುವ ಒಂದು ಹಳ್ಳಿಯಿಂದ ಆ ಲಾರಿ ಹೋಗುತ್ತಿತ್ತು ಏಕಾಏಕಿ ಆ ಸರ್ಕಲ್ ಇನ್ಸ್‌ಪೆಕ್ಟರ್ ಹೋಗಿ ಗ್ರಾಮದ ಅಧ್ಯಕ್ಷರ ಮೇಲೆ ಹಲ್ಲೆ ಮಾಡಿ ಅವರಿಗೆ ಅಸಾಲ್ಟ್ ಕೂಡ ಮಾಡಿದರು ಅಸಾಲ್ಟ್ ಮಾಡಿದ ಮೇಲೆ ಗ್ರಾಮಸ್ಥರೆಲ್ಲಾ ಪಕ್ಷಾತೀತವಾಗಿ ಹೋಗಿ ಸರ್ಕಲ್ ಇನ್ಸ್‌ಪೆಕ್ಟರ್‌ರವರ ಅಸಭ್ಯ ವರ್ತನೆ, ದಬ್ಬಾಳಿಕೆ ಮಾಡುತ್ತಿರುವುದಕ್ಕೆ ಅವರ ಮೇಲೆ ಪ್ರತಿಭಟನೆ ಮಾಡಿದರು ಈ ಕ್ಷಣದಲ್ಲಿಯೂ ಸಹ ಆಟೋರಿಕ್ಷಾದವರು, ಟೆಂಪೋದವರು, ರೈತರು,

ಸಾವಿರಾರು ಜನರು ಸೇರಿ ಸ್ಟೇಷನ್ ಮುಂದೆ ಪ್ರತಿಭಟನೆ ಮಾಡುತ್ತಿದ್ದಾರೆ ಈ ತರಹದ ವರ್ತನೆ ಇರುವ ಸರ್ಕಲ್ ಇನ್ಸ್‌ಪೆಕ್ಟರ್‌ಗಳ ಹಳೆ ಚರಿತ್ರೆಯನ್ನು ತೆಗೆದುಕೊಂಡಾಗ ತರೀಕೆರೆಯಲ್ಲಿಯೂ ಇದೇ ರೀತಿ ಗಲಾಟೆ ಮಾಡಿ ಊರಿನವರೆಲ್ಲಾ ಅವರನ್ನು ಓಡಿಸಿಕೊಂಡು ಹೋಗಿ ಈ ತರಹದ ಅಧಿಕಾರಿಗಳನ್ನು ಹೊಡೆದಿರುವ ನಿದರ್ಶನಗಳಿವೆ ಹಾಗಾಗಿ ಸಮಾಧಾನವಾಗಿರುವ ತಾಲ್ಲೂಕುಗಳಿಗೆ ಇಂತಹ ಅಧಿಕಾರಿಗಳನ್ನು ದಯಮಾಡಿ ಹಾಕಬೇಡಿ ಎಂದು ನಾನು ಮುಂಚೆ ತಮ್ಮಲ್ಲೂ ಸಹ ವಿನಂತಿ ಮಾಡಿದ್ದೆನು ಮತ್ತೆ ಪ್ರತಿಸಾರಿಯೂ ನೀವು ಎಸ್ ಪಿ ಯವರಿಂದ first hand information ತೆಗೆದುಕೊಳ್ಳಿ ಅವರು ಬಂದಾಗಲಿಂದ ಕಡಸೂರು ಎಂಬ ಗ್ರಾಮದಲ್ಲಿ ಯಾವುದೋ ಒಂದು ಪಂಚಾಯ್ತಿಗೋಸ್ಕರ ಅಲ್ಲಿನ ಗ್ರಾಮಸ್ಥರು ಆ ದೇವಸ್ಥಾನವನ್ನು ಮುಚ್ಚಿಟ್ಟಿದ್ದರು ಈ ಇನ್ಸ್‌ಪೆಕ್ಟರ್ ಹೋಗಿ ಏಕಾ ಏಕಿ ಆ ದೇವಸ್ಥಾನವನ್ನು ತೆಗೆಸಿ ಊರೆಲ್ಲಾ ಗದ್ದಲ ಮಾಡಿ ಆ ಊರಿನಲ್ಲಿ ಗಲಾಟೆಗಳು ಶುರುವಾಯಿತು ದಯಮಾಡಿ ಈ ಅಧಿಕಾರಿಯನ್ನು ತತ್‌ಕ್ಷಣ ಅಮಾನತ್ತಿನಲ್ಲಿಟ್ಟು ನೀವು ಅವರನ್ನು ಅಲ್ಲಿಂದ ವರ್ಗಾಯಿಸಿ ತೆಗೆದುಹಾಕಬೇಕೆಂದು ನಾನು ವಿನಂತಿಸುತ್ತೇನೆ ಏಕೆಂದರೆ ನಮ್ಮ ತಾಲ್ಲೂಕಿನಲ್ಲಿ ಯಾವ ಅಧಿಕಾರಿಗಳೂ ಸಹ ಇವರ ಕೈಕೆಳಗೆ ಕೆಲಸ ಮಾಡಲಿಕ್ಕೆ ಆಗುವುದಿಲ್ಲ ಎಲ್ಲಿಯೂ ಕೂಡ ಇಷ್ಟು ವರ್ಷಗಳ ಇತಿಹಾಸದಲ್ಲಿ ಈ ರೀತಿಯ ಸರ್ಕಲ್ ಇನ್ಸ್‌ಪೆಕ್ಟರ್ ನಮ್ಮಲ್ಲಿ ಬಂದಿರಲಿಲ್ಲ ಹಾಗಾಗಿ ದಯಮಾಡಿ ಇವರನ್ನು ತಕ್ಷಣ ಅಮಾನತ್ತು ಮಾಡಿ ಎಂದು ನಾನು ಗೃಹ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ ಏಕೆಂದರೆ ಗ್ರಾಮ ಪಂಚಾಯ್ತಿಯವರು ಅಸಾಲ್ಟ್‌ನಿಂದ ಆಸ್ಪತ್ರೆ ಸೇರಿದ್ದಾರೆ ಇಲ್ಲವಾದರೆ ಯಾವ್ಯಾವುದೋ ವಿಚಾರವಾಗಿ ಮತ್ತೆ ತೊಂದರೆಯಾಗಿ ಅಲ್ಲಿನ ವಾತಾವರಣ ಹಾಳಾಗಬಾರದೆನ್ನುವ ದೃಷ್ಟಿಯಿಂದ ಅವರನ್ನು ತತ್‌ಕ್ಷಣ ಅಮಾನತ್ತಿನಲ್ಲಿಟ್ಟು ಬೇರೆ ಕಡೆಗೆ ವರ್ಗಾಯಿಸಬೇಕೆಂದು ತಮ್ಮಲ್ಲಿ ವಿನಂತಿಸುತ್ತೇನೆ

ಶ್ರೀ ಎಂ ಪಿ ಪ್ರಕಾಶ್ (ಮಾನ್ಯ ಗೃಹ ಮತ್ತು ಕಾನೂನು ಸಂಸದೀಯ ವ್ಯವಹಾರಗಳ ಸಚಿವರು) – ಶ್ರೀ ಜಿದ್ರೆರುದ್ರೇಶ್ ಎನ್ನುವವರು ಸೊರಬ ವೃತ್ತದಲ್ಲಿ ದಿನಾಂಕ 28 02 2006 ರಿಂದ ಕರ್ತವ್ಯ ನಿರ್ವಹಿಸುತ್ತಿದ್ದಾರೆ ಸೊರಬದ ಪ್ರಥಮದರ್ಜೆ ಸರ್ಕಾರಿ ಕಾಲೇಜಿನ ವ್ಯಾಪ್ತಿಯಲ್ಲಿ ದಿನಾಂಕ 23 1 2007 ರಂದು ಸೊರಬದಿಂದ ಸುಮಾರು 6 ಕಿ ಮೀ ದೂರದಲ್ಲಿರುವ

ಸೊರಬ ತಾಲ್ಲೂಕು ಕಸಬಾ ಗುಂಡಿಶೆಟ್ಟಿ ಕೊಪ್ಪಗ್ರಾಮದಿಂದ ಎನ್ ಎಸ್ ಎಸ್ ಶಿಬಿರ ಮುಗಿಸಿಕೊಂಡು ಲಾರಿಯಲ್ಲಿ ಹಿಂತಿರುತ್ತಿದ್ದಾಗ ಸುಮಾರು 11 00 ಗಂಟೆ ಸಮಯದಲ್ಲಿ ಸಿ ಪಿ ಐ ಸೊರಬದವರು ಸದರಿ ಲಾರಿಯನ್ನು ಸೊರಬ ಪೊಲೀಸ್ ರಾಣೆಯ ಮುಂದೆ ತಡೆದು ಲಾರಿಯ ಚಾಲಕನಾದ ಯೋಗೀಶ್ ಎನ್ನುವವರ ಮೇಲೆ ಪ್ರಕರಣವನ್ನು ದಾಖಲಿಸಿರುತ್ತಾರೆ ಈ ಸಂದರ್ಭದಲ್ಲಿ ಶ್ರೀಲಿಂಗಪ್ಪ, ಮಾಜಿ ಗ್ರಾಮ ಪಂಚಾಯ್ತಿ ಅಧ್ಯಕ್ಷರು, ಅದೇ ಸೊರಬದವರು ಮಧ್ಯೆ ಪ್ರವೇಶಿಸಿ ಸಿ ಪಿ ಐ ಶ್ರೀ ಜಿದ್ರೆ ರುದ್ರೇಶ್‌ರವರಿಗೆ ಲಾರಿಯಲ್ಲಿರುವ ಪ್ರಯಾಣಿಕರು ವಿದ್ಯಾರ್ಥಿಗಳಾಗಿರುವುದರಿಂದ ಪ್ರಕರಣವನ್ನು ಹಗುರವಾಗಿ ತೆಗೆದುಕೊಳ್ಳಲು ಕೇಳಿಕೊಂಡಿರುತ್ತಾರೆ ಇದರಿಂದ ಇಬ್ಬರ ಮಧ್ಯೆ ಮಾತಿನ ಚಕಮಕಿ ಮತ್ತು ಸಂವಾದ ನಡೆದು ಈ ಸಂದರ್ಭದಲ್ಲಿ ಸಿ,ಪಿ ಐ ಸೊರಬರವರು ಶ್ರೀ ಲಿಂಗಪ್ಪನವರನ್ನು ತಡೆದಿರುತ್ತಾರೆ ಇದರಿಂದಾಗಿ ಲಿಂಗಪ್ಪನವರು ಸಿ ಪಿ ಐ ನವರ ಮೇಲೆ ಹಲ್ಲೆ ಮಾಡಿರುವುದಾಗಿ ಹಾಗೂ ಅವರೊಂದಿಗೆ ಅನುಚಿತವಾಗಿ ವರ್ತಿಸಿರುವ ಆರೋಪ ಮಾಡಿದ್ದಾರೆ ಈ ಬಗ್ಗೆ ಸದರಿಯವರು ಎಸ್ ಪಿ ಶಿವಮೊಗ್ಗ ಜಿಲ್ಲೆಯವರಿಗೆ ದೂರು ಸಲ್ಲಿಸಿದ್ದು ಈ ದೂರಿನ ಬಗ್ಗೆ ಇದೀಗ ವಿಚಾರಣೆ ನಡೆಸಲು ಅಡಿಷನಲ್ ಎಸ್ ಪಿ, ಶಿವಮೊಗ್ಗ ಅವರಿಗೆ ಎಸ್ ಪಿ ಶಿವಮೊಗ್ಗ ಜಿಲ್ಲೆ ಅವರು ವಹಿಸಿರುತ್ತಾರೆ ಅವರ ವಿರುದ್ದ ಮೇಲ್ಕಂಡ ಘಟನೆಗೆ ಸಂಬಂಧಿಸಿದಂತೆ ಪ್ರತಿಭಟನಾ ಮೆರವಣಿಗೆಯನ್ನು ಹಮ್ಮಿಕೊಂಡಿರುತ್ತಾರೆ ವಿಚಾರಣೆಯಿಂದ ಸದರಿ ಸಿ ಪಿ ಐ ರವರು ಅನುಚಿತವಾಗಿ ವರ್ತಿಸಿರುವುದು ಕಂಡುಬಂದಲ್ಲಿ ನಿಯಮಾನುಸಾರ ಸದರಿ ಸಿ ಪಿ ಐ ರವರ ಮೇಲೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು

ಶ್ರೀ ಎಂ ಪಿ ಪ್ರಕಾಶ್ ಇದರ ಜತೆಗೆ ತಾವೇನು ಹೇಳಿದ್ದೀರಿ, ಅಲ್ಲಿ ಪ್ರತಿಭಟನೆ ನಡೆದಿದೆ ಎಂದು, ತಾವು ಹೇಳಿರುವುದರಿಂದ, ಅನುಚಿತ ವರ್ತನೆ ಎಂಬುದಕ್ಕೆ ನಾವು ಸಂಪೂರ್ಣ ಗೌರವ ನೀಡುತ್ತೇವೆ ಅಲ್ಲಿಂದ ವರದಿ ಬಂದ ತಕ್ಷಣವೇ ನಾನು ಕ್ರಮ ಜರುಗಿಸುತ್ತೇನೆ

ಶ್ರೀ ಎಸ್ ಕುಮಾರ್ ಬಂಗಾರಪ್ಪ (ಸೊರಬ) ಗ್ರಾಮ ಪಂಚಾಯ್ತಿ ಮಾಜಿ ಅಧ್ಯಕ್ಷ ನಿಂಗಪ್ಪನವರು ಅವಾಚ್ಯ ಶಬ್ದಗಳನ್ನು ಬಳಸಿದರು, ಹಲ್ಲೆ ಮಾಡಿದರು ಅಂತ ಹೇಳಿದ್ದೀರಿ, ಅವರೊಬ್ಬ ಪ್ರಗತಿಪರ, ಬಹಳ ಸೌಮ್ಯ ಯಾವಾಗಲೂ ಅವಾಚ್ಯ ಶಬ್ದ ಬಳಸುವುದಾಗಲಿ ಅಥವಾ ಮತ್ತೊಬ್ಬರ ಮೇಲೆ

ಏರಿಹೋಗುವವರಲ್ಲ ಪೊಲೀಸ್‌ನವರೇ ಅವರ ಮೇಲೆ ಅಸಾಲ್ಟ್ ಮಾಡಿ ನಿಂಗಪ್ಪನವರೇ ಅಸಾಲ್ಟ್ ಮಾಡಿದರು ಅಂತ ನಿಮಗೆ ವರದಿ ಕೊಟ್ಟಿದ್ದಾರೆ ಇಲಾಖೆ ಉತ್ತರದಿಂದ ಅವರೇ ಹೊಡೆದರು ಅಂತ ಆಗುತ್ತದೆ

ಶ್ರೀ ಎಂ ಪಿ ಪ್ರಕಾಶ್ ತಮಗೆ ವೈಯಕ್ತಿಕ ಮಾಹಿತಿ ಇರುವುದರಿಂದ ಅವರೊಬ್ಬ ಸಭ್ಯಸ್ಥ ಎಂಬ ಬಗ್ಗೆ ಯಾರದೇನೂ ಆಕ್ಷೇಪ ಇರಲಿಕ್ಕಿಲ್ಲ ಆದರೆ ಇಂತಹ ಸಂದರ್ಭದಲ್ಲಿ ತನಿಖೆ ನಡೆಸಿದಾಗ ಯಾರು ಅನುಚಿತವಾಗಿ ವರ್ತಿಸಿದರು ಅಂತ ಗೊತ್ತಾಗುತ್ತದೆ ತಾವು ಹೇಳಿದ ಮಾತಿಗೆ ಗೌರವ ಕೊಟ್ಟು ನಮ್ಮ ಅಧಿಕಾರಿಗಳಿಗೆ ಕೂಡ ತಿಳಿಸುತ್ತೇನೆ ಪ್ರಾಯಶ ನಾಳೆ ನಾಡಿದ್ದರೊಳಗೆ ವರದಿ ತರಿಸಿಕೊಂಡು ತಪ್ಪಿತಸ್ಥರ ಮೇಲೆ ಕ್ರಮ ಜರುಗಿಸುತ್ತೇವೆ

ಆ) ವಿಷಯ ಶ್ರೀಮತಿ ಈಸ್ತರ್ ಪ್ರಸನ್ನ (Esther Prasanna) ಅವರಿಗೆ ಏಕಲವ್ಯ ಬಿರುದನ್ನು ನೀಡುವ ಬಗ್ಗೆ

ಶ್ರೀ ಇವಾನ್ ನಿಗ್ಲಿ (ನಾಮ ನಿರ್ದೇಶನ ಹೊಂದಿದವರು) ಅಧ್ಯಕ್ಷರೇ, I would like to bring to the notice of the Government that an outstanding sports person from Mysore from the year 1995 has been denied giving Ekalalavya Award. ಶ್ರೀಮತಿ ಈಸ್ತರ್ ಪ್ರಸನ್ನರವರು ನೂರಕ್ಕಿಂತ ಹೆಚ್ಚು gold medals ಪಡೆದುಕೊಂಡಿದ್ದಾರೆ ಆಮೇಲೆ 25ಕ್ಕಿಂತ ಹೆಚ್ಚು national level championship ನಲ್ಲಿ gold medals ಸಿಕ್ಕಿದೆ In the year 2001, she has represented France ಅದಕ್ಕೆ gold medal ಸಿಕ್ಕಿದೆ In the year 1999, 8th Asian Championship ಸ್ಪರ್ದೆಯನ್ನು ಚೈನಾದಲ್ಲಿ attend ಮಾಡಿದ್ದಾರೆ ಮತ್ತು 7th Asian Championship 1997 ನಲ್ಲಿ South Korea ನಲ್ಲಿ she has represented and in Japan also ಇಷ್ಟೆಲ್ಲಾ gold medals ಸಿಕ್ಕಿದ ಮೇಲೂ 5 times she has applied for this Ekalavya award I would like to know as to why her name was not considered ಈ ಮೈಸೂರು ಹುಡುಗಿ 5 ಸಲ apply ಮಾಡಿದರೂ this particular girl was denied Ekalavya award I would request the Government to state for what reason

this girl's name was not considered for this Ekalavya award

ಶ್ರೀ ಎಂ ಪಿ ಪ್ರಕಾಶ್ ಅಧ್ಯಕ್ಷರೇ ಮಾನ್ಯ ಸದಸ್ಯರು ಹೇಳಿರುವಂತೆ ನಮ್ಮ ರಾಜ್ಯ ರಾಷ್ಟ್ರಕ್ಕೆ ಗೌರವ ತರುವಂತೆ ಎಲ್ಲ ರಾಷ್ಟ್ರೀಯ ಅಂತರ್‌ರಾಷ್ಟ್ರೀಯ ಕೂಟಗಳಲ್ಲಿ ಅವರು ಭಾಗವಹಿಸಿದ್ದಾರೆ ಅವರನ್ನು ಏಕಲವ್ಯ ಪ್ರಶಸ್ತಿಗೆ ಪರಿಗಣಿಸುತ್ತೇವೆ ಇದರ ಬಗ್ಗೆ ಹೆಚ್ಚಿನ ವಿವರಗಳು ಬೇಕಾಗಿರುವುದರಿಂದ ಇಲಾಖೆಯವರಿಂದ ತರಿಸಿ ನಾಳೆ ಕೊಡುತ್ತೇನೆ

ಇ) ವಿಷಯ **Zero Hour mentioning** ಬಗ್ಗೆ

ಶ್ರೀ ಕೆ ಆರ್ ರಮೇಶ ಕುಮಾರ್ (ಶ್ರೀನಿವಾಸಪುರ) ಅಧ್ಯಕ್ಷರೇ, ನಿಮ್ಮ ಕಾರ್ಯಾಲಯದವರು ಸ್ವಲ್ಪ ತಿಳಿವಳಿಕಸ್ಥರಾಗಬೇಕು Zero Hour mentioning ಅಂದರೆ ಏನು? ನೆನ್ನೆ ಸದನ adjourn ಆದ ಮೇಲೆ ಇವತ್ತು ಸದನ ರೀಕನ್ವೀನ್ ಆಗುವುದರೊಳಗಾಗಿ ಯಾವುದಾದರೂ important events ಹೊರಗಡೆ ನಡೆದಿದ್ದರೆ ಅದನ್ನು ಇಲ್ಲಿ ಮೆನ್ಶನ್ ಮಾಡಲು ಅವಕಾಶ ಸಿಗದೇ ಇದ್ದಾಗ ಅಜೆಂಡ ಈಗಾಗಲೇ ಹೊರಟುಬಿಟ್ಟಿದ್ದರೆ, ಬಹಳ ತುರ್ತಾಗಿರುವ ವಿಷಯಗಳ ಬಗ್ಗೆ ಸರ್ಕಾರದ ಗಮನ ಸೆಳೆಯುವುದಕ್ಕೆ concerned members ಬಂದು ತಮ್ಮನ್ನು ಭೇಟಿ ಮಾಡಿ ನೋಟೀಸ್ ಕೊಡಬೇಕು ಅಂಥವನ್ನು ಒಂದು ಲಿಸ್ಟ್ ಮಾಡಿ ಅದಕ್ಕೆ Zero Hour mentioning ಅಂತ ಹೇಳುತ್ತಾರೆ They are matters of utmost importance They would have occurred after the adjournment of the House in the previous evening before the reconvening of the House this morning ನೀವು ಎಲ್ಲ ವಿಚಾರಗಳನ್ನು ಜೀರೋ ಅವರ್‌ಗೆ ಹಾಕುವುದು, I don't know what kind of assistance the Secretariat is giving to the Hon'ble Speaker ಯಾಕೆ ನಿಮಗೆ ಅನುಭವದ ಕೊರತೆ ಇದೆಯೇ ? ಗೊತ್ತಿಲ್ಲವೇ ಮೊದಲು ಮಾಡುತ್ತಿರಲಿಲ್ಲವೇ ? The Hon'ble Minister had to get up and give a reply to this Otherwise this matter could come up in some other way ಹೀಗಾಗಿ ನಾವು ಸದನದ

ಸಮಯವನ್ನು ಕಳೆದುಕೊಂಡುಬಿಡುತ್ತೇವೆ At least now you please, ಒಂದು ಸುತ್ತೋಲೆ ಮುಖಾಂತರ kindly give an advice to all the Members concerned and encourage them, ಬೆಳಿಗ್ಗೆ papers lay ಮಾಡಬೇಕಾದರೆ, the Hon'ble Parliamentary Affairs Minister was struggling What is your Chief-Whip doing? He should have the information, as to which Minister is coming to this House, which Minister is going to that House, which Minister is not in a position to attend the House, You must have the entire information Information must be placed before the Hon'ble Minister for Parliamentary Affairs ಅವರವರಷ್ಟಕ್ಕೆ ಮನಸ್ಸಿಗೆ ಬಂದಂತೆ adhoc basis ಮೇಲೆ ಅಸೆಂಬ್ಲಿ ನಡೆಸಿಕೊಂಡು ಹೋಗುತ್ತೀರಾ What is this? It is very unfortunate

ಶ್ರೀ ಜಯಪ್ರಕಾಶ್ ಹೆಗ್ಡೆ ಅದರ ಜೊತೆಗೆ ಒಂದರಲ್ಲಿ ಆರಾರು ಪ್ರಶ್ನೆಗಳು, ಕೆಲವದರಲ್ಲಿ ಒಂದಕ್ಕೊಂದು ಸಂಬಂಧವಿಲ್ಲ ಅದನ್ನು ಡಿಲೀಟ್ ಮಾಡಬೇಕಾಗುತ್ತದೆ ಇಂತಹ ಪರಿಸ್ಥಿತಿಯಲ್ಲಿ ಮಂತ್ರಿಗಳು ಉತ್ತರ ಹೇಳುವಾಗಲೂ ಉದ್ದ ಉತ್ತರ ಹೇಳಬೇಕಾಗುತ್ತದೆ 150 ಶಬ್ದಗಳ ಮಿತಿ ಇರಬಹುದು, ಅದಕ್ಕಿಂತ ಜಾಸ್ತಿ ಹಾಕಿಬಿಟ್ಟರೆ, ಕಷ್ಟವಾಗುತ್ತದೆ ದಯವಿಟ್ಟು ಇದನ್ನೆಲ್ಲ ಕಡಿತ ಮಾಡಬೇಕು

ಶ್ರೀ ಎಂ ಪಿ ಪ್ರಕಾಶ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಮಾನ್ಯ ರಮೇಶಕುಮಾರರು ಎತ್ತಿರುವ ವಿಚಾರ ಎಲ್ಲ ಸದಸ್ಯರಿಗೂ ಮನವರಿಕೆಯಾಗಬೇಕು ಶೂನ್ಯವೇಳೆಗೆ ಒಂದು ಪಾವಿತ್ರ್ಯತೆ ಇದೆ ಸದನ ಮುಂದೂಡಲ್ಪಟ್ಟು ಮತ್ತೆ ಸೇರುವ ಮಧ್ಯದಲ್ಲಿ ಆಗಿರುವ ಬಹಳ ಮಹತ್ವದ ವಿಷಯವನ್ನು ತಮ್ಮ ಒಪ್ಪಿಗೆ ಮೇಲೆ ಎತ್ತಲು ಶೂನ್ಯವೇಳೆ ಇರುವುದು ಆದರೆ ನಮ್ಮಲ್ಲಿ ಬಹಳ ಜನ ಯಾವಾಗಲೋ ನಡೆದದ್ದರ ಬಗ್ಗೆ ಗಮನ ಸೆಳೆಯುವ ರೀತಿ ತರುವುದು, ಸರಿಯಲ್ಲ, ಗಮನ ಸೆಳೆಯಲು ಬೇರೆ ಪ್ರಾವಿಷನ್ ಇದೆ ಶೂನ್ಯವೇಳೆ ಬಳಸಬಾರದು ಸಚಿವಾಲಯ ಯಾವರೀತಿ ಸಹಕಾರ ಕೊಡಬೇಕೋ ಹಾಗೇನೆ ನಾವೂ ಕೂಡ ಸಹಕಾರ ಕೊಡಬೇಕು

ಈ) ವಿಷಯ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಕಾಡಾನೆಗಳ ಹಾವಳಿ ಬಗ್ಗೆ

ಶ್ರೀ ಆರ್ ಧ್ರುವನಾರಾಯಣ (ಸಂತೆಮರಳ್ಳಿ) ಮಾನ್ಯ ಉಪಾಧ್ಯಕ್ಷರೇ, ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಕಾಡು ಆನೆಗಳು ವ್ಯಾಪಕವಾಗಿ ರೈತರು ಬೆಳೆದ ಬೆಳೆಗಳಿಗೆ ನುಗ್ಗಿ ಹಾನಿ ಮಾಡಿದ್ದು ಇವುಗಳ ಹಾವಳಿಯಿಂದ ಹಾನಿಗೊಳಗಾದ ಪ್ರದೇಶಗಳ ಸಂತ್ರಸ್ತ ರೈತರಿಗೆ ಪರಿಹಾರ ಹಣವನ್ನು ಬಿಡುಗಡೆಗೊಳಿಸಲು ಆಗುತ್ತಿರುವ ವಿಳಂಬದ ಬಗ್ಗೆ ಸರ್ಕಾರ ರೈತರಿಗೆ ಪರಿಹಾರವನ್ನು ಕೊಡುವುದರಲ್ಲಿ ಬಹಳಷ್ಟು ವಿಳಂಬ ಧೋರಣೆ ತಾಳುತ್ತಿದ್ದಾರೆ ದಯಮಾಡಿ ಅರಣ್ಯ ಸಚಿವರು ಇಲ್ಲೇ ಇದ್ದಾರೆ ನಿನ್ನೆ ಕೂಡ ಟಿವಿ ಯಲ್ಲಿ ತೋರಿಸಿದರು ಎರಡು ಆನೆಗಳು ಸತ್ತುಹೋಗಿವೆ ಅವುಗಳು ಬಂದು ರೈತರ ಬೆಳೆಗಳನ್ನು ಹಾಳು ಮಾಡುವುದು ಈ ರೀತಿ ಎಲ್ಲ ನಡೆಯುತ್ತಿದೆ ಮತ್ತು ರೈತರನ್ನೇ ಆನೆಗಳು ಸಾಯುವುದಕ್ಕೆ ಕರೆಂಟ್ ಕೊಟ್ಟಿದ್ದರು ಎಂದು ಹೇಳಿ ಅವರನ್ನು ಜೈಲಿಗೆ ಹಾಕುವುದು ಈ ರೀತಿ ಎಲ್ಲ ನಡೆಯುತ್ತಿದೆ ಒಂದು ಕಡೆ ಪರಿಹಾರ ಕೊಡುವುದು ವಿಳಂಬವಾಗಿದೆ, ಅದರ ಜೊತೆಗೆ ನನ್ನ ಕ್ಷೇತ್ರಕ್ಕೂ ಕಾಡಿಗೂ 45 ಕಿಲೋಮೀಟರ್ ದೂರ ಇದೆ ಆದರೂ ಕೂಡ ಅವುಗಳು ಅಲ್ಲಿಗೆ ಬಂದು ಕಬ್ಬು ಬೆಳೆದಂಧದ್ದನ್ನು ಹಾನಿ ಮಾಡಿ ಹೋಗುವುದು ಆಗುತ್ತಿದೆ ರೈತರು ಬಹಳ ಕಷ್ಟಪಟ್ಟು ಒಂದು ಎಕರೆ ಎರಡು ಎಕರೆಯಲ್ಲೋ ಬೆಳೆ ಬೆಳೆಯುತ್ತಾರೆ ಅವರ ಜೀವನಕ್ಕೆ ಅದೇ ಆಧಾರ ಆ ರೀತಿ ಆನೆಗಳು ಹೋಗಿ ಹಾನಿ ಮಾಡಿದಾಗ ಅವರಿಗೆ ತತ್‌ಕ್ಷಣ ಪರಿಹಾರವನ್ನು ಕೊಡುವ ಕೆಲಸವನ್ನು ಮಾಡಬೇಕು ದಯಮಾಡಿ ಅಧ್ಯಕ್ಷರ ಮುಖೇನ ನಾನು ವಿನಂತಿ ಮಾಡಿಕೊಳ್ಳುತ್ತೇನೆ, ಆ ರೈತರಿಗೆ ಪರಿಹಾರವನ್ನು ಕೊಡತಕ್ಕದ್ದು ಜೊತೆಗೆ ಆ ಆನೆಗಳು ಆ ರೈತರ ಪ್ರದೇಶಕ್ಕೆ ಬರದಂತೆ ತಾವು ತಡೆ ಒಡ್ಡುವ ಕೆಲಸವನ್ನು ಮಾಡಬೇಕೆಂದು ಹೇಳಿ ನಾನು ತಮ್ಮಲ್ಲಿ ಮನವಿ ಮಾಡುತ್ತೇನೆ

ಶ್ರೀ ಸಿ ಚನ್ನಿಗಪ್ಪ (ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) ಮಾನ್ಯ ಅಧ್ಯಕ್ಷರೆ, ಮಾನ್ಯ ಧ್ರುವನಾರಾಯಣ ಅವರು ಆನೆಗಳ ಹಾವಳಿ ಬಗ್ಗೆ ಮತ್ತು ಪರಿಹಾರವನ್ನು ಕೊಡುವ ಬಗ್ಗೆ ಅನೇಕ ಸಾರಿ ಗಮನವನ್ನು ಸೆಳೆದಿದ್ದರು ಅದಕ್ಕೆ ನನ್ನ ಹೇಳಿಕೆ ಈ ರೀತಿ ಇದೆ

ಮೈಸೂರು, ಚಾಮರಾಜನಗರ ಮತ್ತು ಕೊಡಗು ಜಿಲ್ಲೆಗಳ ಅರಣ್ಯ ಪ್ರದೇಶಗಳು ಸುಮಾರು 3500 ಕಾಡಾನೆಗಳ ವಾಸಸ್ಥಾನವಾಗಿರುತ್ತವೆ

ಕಾಡಾನೆಗಳು ನೀರು ಮತ್ತು ಆಹಾರಕ್ಕೋಸ್ಕರ ಒಂದು ಅರಣ್ಯ ಪ್ರದೇಶದಿಂದ ಮತ್ತೊಂದು ಅರಣ್ಯ ಪ್ರದೇಶದ ಕಡೆಗೆ ವಲಸೆ ಹೋಗುವ ರೂಡಿ ಹೊಂದಿರುತ್ತವೆ ಜನಸಂಖ್ಯೆಯ ದಟ್ಟಣೆಯಿಂದಾಗಿ ಮತ್ತು ಅರಣ್ಯ ವಿಂಗಡಣೆಯಾಗಿರುವುದರಿಂದ ಕಾಡಾನೆಗಳು ವಲಸೆ ಹೋಗುವಾಗ ರೈತರು ಬೆಳೆದ ಗದ್ದೆ ತೋಟಗಳಿಗೆ ನುಗ್ಗಿ ಬೆಳೆ ನಾಶ ಮತ್ತು ಜೀವಹಾನಿ ಮುಂತಾದ ಅಪಘಾತಗಳ ಪ್ರಕರಣಗಳು ಹೆಚ್ಚುತ್ತಿವೆ ಆನೆಗಳ ದಾಳಿ ತಡೆಗಟ್ಟಲು ಅರಣ್ಯ ಇಲಾಖೆಯು ಸಾಕಷ್ಟು ಪ್ರತಿಬಂಧಕ ಉಪಾಯಗಳನ್ನು ಹಾಕಿಕೊಂಡಿದೆ ಆನೆ ಕಂದಕ, ಸೌರ ಶಕ್ತಿ ಬೇಲಿ ಮತ್ತು ತಡೆಗೋಡೆ ಮುಂತಾದವುಗಳನ್ನು ನಿರ್ಮಿಸಲಾಗಿದೆ ಕಾಡಾನೆಗಳನ್ನು ಓಡಿಸಲು ಆನೆ ಕ್ಯಾಂಪುಗಳು ಮತ್ತು ಆನೆಗಳನ್ನು ಓಡಿಸುವ ತಂಡಗಳನ್ನು ರಚಿಸಲಾಗಿದೆ ಹಾನಿಗೊಳಗಾದ ಬೆಳೆಗಳಿಗೆ ಪ್ರಾಣಹಾನಿ, ಶಾಶ್ವತ ಅಂಗವಿಕಲತೆ ಸಂಭವಿಸಿದಾಗ ಪರಿಹಾರ ನೀಡುವ ಬಗ್ಗೆ ಸರ್ಕಾರದ ಆದೇಶ ದಿನಾಂಕ 12 2 2002 ರಲ್ಲಿ ಪರಿಹಾರ ಮೊತ್ತವನ್ನು ನಿಗಧಿಪಡಿಸಲಾಗಿತ್ತು ಈ ಮೊತ್ತವನ್ನು ಪರಿಷ್ಕರಿಸಿ ಹೆಚ್ಚಿನ ಪರಿಹಾರವನ್ನು ನೀಡಲು ದಿನಾಂಕ 17 1 2007 ರಂದು ಆದೇಶಿಸಲಾಗಿದೆ ಜೀವಹಾನಿಗೆ ಮೊದಲು ಒಂದು ಲಕ್ಷ ರೂ ಪರಿಹಾರ ನೀಡುತ್ತಿದ್ದು ಈಗ ರೂ 1 50 ಲಕ್ಷಗಳಿಗೆ ಹೆಚ್ಚಿಸಲಾಗಿದೆ ಬೆಳೆಹಾನಿ ಪರಿಹಾರ ಮತ್ತು ಶಾಶ್ವತ ಅಂಗವಿಕಲತೆ ಪ್ರಕರಣಗಳಿಗೆ ಶೇಕಡ 30ರ ಮೇಲೆ ಹೆಚ್ಚಳ ನೀಡಲಾಗಿದೆ ಇದರಿಂದ ತೊಂದರೆಗೊಳಗಾದ ರೈತರು ಮತ್ತು ಇತರರಿಗೆ ಸೂಕ್ತ ಪರಿಹಾರ ಒದಗಿಸಿದಂತಾಗುತ್ತದೆ

ಚಾಮರಾಜನಗರ ಜಿಲ್ಲೆಗೆ ಸಂಬಂಧಪಟ್ಟಂತೆ ಈ ವರ್ಷದಲ್ಲಿ ಇದುವರೆವಿಗೆ ಅಂದರೆ 31 1 2007ರ ತನಕ ಒಟ್ಟು ರೂ 14,42,580 ಪರಿಹಾರ ಈಗಾಗಲೇ ನೀಡಲಾಗಿದೆ ಇನ್ನೂ ರೂ 20 8 ಲಕ್ಷ ರೂ ಗಳ ಪರಿಹಾರ ನೀಡಲು ಬಾಕಿ ಇದೆ

ಮೈಸೂರು ಜಿಲ್ಲೆಗೆ ಸಂಬಂಧಿಸಿದಂತೆ ಇಲ್ಲಿಯವರೆವಿಗೆ ರೂ 33,32,521 ರೂ ಗಳ ಪರಿಹಾರವನ್ನು ನೀಡಲಾಗಿದೆ ಇನ್ನೂ ಸುಮಾರು 25 00 ಲಕ್ಷ ರೂ ಗಳ ಪರಿಹಾರ ನೀಡಲು ಬಾಕಿ ಇದೆ

2006–07ನೇ ಸಾಲಿನಲ್ಲಿ ಪರಿಹಾರ ನೀಡಲು 148 51 ಲಕ್ಷ ರೂ ಗಳನ್ನು ನಿಗಧಿಪಡಿಸಲಾಗಿದ್ದು ಹಣ ಪೂರ್ತಿಯಾಗಿ ಖರ್ಚಾಗಿದೆ ಆರ್ಥಿಕ ಇಲಾಖೆಯಿಂದ ಹೆಚ್ಚಿನ ಅನುದಾನ ಪಡೆದುಕೊಂಡು ಬಾಕಿ ಇರುವ ಹಣವನ್ನು ಶೀಘ್ರದಲ್ಲಿಯೇ ವಿತರಿಸಲಾಗುವುದು

ಮಾನ್ಯ ಧ್ರುವನಾರಾಯಣ ಅವರು ಅನೇಕ ಸಾರಿ demand ಮಾಡಿದ್ದಾರೆ ಅದಕ್ಕೆ ನಾವು spot ಗೆ ಬಂದು ತಡೆಗೋಡೆ ತಂತಿ ಬೇಲಿಗಳು ಮತ್ತು ಹೆಚ್ಚಿಗೆ ತಂಡಗಳನ್ನು ಹಾಕುವ ಮುಖೇನ ಆ ಒಂದು ಆನೆಗಳ ಹಾವಳಿಯನ್ನು ತಪ್ಪಿಸಬೇಕೆಂದು ಕ್ರಮ ತೆಗೆದುಕೊಂಡಿದ್ದೇವೆ ಈಗಾಗಲೇ ನಾನು ಮಾನ್ಯ ಉಪ ಮುಖ್ಯ ಮಂತ್ರಿಗಳಲ್ಲಿ ಹೆಚ್ಚಿಗೆ ಹಣವನ್ನು ಒದಗಿಸಲು ಪ್ರಯತ್ನವನ್ನು ಮಾಡಿದ್ದೇನೆ ನಮಗೆ ಈ ಸಾರಿ 4 ಕೋಟಿ ರೂ ಗಳು extra ಬೇಕಾಗುತ್ತದೆಂದು ಕೇಳಿದ್ದೇನೆ ಅದಕ್ಕೆ ಅವರು ಒಪ್ಪಿಕೊಂಡಿದ್ದಾರೆ ತಾವೇನು ಇವತ್ತು ಪ್ರಸ್ತಾಪ ಮಾಡಿದ್ದೀರಿ, ಅದರ ಪ್ರಕಾರ ಸರ್ಕಾರ ಆ ಎಲ್ಲ ಸಂತ್ರಸ್ತರಿಗೆ ಕೊಡಬೇಕಾದ ಪರಿಹಾರವನ್ನು ಕೊಡಲಾಗುವುದು

ಶ್ರೀ ಆರ್ ಧ್ರುವನಾರಾಯಣ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ ಆದರೆ ಕಳೆದ ಒಂದು ತಿಂಗಳಿಂದೀಚೆಗೆ ಬಹಳಷ್ಟು ವ್ಯಾಪಕವಾಗಿ ಆನೆಗಳ ಹಾವಳಿ ಕಂಡುಬಂದಿರುವುದು ಪತ್ರಿಕೆಗಳಲ್ಲಿ, ಟಿವಿ ಮಾಧ್ಯಮಗಳಲ್ಲಿ ಬಹಳಷ್ಟು ಈ ವಿಷಯ ಬಂದಿದೆ ಪರಿಹಾರ ಕೊಡುವುದು ಬಹಳ ವಿಳಂಬವಾಗಿದೆ ಸಚಿವರು ಪರಿಹಾರದ ಬಗ್ಗೆ ಶೀಘ್ರದಲ್ಲೇ ಕೊಡುವುದಾಗಿ ಹೇಳುತ್ತೀರಿ, ಅದರ ಬದಲು ತಾವು ಒಂದು ನಿರ್ದಿಷ್ಟವಾದ ದಿನವನ್ನು ಹೇಳಿದರೆ ಬಹಳ ಒಳ್ಳೆಯದು ಮತ್ತು ಆನೆಗಳು ಬರದಂತೆ ಅದನ್ನು ತಡೆಯುವ ಬಗ್ಗೆ ತಾವು ಕ್ರಮವನ್ನು ತೆಗೆದುಕೊಳ್ಳಬೇಕು ನಿಮ್ಮಲ್ಲಿ staff ಇಲ್ಲ ನಾವು ಮೊನ್ನೆ ಮೈಸೂರಿನಲ್ಲಿ ನಡೆದ KDP meeting ನಲ್ಲಿ ಕೇಳಿದರೆ DFO, ಮತ್ತು conservator ಅವರೇನು ಹೇಳುತ್ತಾರೆಂದರೆ "ನಮಗೆ staff ಇಲ್ಲ, ಬಹಳ ಕಷ್ಟ, ನಾವು ಆನೆಗಳ ಹಾವಳಿಯನ್ನು ತಪ್ಪಿಸುವುದು ಬಹಳ ಕಷ್ಟ" ಎಂದು ಹೇಳುತ್ತಾರೆ ದಯಮಾಡಿ ಇದರ ಬಗ್ಗೆ ಕೂಡ ತಮ್ಮಲ್ಲೇನು staff ನ ಕೊರತೆ ಇದೆ, ಅದನ್ನು ನೀಗಿಸುವ ಕೆಲಸವನ್ನು ತಾವು ಮಾಡಬೇಕು ಪರಿಹಾರವನ್ನು ತತ್ ಕ್ಷಣ ಕೊಡಬೇಕು ಇವತ್ತು ರೈತರು ಬಹಳ ಕಷ್ಟದಲ್ಲಿದ್ದಾರೆ ತಾವು ಕಳೆದ ಎರಡು ವರ್ಷದಿಂದ ಪರಿಹಾರವನ್ನು ಕೊಟ್ಟಿಲ್ಲ ಒಂದು ಜಿಲ್ಲೆಯಲ್ಲಿ 20 ಲಕ್ಷ, ಇನ್ನೊಂದು ಜಿಲ್ಲೆಯಲ್ಲಿ 25 ಲಕ್ಷ, ಕಳೆದ ಒಂದು ವರ್ಷದಿಂದ ಕೊಟ್ಟಿಲ್ಲ ಅವನ ಊಟವೇ ಅವನು ಬೆಳೆದ ಒಂದು ಎಕರೆ, ಎರಡು ಎಕರೆ ಕಬ್ಬಿನ ಮೇಲೆ ಇರುತ್ತದೆ ದಯಮಾಡಿ ತಾವು ಅದನ್ನು ಅರ್ಥಮಾಡಿಕೊಳ್ಳಬೇಕು ತತ್‌ಕ್ಷಣ

ಆ ಹಣವನ್ನು ತಾವು ಮಂಜೂರು ಮಾಡಿಸಿ ಕೊಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ

ಶ್ರೀ ಸಿ ಚೆನ್ನಿಗಪ್ಪ ಮಾನ್ಯ ಅಧ್ಯಕ್ಷರೆ, ಕೊಟ್ಟಿರುವ ಹಣವೇನು ಕಡಿಮೆ ಇದೆ, ಈಗಾಗಲೇ ಹೇಳಿದಂತೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೇನೆ ಸನ್ಮಾನ್ಯ ಉಪ ಮುಖ್ಯಮಂತ್ರಿಗಳು ಕೂಡ ನಮಗೆ ಭರವಸೆಯನ್ನು ಕೊಟ್ಟಿದ್ದಾರೆ 10 ದಿವಸದಲ್ಲಿ ಇರುವ ಬಾಕಿ ಹಣವನ್ನು ಸರ್ಕಾರ ಪೂರ್ತಿಯಾಗಿ ಆ ಸಂತಸ್ತರಿಗೆ ಕೊಡುತ್ತದೆ

ಶ್ರೀ ಜಿ ಎಸ್ ಗಡ್ಡದೇವರ ಮಠ ಮಾನ್ಯ ಅಧ್ಯಕ್ಷರೆ, ಈಗ ಅರಣ್ಯ ಪ್ರದೇಶಕ್ಕೆ ಹೊಂದಿಕೊಂಡಂತೆ ಭೂಮಿಯಲ್ಲಿ ಈ ಕಾಡಾನೆಗಳ ಹಾವಳಿ ಹೇಗೆ ಆಗಿದೆಯೋ ಹಾಗೆ ನಮ್ಮ ಬಯಲು ಸೀಮೆ ಕಡೆ ಈಗ ನಾವು ಬೆಳೆದಂಥ ಗೋವಿನ ಜೋಳವಿರಬಹುದು, ಹತ್ತಿ ಇರಬಹುದು, ಮತ್ತೆ ಶೇಂಗಾ ಇರಬಹುದು, ಇವುಗಳಿಗೆ ಮಿಕಗಳ ಕಾಟ ಭಯಂಕರವಾಗಿದೆ ಮತ್ತೆ ಹಂದಿಗಳ ಕಾಟದಿಂದ ಒಂದು ಹೊಲಕ್ಕೆ ಹೊಲವೇ ಪೂರ್ತಿ ನಾಶ ಆಗುತ್ತಿದೆ ರೈತರಿಗೆ ಲುಕ್ಸಾನು ಆದಂತಹ ಪ್ರಸಂಗದೊಳಗೆ ಅವರಿಗೇನಾದರೂ ಸರ್ಕಾರದಿಂದ ಪರಿಹಾರವನ್ನು ಕೊಡಲು ಸಾಧ್ಯವಿದೆಯೇ ಎನ್ನುವುದನ್ನು ಮಾನ್ಯ ಅರಣ್ಯ ಸಚಿವರು ಹೇಳಬೇಕು

ಶ್ರೀ ಸಿ ಚೆನ್ನಿಗಪ್ಪ ಮಾನ್ಯ ಅಧ್ಯಕ್ಷರೇ, ಆ ಬಗ್ಗೆ ಪ್ರಸ್ತಾವನೆಯನ್ನು ನಾನು ಕಳುಹಿಸಿಕೊಟ್ಟಿದ್ದೇನೆ ಈಗಾಗಲೇ ನಾವು ಹಿರಿಯ ಅಧಿಕಾರಿಗಳ ಜೊತೆಗೆ ಚರ್ಚೆಯನ್ನು ಮಾಡಿ ಇದರ ಬಗ್ಗೆ ಕೂಡ ಪರಿಹಾರ ಕೊಡಬೇಕೆಂದು ಹೇಳಿ ನಾವು ಸನ್ಮಾನ್ಯ ಮುಖ್ಯಮಂತ್ರಿಗಳನ್ನು ಆ ಬಗ್ಗೆ ಕೇಳಿಕೊಂಡಿದ್ದೇನೆ ಸನ್ಮಾನ್ಯ ಮುಖ್ಯಮಂತ್ರಿಗಳೂ ಅದಕ್ಕೆ ತಮ್ಮ ಸಮ್ಮತಿಯನ್ನು ಕೊಟ್ಟಿದ್ದಾರೆ ಕೂಡಲೇ ಕಾಡಾನೆಯಿಂದ ಏನು ರೈತರ ಬೆಳೆ ನಾಶವಾಗುತ್ತದೆ, ಅದಕ್ಕೆ ಸಂಬಂಧಪಟ್ಟಂತೆ ಏನು ಪರಿಹಾರವನ್ನು ಕೊಡುತ್ತೇವೋ ಅದೇ ರೀತಿ ಈ ವರ್ಷ ಇವುಗಳಿಗೂ ಕೂಡ ಪರಿಹಾರ ಕೊಡುವುದಕ್ಕೆ ನಾವು ಪ್ರಯತ್ನವನ್ನು ಮಾಡುತ್ತೇವೆ

8 ನಿಯಮ 69ರ ಮೇರೆಗೆ ಮುಂದುವರೆದ ಚರ್ಚೆ

ವಿಷಯ ರಾಜ್ಯದ 128 ತಾಲ್ಲೂಕುಗಳಲ್ಲಿ ಉಂಟಾಗಿರುವ ಬರ ಪರಿಸ್ಥಿತಿಯ ಬಗ್ಗೆ

ಶ್ರೀ ಜೆ ಸಿ ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) ಮಾನ್ಯ ಅಧ್ಯಕ್ಷರೇ, ಏನು ಈಗ ರಾಜ್ಯದಲ್ಲಿ ಬರಪರಿಸ್ಥಿತಿಯನ್ನು ಎದುರಿಸುವುದಕ್ಕೆ ತಯಾರಿ

ಆಗಬೇಕಾಗಿತ್ತೋ ಅದು ಆಗಿಲ್ಲವೆಂದು ಹೇಳುತ್ತಾ ಒಂದು ಮಾತನ್ನು ಹೇಳಬೇಕಾಗುತ್ತದೆ ನಾವೇನು ಹಣವನ್ನು ತರುತ್ತಿದ್ದೇವೆ, ಅಥವಾ ಖರ್ಚು ಮಾಡುತ್ತಿದ್ದೇವೆ, ಇದು ಯೋಜನಾ ಮುಂಗಡ ಎಂದು ಹೇಳಿ ನಮಗೆ ಗೊತ್ತಿರಬೇಕು Plan advance ಮಾಡಿಕೊಂಡು distress ಇರುವಾಗ ನಾವು ಖರ್ಚುಮಾಡುತ್ತೇವೆ, Distress ಇರುವಾಗ ಕೆಲವರಿಗೆ ಉದ್ಯೋಗವನ್ನು ನಿರ್ಮಾಣ ಮಾಡುತ್ತೇವೆ, ಉದ್ಯೋಗವನ್ನು ನಿರ್ಮಾಣ ಮಾಡುವುದರ ಜೊತೆ ರಾಜ್ಯಕ್ಕೆ ಒಂದು ಬಂಡವಾಳವನ್ನು ಮಾಡುತ್ತೇವೆಂದು ಒಂದು ಮಾತನ್ನು ತಮಗೆ ಹೇಳುತ್ತೇನೆ, Economics ನಲ್ಲಿ ಒಂದು ಮಾತು ಇದೆ ಯಾರು ಸಾಲವನ್ನು ತೆಗೆದುಕೊಂಡು ಬಂದು ಬಂಡವಾಳವನ್ನು ಹಾಕುತ್ತಾರೆ, ಅದು liability ಆಗುತ್ತದೆ ಯಾರು ತಮ್ಮದೇ ಬಂಡವಾಳವನ್ನು ಹಾಕುತ್ತಾರೆ, ಅದು asset ಆಗುತ್ತೆ Asset ಯಾರಿಗೆ ಆಗುತ್ತೆ ಎಂದರೆ, ಕೈಯಲ್ಲಿ ಹಣವಿದ್ದು ವಿನಿಯೋಗ ಮಾಡಿದರೆ ಹಣದ value ಕಡಿಮೆ ಯಾಗುವುದರ ಬದಲು ಒಂದು ಆಸ್ತಿ ನಿರ್ಮಾಣ ಮಾಡಿಕೊಂಡರೆ ಅದನ್ನು ಆಸ್ತಿ ಎಂದು ಹೇಳುತ್ತೇವೆ ಇನ್ನೊಬ್ಬರ ಕಡೆಯಿಂದ ಸಾಲವನ್ನು ತೆಗೆದುಕೊಂಡು ಬಂದು ಹಾಕಿ ನಾವು ಬಂಡವಾಳವನ್ನು ಹೂಡಿದರೆ ಅದು liability ಆಗುತ್ತೆ ಅದನ್ನು ನಾವು ವಾಪಸ್ ಕೊಡಬೇಕಾಗುತ್ತೆ ಅದರ ಮೇಲೆ ಬಡ್ಡಿಯನ್ನು ಕೊಡಬೇಕಾಗಿರುತ್ತೆ ಅದರ value ವನ್ನು ಅವತ್ತಿನ value ಗೆ ನಾವು ಕಟ್ಟಿಕೊಡಬೇಕಾದಾಗ exchequer ಗೆ ಹೊರೆ ಬೀಳುತ್ತದೆ ಈಗ ನಾವು ಬಂಡವಾಳವನ್ನು ವಿನಿಯೋಗ ಮಾಡುವ ಕಡೆಗೆ ಆಲೋಚನೆ ಮಾಡಬೇಕಾಗುತ್ತೆ ತಾವೇನು ಇವತ್ತು ರಾಜ್ಯದಲ್ಲಿ ಬರಗಾಲದ ಕೆಲಸಕ್ಕೆ ಹಣವನ್ನು ಖರ್ಚುಮಾಡುತ್ತಿದ್ದೀರಿ, ಯಾರೂ accountable ಇಲ್ಲ ಎನ್ನುವ ಒಂದು ಸ್ಥಿತಿಯನ್ನು ನಿರ್ಮಾಣ ಮಾಡಿಬಿಟ್ಟಿದ್ದೀರಿ ಎಷ್ಟು ಕೆಲಸವಾಯಿತು, ಏನು ಕೆಲಸವಾಯಿತು, ಏನು ಆಸ್ತಿಯನ್ನು ನೀವು ನಿರ್ಮಾಣ ಮಾಡಿದಿರಿ, ಆ ಆಸ್ತಿಯಿಂದ ನಾಳೆ ರಾಜ್ಯಕ್ಕೇನು ಪ್ರಯೋಜನ ಗೊತ್ತೇ ಇಲ್ಲ ಯಾರನ್ನು ಯಾರು ಕೇಳುವ ಹಾಗೆ ಇಲ್ಲ Scarcity ಎಂದರೆ ಖುಲ್ಲಾ ಅಂತ ಏನು ಬೇಕಾದರೂ ಮಾಡಿಬಿಡಬಹುದು, ಎಲ್ಲಿ ಬೇಕಾದರೂ ಮಾಡಿಬಿಡಬಹುದು, ಹೇಗೆ ಬೇಕಾದರೂ ಮಾಡಿಬಿಡಬಹುದು ಎಂದು ಖುಲ್ಲಾ ಎನ್ನುವ ಹಾಗೆ ಆಗಿಬಿಟ್ಟಿದೆ What asset we are creating ಅದು accountable

ಆಗಿಲ್ಲ ಮಾನ್ಯ ಪ್ರಕಾಶ್ ರವರೆ Investment made through your scarcity works, ಏನು asset create ಮಾಡುತ್ತಿದ್ದೇವೆಂದು account ಆಗುತ್ತಿಲ್ಲ ಅದೂ ಕೂಡ asset creation ಗೆ ಸಹಾಯ ಆಗಬೇಕು Asset creation through employment ಆಗಬೇಕು ಇದನ್ನು ನಾವು ಅರ್ಥಮಾಡಿಕೊಳ್ಳಬೇಕಾಗಿದೆ ವಾಸ್ತವವಾಗಿ ಈ ರಾಜ್ಯದಲ್ಲಿ ಅದು ಆಗುತ್ತಿಲ್ಲ Asset create ಮಾಡಬೇಕಾದರೆ ನಿಮ್ಮ ಬೇರೆ ಬೇರೆ source of funds ನ್ನು ಏನು ತಾವು ಗ್ರಾಮೀಣ ಪ್ರದೇಶದಲ್ಲಿ ಖರ್ಚುಮಾಡುತ್ತಿದ್ದೀರಿ, ಅದು co-ordination ಆಗುತ್ತಿಲ್ಲ ಇವತ್ತು ಖಂಡಿತಾ co-ordination ಆಗುತ್ತಿಲ್ಲ Watershed development ಮಾಡುತ್ತೀರಿ, Wasteland development ಮಾಡುತ್ತೀರಿ, ಬೇರೆ ಏನೊ ಕಾಮಗಾರಿಗಳನ್ನು ಜಿಲ್ಲಾಪರಿಷತ್ತಿನಿಂದ ತೆಗೆದುಕೊಂಡಿರುತ್ತೀರಿ, ತಾಲ್ಲೂಕು ಪಂಚಾಯಿತಿಯಿಂದ ತೆಗೆದುಕೊಂಡಿರುತ್ತೀರಿ, scarcity ಯಲ್ಲಿ ತೆಗೆದುಕೊಳ್ಳುತ್ತೀರಿ, MLA ಗಳ ಅನುದಾನದಲ್ಲಿ ತೆಗೆದುಕೊಳ್ಳುತ್ತೀರಿ, ಇದೆಲ್ಲವನ್ನು ನೀವು pool ಮಾಡಿ ಮಾಡಿದ್ದಿದ್ದರೆ ಬಹುಶ ಕರ್ನಾಟಕ ರಾಜ್ಯಕ್ಕೆ ಇನ್ನು ಹತ್ತು ವರ್ಷಗಳವರೆಗೆ development ಕಾರ್ಯಕ್ರಮ ಆಗಬೇಕಾದ್ದನ್ನು ಈಗ ನೀವು ಮಾಡಬಹುದಾಗಿತ್ತು ಆದರೆ ನೀವು ಮಾಡಲಿಲ್ಲ ಜಿಲ್ಲಾ ಪರಿಷತ್‌ನವರು ಎಲ್ಲಿ ಹಣ ಖರ್ಚು ಮಾಡುತ್ತಾರೋ, ಅದರ ಬಗ್ಗೆ ನಮಗೆ ಮಾಹಿತಿ ಇಲ್ಲ ನಾವು ಎಲ್ಲಿ ಹಣ ಖರ್ಚು ಮಾಡುತ್ತಿದ್ದೇವೋ, ಅದರ ಬಗ್ಗೆ ಅವರಿಗೆ ಮಾಹಿತಿ ಇಲ್ಲ ನಮ್ಮಿಬ್ಬರ ಮಧ್ಯೆ ತಾಲ್ಲೂಕು ಮತ್ತು ಗ್ರಾಮ ಪಂಚಾಯಿತಿಗಳಿಗೆ ಹಣ ಎಲ್ಲಿ ಹೋಗುತ್ತಿದೆ? ಅದನ್ನು Employment generate ಮಾಡಬೇಕಾದ programmesಗೆ ತಾವು ಅದನ್ನು ಇಟ್ಟಿದ್ದೀರಿ, ಆ ಕುರಿತ ಮಾಹಿತಿಯೂ ಇಲ್ಲ ಅಧ್ಯಕ್ಷರೆ, ಅನೇಕ ಸಲ ಒಂದು ಕಡೆ ಮಾಡಿದ ಕೆಲಸದ ಮೇಲೆ ಮತ್ತೊಂದು ಕಡೆ ಬಿಲ್ ತೆಗೆದುಕೊಳ್ಳತಕ್ಕಂಥಾದ್ದು ಈ ಸರ್ಕಾರದಲ್ಲಿ ನಡೆಯುತ್ತಿದೆ ನಾವು scarcityಯಲ್ಲಿ ಕೆಲಸ ಮಾಡಿಸಿದರೆ ಇನ್ಯಾರೋ ಜಿಲ್ಲಾ ಪರಿಷತ್‌ನಲ್ಲಿ ಗ್ರಾಂಟ್‌ನಲ್ಲೋ, ಮತ್ತೊಂದು ಗ್ರಾಂಟ್‌ನಲ್ಲೋ ಅದರ ಮೇಲೆ ಬಿಲ್ ಮಾಡಿಸುವುದು ಅಥವಾ ನಾವು ಕಚ್ಚಾ ರಸ್ತೆ ಮಾಡಿದ್ದರೆ, ಅದರ ಮೇಲೆ gravel ಹಾಕಿ ಬಿಲ್ ತೆಗೆದುಕೊಳ್ಳುವಂಥ ಸ್ಥಿತಿಗಳನ್ನು ನಿರ್ಮಾಣ ಮಾಡಿರುವುದರಿಂದ ರಾಜ್ಯದ ಬೊಕ್ಕಸಕ್ಕೆ

ಹೇರಳವಾಗಿ ನಷ್ಟವಾಗುತ್ತಿದೆ ನಾವೆಲ್ಲರೂ ಖರ್ಚು ಮಾಡುತ್ತಿರುವುದು ಈ ರಾಜ್ಯದ ತೆರಿಗೆದಾರರ ದುಡ್ಡನ್ನು ಎಲ್ಲಾದರೂ ಒಂದು ಕಡೆ asset ಮಾಡುವ ಕಾರ್ಯಕ್ರಮ ಮಾಡಬೇಕಾದರೆ Whole planning system ಅನ್ನು ತಾವು coordinate ಮಾಡುವುದಕ್ಕೆ ಕ್ರಮ ಕೈಗೊಳ್ಳಬೇಕಾಗುತ್ತದೆ ನಾವು ಬಹಳ ಮನಸ್ಸು ನೊಂದು ಹೇಳುತ್ತಿದ್ದೇವೆ ರಾಜ್ಯದಲ್ಲಿ ಈ ಯೋಜನೆ ಇಲ್ಲ, ಯೋಜನಾ ಇಲಾಖೆ ಇಲ್ಲ, ಯೋಜನಾ ಪ್ರಮಾಣ ಗೊತ್ತಿಲ್ಲ ಏನು ಮಾಡಬೇಕಾಗಿತ್ತು ಎಂಬುದು ನಮಗೆ ನಿಖರವಾಗಿ ಗೊತ್ತಿಲ್ಲ ಮಂತ್ರಿಗಳಾದಿಯಾಗಿ everything is at our discretion ಎಂದು ಕೆಲಸ ನಡೆಯುತ್ತಿದೆ ಒಂದು ಜಿಲ್ಲೆಗೆ ಏನು ಕೆಲಸಗಳಾಗುತ್ತಿವೆ, ಇನ್ನೊಂದು ಜಿಲ್ಲೆಗೆ ಏನು ಕೆಲಸಗಳಾಗುತ್ತಿದೆಯೆಂದು ಎಲ್ಲಾದರೂ ಕುಳಿತುಕೊಂಡು ತಾವು ತಾಳೆ ಮಾಡಿ ನೋಡಿದರೆ, ಒಂದು ಜಿಲ್ಲೆಗೂ ಇನೊಂದು ಜಿಲ್ಲೆಗೂ ಸಮುದ್ರದಷ್ಟು ವ್ಯತ್ಯಾಸ ಕಾಣುತ್ತಿದೆ ಯಾರಿಗೆ ಶಕ್ತಿ ಇದೆ, ಯಾರಿಗೆ ಮಾತನಾಡುವುದಕ್ಕಾಗುತ್ತದೆಯೋ, ಯಾರಿಗೆ ಸ್ವಲ್ಪ ಮುನಿಸಿಕೊಳ್ಳುವುದಕ್ಕೆ ಬರುತ್ತದೆಯೋ, ಅವರು ಇದನ್ನೆಲ್ಲಾ ಕೊಳ್ಳೆ ಹೊಡೆದುಕೊಂಡು ಹೋಗಬಹುದೆನ್ನುವ ಸ್ಥಿತಿ ಇವೊತ್ತು ನಿರ್ಮಾಣವಾಗಿದೆ ನಾವೆಲ್ಲರೂ ಈ ರಾಜ್ಯದ ಶಾಸಕರು ನಾವು ಗೆಲ್ಲುವುದಕ್ಕೆ ಒಂದು constituency ಇದೆ ನಾವು ನಮ್ಮ ಕ್ಷೇತ್ರಕ್ಕೆ ಮಾತ್ರ ಶಾಸಕರಾಗಿ ಇಲ್ಲಿ ಕುಳಿತುಕೊಳ್ಳುವುದಕ್ಕಿಂತ ದೊಡ್ಡ ಮೂರ್ಖತನ ನಮಗೆ ಮತ್ತೊಂದಿಲ್ಲ ಗೆದ್ದು ಬರುವುದಕ್ಕೆ ಒಂದು ಕ್ಷೇತ್ರ, ಜನಸಂಖ್ಯೆ ನಿಗದಿಯಾಗಿರುವುದು ಬಿಟ್ಟರೆ, ನಾವೆಲ್ಲರೂ ಯಾರು ಸರ್? ನಾವೆಲ್ಲರೂ ಕರ್ನಾಟಕದ ಶಾಸಕರು ಕರ್ನಾಟಕದ ಅಭಿವೃದ್ಧಿ ಸಮಗ್ರವಾಗಿ ಎಲ್ಲಿ ಆಗುತ್ತಿದೆ? ಇಲ್ಲಿಂದ ಒಂದು ರಸ್ತೆ ಅಲ್ಲಿವರೆಗೆ ಹೋಗುತ್ತದೆಂದರೆ, bottlenecks ಆದರೂ clear ಮಾಡುತ್ತೇವೆಯೇ? ಅವರವರ ಕ್ಷೇತ್ರದಲ್ಲಿ ಕೆಲಸ ಮಾಡುವ ಸ್ಥಿತಿಯನ್ನು ನಿರ್ಮಾಣ ಮಾಡಿದ್ದೇವೆ ಬರಗಾಲದ ಕೆಲಸ ಕೂಡ ಹಾಗೇ ಆಗಿದೆ ಅವರವರ ವಿವೇಚನೆಯಂತೆ ಆಗುತ್ತಿದೆ ಬಹಳ ದುಃಖಪಟ್ಟು ಇದನ್ನು ಹೇಳಬೇಕಾಗುತ್ತದೆ ಕಳೆದ ಸಲ ಸಣ್ಣ ನೀರಾವರಿಗೆಂದು ಎಷ್ಟು ಹಣ ಖರ್ಚಾಗಿದೆಯೋ, ಅದರ ಬಗ್ಗೆ ಸನ್ಮಾನ್ಯ ಪ್ರಕಾಶ್‌ರವರು ತನಿಖೆ ನಡೆಸಬೇಕು 60% of the relief grant in the previous Government was spent on Minor Irrigation works ಆ ಹಣ ಏನಾದರೂ ಇದ್ದಿದ್ದರೆ, ಎಲ್ಲಾ ಕೆರೆಗಳ ಹೂಳು

ತೆಗೆಯಬಹುದಾಗಿತ್ತು ಆದರೆ, ಆಗಲಿಲ್ಲ ಹಣ ಖರ್ಚಾಗಿದೆ ಅವ್ರೊತ್ತು ಯಾಕೋ ತೀರ್ಮಾನ ತೆಗೆದುಕೊಂಡು ರಸ್ತೆಗಳಿಗೆ ನಾವು ಹಣ ಕೊಡುವುದಿಲ್ಲವೆಂದು ಹೇಳಿದರು ಅವ್ರೊತ್ತು ಯಾಕೋ ತೀರ್ಮಾನ ತೆಗೆದುಕೊಂಡು 60 40 ratioದಲ್ಲಿ ಇರಬೇಕಾದುದನ್ನು 100% man power generate ಮಾಡುವುದಕ್ಕೆ ನಾವು ಖರ್ಚು ಮಾಡುತ್ತೇವೆಂದು ಹೇಳಿದಿರಿ ಅಲ್ಲಿಂದ ಇವ್ರೊತ್ತಿನವರೆಗೂ ನೀವು ಒಂದು ನಿಖರವಾದ ತೀರ್ಮಾನ ತೆಗೆದುಕೊಳ್ಳಲೇ ಇಲ್ಲ

ಎರಡನೆಯದಾಗಿ, ಬರೀ ಸುಳ್ಳು ಹೇಳುತ್ತಿರುವುದು, ನಾವು ಬರೀ ತಪ್ಪು ಲೆಕ್ಕವನ್ನು ಕೊಡುತ್ತಿರುವುದು ಇವ್ರೊತ್ತು ನಾವೆಲ್ಲರೂ ಜೆಸಿಬಿಯಲ್ಲಿ ಕೆಲಸ ಮಾಡಬೇಕಾಗಿದೆ ಅದರಲ್ಲಿ ಎರಡು ಮಾತಿಲ್ಲ ನಮಗೆ ಆಳುಗಳು ಸಿಗುತ್ತಾರೆ ನಾವು ಯಥೇಚ್ಛವಾಗಿ ಕಾಮಗಾರಿಗಳನ್ನು ಮಾಡಿಸುತ್ತಿದ್ದೇವೆಂದು ಯಾರಾದರೂ ಇಲ್ಲಿ ಭಾಷಣ ಮಾಡಿದರೆ, ಅವರು ನಮಗೆ ಒಂದಿಷ್ಟು ಕೆಲಸಗಾರರನ್ನು ಕಳಿಸಿಕೊಟ್ಟರೆ, ನಾವು ಸಂತೋಷಪಡುತ್ತೇವೆ ನಮ್ಮಲ್ಲೆಲ್ಲಾ ಇವ್ರೊತ್ತು ಈ ದುಡ್ಡಿನಲ್ಲಿ ಕನಿಷ್ಠ ಆಸ್ತಿಯಾದರೂ ನಿರ್ಮಾಣವಾಗಲಿ ಇವ್ರೊತ್ತು ಜೆಸಿಬಿಯಲ್ಲಾದರೂ ಕೆಲಸ ಮಾಡಿ ಏನಾದರೂ ಮಾಡೋಣ ನಮಗೆ ಬಂದಿರುವ grant ಅನ್ನು utilize ಮಾಡೋಣವೆನ್ನುವ ಪರಿಸ್ಥಿತಿ ನಿರ್ಮಾಣವಾಗಿದೆ ಇಂತಹ ಕಡೆಗಳಲ್ಲಿ ನೀವು ವ್ಯವಸ್ಥೆಯನ್ನು ಸ್ವಲ್ಪ ಚೆಕ್ ಮಾಡಬೇಕು ಮೂರನೇ ಒಂದು ಭಾಗದಷ್ಟು ಹಣವನ್ನು ನೀವು ಉಳಿಸಬಹುದಾಗಿತ್ತು ಮೂರನೇ ಒಂದು ಭಾಗದಷ್ಟು ಹಣವನ್ನು developmentಗೆ ಬಳಸಬಹುದಾಗಿತ್ತು ಒಂದು ಜೆಸಿಬಿಯಲ್ಲಿ ಲೆಕ್ಕ ಮಾಡಿಕೊಡುವುದಕ್ಕೂ ಆಳುಗಳು ಲೆಕ್ಕ ಮಾಡಿಕೊಡುವುದಕ್ಕೂ ಬಹಳ ವ್ಯತ್ಯಾಸವಿದೆ ನಾನು ಒಂದು ಸಲ ಇಲ್ಲಿ ಹೇಳಿದ್ದೆ ಒಂದು ಕೃಷಿ ಹೊಂಡ, ನೀರಿನ ಹೊಂಡ ಮಾಡುವುದಕ್ಕೆ ಮೂರು ಮೀಟರ್ ಅಥವಾ ಬೇರೆ ಏನಾದರೂ ಕೆಲಸವನ್ನು ಮನುಷ್ಯರು ಮಾಡಿದರೆ ಹತ್ತು ಸಾವಿರ ರೂಪಾಯಿಗಳು ಬರುತ್ತದೆ ಜೆಸಿಬಿಯಲ್ಲಿ ಮಾಡಿದರೆ ಆರೂವರೆ ಸಾವಿರ ರೂಪಾಯಿಗಳಿಗಾಗುತ್ತದೆ ಪ್ರಕಾಶ್‌ರವರೆ ನಮಗೆ ಹೊಂಡ ಕೊಡಿ, ನಾವು ಗುಂಡಿ ತೆಗೆಯುತ್ತೇವೆಂದು ಎಲ್ಲರೂ ನಮಗೆ ಮುಗಿಬಿದ್ದುಬಿಟ್ಟರು ತಕ್ಷಣ ನಾವು ಇಲ್ಲ, ಜನರನ್ನು ಕರೆದುಕೊಂಡು ಬಂದು ಮಾಡಿ ಎಂದರೆ, ಒಬ್ಬರೂ ಬರಲಿಲ್ಲ! ಅದು ಇಲಾಖೆಯವರಿಗೆ ಗೊತ್ತು, ಕಾಶೆಂಪೂರ್‌ರವರಿಗೆ ಗೊತ್ತು

ಅದನ್ನು ಐದಾರು ಸಾವಿರಕ್ಕೆ, ಆರು ಸಾವಿರಕ್ಕೆ ಇಳಿಸಿಬಿಟ್ಟ ನಂತರ ಇನ್ಯಾರೂ ಬರುವುದಿಲ್ಲ ಈ ರಾಜ್ಯದ ಹಣವನ್ನು ಹೀಗೆ ಯಧೇಚ್ಛವಾಗಿ distress ಹೆಸರಿನಲ್ಲಿ, ಬರಗಾಲದ ಹೆಸರಿನಲ್ಲಿ ಅನವಶ್ಯಕವಾಗಿ ಖರ್ಚಾಗುತ್ತಿರುವುದನ್ನು ತಾವು ತಡೆಯಬೇಕು ಮತ್ತು ಆದ್ಯತೆಗಳನ್ನು ತಾವು ಸ್ಪಷ್ಟವಾಗಿ ಕೊಡಬೇಕು ಆದ್ಯತೆಗಳೇನು? ಆದ್ಯತೆ ನಂ 1 ಆದ್ಯತೆಯನ್ನು ಮಾನವೀಯವಾಗಿ ಕುಡಿಯುವ ನೀರಿಗೆ ಕೊಡಬೇಕು ಕುಡಿಯುವ ನೀರಿಲ್ಲ ಎನ್ನುವ ಕಾಲದಲ್ಲಿ ಕಾಮಗಾರಿಗಳು ಏಕೆ ಆಗಬೇಕೋ, ಗೊತ್ತಿಲ್ಲ ಹಿಂದಿನ ಸಲ ಸರ್ಕಾರದಲ್ಲಿ ಇಲ್ಲೊಂದು ನಿರ್ಧಾರವಾಗಿತ್ತು ಕುಡಿಯುವ ನೀರಿಗೆ task force ಮಾಡಿದ ದಿವಸ ತಾಲ್ಲೂಕು ಪಂಚಾಯಿತಿ ಗ್ರಾಂಟ್ ಇರಲಿ, ಜಿಲ್ಲಾ ಪಂಚಾಯಿತಿ ಗ್ರಾಂಟ್ ಇರಲಿ, ಯಾವುದೇ ಗ್ರಾಂಟ್ ಅನ್ನು task forceನವರು convert ಮಾಡಿಕೊಳ್ಳಬಹುದು, divert ಮಾಡಿಕೊಂಡು drinking waterಗೆ facilitate ಮಾಡಿಕೊಳ್ಳಬಹುದೆಂದು ಆದೇಶವಾಗಿದೆ ನಿಜವಾಗಿಯೂ ಕೆಲಸ ಮಾಡಿದೆವು ಆದರೆ, ಅನಂತರ ಕಾಲದಲ್ಲಿ task forceಗೆ ತಾವು ಒಂದು ಡೇಟ್ ಕೊಟ್ಟಿದ್ದಿರಿ ಆ ಡೇಟ್ abandon ಆಗಿಹೋಯಿತು ಈಗ task force ಜಾರಿಯಲ್ಲಿಲ್ಲವೆಂದು ಭಾವಿಸಿಕೊಂಡಿದ್ದೇನೆ ಸನ್ಮಾನ್ಯ ಮಂತ್ರಿಗಳು ಹೇಳಬೇಕು Task force ಇದೆಯೋ ಇಲ್ಲವೋ ಎಂಬುದನ್ನು ಹೇಳಬೇಕು ಅದರ ಬಗ್ಗೆ ನಮಗೆ ಗೊತ್ತಿಲ್ಲ Abandon ಆದನಂತರ ಈಗ ಯಾರು ಕುಡಿಯುವ ನೀರಿನ ವ್ಯವಸ್ಥೆ ಮಾಡುವುದು? ನಿಮ್ಮ ಜಿಲ್ಲಾ ಪಂಚಾಯತ್ ಪ್ರೋಗ್ರಾಂ ಮುಗಿದುಹೋಯಿತು ನಿಮ್ಮ ಗ್ರಾಮ ಪಂಚಾಯಿತಿಯಲ್ಲಿ maintenanceಗೆ ಮಾತ್ರ ಕೊಟ್ಟಿದ್ದೀರಿ ಇವೊತ್ತು ಕುಡಿಯುವ ನೀರಿಗೆ ತಕ್ಷಣ ಏನಾದರೂ ಈ ಸರ್ಕಾರ ಹಣವನ್ನು ಬಿಡುಗಡೆ ಮಾಡದೇ ಹೋದರೆ, ಹಳ್ಳಿಯಲ್ಲಿ ಬದುಕಿರುವ ನಾವುಗಳು ಬಹಳ ಕಷ್ಟವಾದ ಪರಿಸ್ಥಿತಿಗೆ ಬರುತ್ತೇವೆ ನಮಗೆ ಏನು ಮಾಡಬೇಕೆಂದು ತಿಳಿಯದಿರುವ ಸ್ಥಿತಿಗೆ ಬಂದಿದ್ದೇವೆ ಮಾನ್ಯ ಧರ್ಮಸಿಂಗ್‌ರವರು ಇವತ್ತು ಈ ಕಡೆ ಕುಳಿತಿರಬಹುದು

ಶ್ರೀ ಎಂ ಬಿ ಪಾಟೀಲ್ ಆರು ವರ್ಷದ್ದು 4 ಕೋಟಿ ಒಂದೊಂದು ಜಿಲ್ಲೆಯಲ್ಲಿ ನೀಡಲಾಗಿದೆ ಈಗ ಬಿಜಾಪುರ ಜಿಲ್ಲೆಯನ್ನೇ ಉದಾಹರಣೆ ತೆಗೆದುಕೊಳ್ಳಿ ನಾಲ್ಕು ಕೋಟಿ ರೂಪಾಯಿಗಳಲ್ಲಿ ಪ್ರತಿಯೊಂದು ಕ್ಷೇತ್ರಕ್ಕೂ 7 ಲಕ್ಷದಂತೆ ಬಿಡುಗಡೆ ಮಾಡಿದ್ದಾರೆ ಅಂದರೆ, ಒಂದು ಕಂತು ಮಾತ್ರ

ಬಿಡುಗಡೆ ಮಾಡಿದ್ದಾರೆ ಹೀಗಾಗಿ, ಇನ್ನೂ 3 ಕೋಟಿ ರೂಪಾಯಿಗಳಷ್ಟು ಹಣ ಬಿಜಾಪುರ ಜಿಲ್ಲೆಯಲ್ಲಿ ಪೆಂಡಿಂಗ್ ಉಳಿದಿದೆ ಅಲ್ಲಿನ ಜಿಲ್ಲಾ ಪಂಚಾಯತ್‌ನವರು ಒಂದು resolution pass ಮಾಡುತ್ತಾರೆ ಉಳಿದ ಸ್ಕೀಮ್‌ನಲ್ಲಿ ಏನು ಹಣ ಬರುತ್ತದೆ, ಅದನ್ನು task forceಗೆ ಬಿಡುಗಡೆ ಮಾಡಬಾರದೆಂದು resolution pass ಮಾಡಿದ್ದಾರೆ ಇದು ಅಲ್ಲಿನ ವಾಸ್ತವ ಸ್ಥಿತಿಯಾಗಿದೆ

ಶ್ರೀ ಹೆಚ್ ನಿಂಗಪ್ಪ ಮಾನ್ಯ ಅಧ್ಯಕ್ಷರೆ, ಮಾಧುಸ್ವಾಮಿಯವರು ಹೇಳಿದಂತೆ, ಈಗ ಶಾಸಕರ ನೇತೃತ್ವದಲ್ಲಿ ಕಾರ್ಯಪಡೆ ರಚನೆಯಾಯಿತು ಈಗ ತುಮಕೂರಿನಲ್ಲಿ RDPR ಅಧಿಕಾರಿಗಳು ಹೋಗಿ, ಶಾಸಕರ ನೇತೃತ್ವದಲ್ಲಿ ಕೋಟಿಗಟ್ಟಲೆ ಕಾಮಗಾರಿಗಳನ್ನು ಏನು ಕೈಗೆತ್ತಿಕೊಂಡಿದ್ದೀರಿ, ಬಿಡುಗಡೆ ಮಾಡಿರತಕ್ಕಂಥಾದ್ದು ಕೇವಲ ಏಳೂವರೆ ಲಕ್ಷ ಮಾತ್ರ ಇದರಲ್ಲಿ ಏನೋ ಆಗಿದೆ, ಅದಕ್ಕೋಸ್ಕರ, ಇದನ್ನು ತನಿಖೆ ಮಾಡಬೇಕೆಂದು ಸಂಬಂಧಪಟ್ಟ ಎಲ್ಲಾ ಕಡತಗಳನ್ನೂ ಬೆಂಗಳೂರಿಗೆ ತಂದಿದ್ದಾರೆ ಇವೊತ್ತು ಕಾರ್ಯಪಡೆ ಕೆಲಸ ಸ್ಥಗಿತಗೊಂಡಿದೆ ಜೊತೆಗೆ, ಮಾಧುಸ್ವಾಮಿಯವರು ಹೇಳಿದಂತೆ ಕಾರ್ಯಪಡೆ ಅಸ್ತಿತ್ವದಲ್ಲಿ ಇದೆಯೋ ಇಲ್ಲವೋ ಎಂದು ನಮಗೆ ಒಂದು ತರಹದ ಅನುಮಾನ ಬರುವ ರೀತಿಯಲ್ಲಿ ಅಧಿಕಾರಿಗಳು ನಡೆದುಕೊಳ್ಳುತ್ತಾರೆ ಇವೊತ್ತು ಅಂತರ್ಜಲದ ಮಟ್ಟ ಸಾಕಷ್ಟು ಕುಸಿದಿರುವುದರಿಂದ ಕಾರ್ಯಪಡೆ ವತಿಯಿಂದ ನಾವು ಹೋದ ವರ್ಷ ಎಷ್ಟು ಕೊಳವೆಬಾವಿಗಳನ್ನು ಕೊರೆಸಿದ್ದೆವು, ಅವೂ ಕೂಡ ಇವೊತ್ತು ಬತ್ತಿಹೋಗುತ್ತಿವೆ ಮತ್ತು ಹೊಸದಾಗಿ ಕೊಳವೆಬಾವಿಗಳನ್ನು ಕೊರೆಸಿ ಜನರಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕಾಗಿದೆ ಆದರೆ, ಇವೊತ್ತು ಅಧಿಕಾರಿಗಳು ಈ ಕಡತಗಳನ್ನು ಬೆಂಗಳೂರಿಗೆ ತಂದಿರುವುದರಿಂದ ಅಲ್ಲಿ ಕಾರ್ಯಪಡೆ ಕೆಲಸಗಳು ಮಂಜೂರಾಗಿರುವುದು ಮತ್ತು ಜಿಲ್ಲಾ ಪಂಚಾಯತ್‌ನಿಂದ ಅನುಮೋದನೆಯಾಗಿರುವ ಕಾಮಗಾರಿಗಳು ಕೂಡ ಇವೊತ್ತು ಸ್ಥಗಿತಗೊಂಡಿದೆ ಆದುದರಿಂದ, ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ಗಮನಹರಿಸಿ ಇವೊತ್ತು ಕಾರ್ಯಪಡೆಯಿಂದ ಏನು ಕೆಲಸಗಳು ಆಗಬೇಕಾಗಿತ್ತೋ, ಅದನ್ನು ತ್ವರಿತವಾಗಿ ಮಾಡಿಕೊಡುವುದಕ್ಕೆ ತಾವು ಒಂದು ಸೂಚನೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ

ಶ್ರೀ ಡಿ ಆರ್ ಪಾಟೀಲ್ ಸನ್ಮಾನ್ಯ ಅಧ್ಯಕ್ಷರೆ, ನಮ್ಮ ಕಡೆ ಸತತವಾಗಿ ಬರಗಾಲ ಇದ್ದುದರಿಂದ ನೀರಿನ ಸಂಗ್ರಹಣೆ ಕೆಲಸ ಮಾಡಬೇಕೆಂದು ಎಲ್ಲಾ ಗ್ರಾಮಸ್ಥರಿಗೂ ಈಗ ಅನಿಸುತ್ತಿದೆ ಅದಕ್ಕೋಸ್ಕರ, ಬಹಳ ಊರಿನೊಳಗೆ ಊರಿನಲ್ಲಿ ಒಂದು ಕೆರೆ ಮಾಡಿ ಎಂದು ಎಲ್ಲರೂ ಈಗ ಬರುತ್ತಾರೆ ಜನರನ್ನು ಏರ್ಪಾಡು ಮಾಡಿ ಕೆರೆ ಮಾಡಿಸುವುದೆಂದರೆ, ಅದು ಆಗಲಾರದ ಕೆಲಸ ದಯವಿಟ್ಟು ಒಂದು ಊರಿಗೊಂದು ಕೆರೆ ಸಲುವಾಗಿ ನೀವು ಜೆಸಿಬಿ ಉಪಯೋಗಿಸಿಕೊಳ್ಳುವಂತೆ ಮಾಡಿ ಆದುದರಿಂದ, ಮಾಧುಸ್ವಾಮಿಯವರು ಹೇಳಿದಂತೆ ⅓ amountನಲ್ಲಿ ಜನರನ್ನು ಏರ್ಪಾಡು ಮಾಡಿ ಏನು ಮಾಡುತ್ತೀರಿ, ಆ asset ಅನ್ನು ನಾವು ⅓ amountನಲ್ಲಿ create ಮಾಡಿದಂತಾಗುತ್ತದೆ ಮೇಲಾಗಿ ಒಂದು ಕೆರೆ ಎಂದರೂ ಮುಂದಿನ ಮಳೆಗಾಲ ಮುಗಿಯುವುದರೊಳಗಾಗಿ ಊರಿಗೊಂದು ಕೆರೆಯನ್ನು ನಾವು ರಚನೆ ಮಾಡುವುದಕ್ಕೆ ಸಾಧ್ಯವಾಗುತ್ತದೆ ಅದಕ್ಕೋಸ್ಕರ, ದಯವಿಟ್ಟು ಇದನ್ನು ವಿಶೇಷವೆಂದು ಪರಿಗಣಿಸಿ ಬರ ಪರಿಹಾರದಲ್ಲಿ ಊರಿಗೊಂದು ಕೆರೆ ನಿರ್ಮಿಸುವುದಕ್ಕೆ ಜೆಸಿಬಿ ಉಪಯೋಗಿಸಿ ನಿರ್ಮಾಣ ಮಾಡುವುದಕ್ಕೆ ಅವಕಾಶ ಕಲ್ಪಿಸಿಕೊಡಬೇಕೆಂದು ಒತ್ತಾಯ ಮಾಡುತ್ತೇನೆ

ಶ್ರೀ ಜೆ ಸಿ ಮಾಧುಸ್ವಾಮಿ ಬರೀ ಕೆರೆಗಷ್ಟೇ ಅಲ್ಲ, even watershed slack ಆಗಿರುವುದು, ಇವೊತ್ತು man power ಇಲ್ಲವೆಂದೇ ಇದನ್ನು ಸ್ವಲ್ಪ ಎಲ್ಲಿಯಾದರೂ ಬದಲಾವಣೆ ಮಾಡದೇ ಹೋದರೆ, ಕೇಂದ್ರ ಸರ್ಕಾರ ನಿಮಗೆ watershedನಲ್ಲಿ ಸುಜಲಾ ಕಾರ್ಯಕ್ರಮದಲ್ಲಿ ಏನು ಹಣ ಕೊಟ್ಟಿದೆ, ಅದರಲ್ಲಿ ನೀವು ಅರ್ಧ ಭಾಗದಷ್ಟು ಹಣ ಕೂಡ ಖರ್ಚು ಮಾಡುವುದಕ್ಕಾಗುವುದಿಲ್ಲ strict ಆಗಿ ನೀವು ಮನುಷ್ಯರನ್ನೇ ಕರೆದುಕೊಂಡು ಬರಬೇಕೆಂದರೆ, ಆ seriousness ಇಲ್ಲ ನಿಜ, ಒಂದು ಕಡೆ ಅವರಿಗೆ ನಾವು ಕೆಲಸ ಕೊಡಬೇಕು ಪ್ರಕಾಶ್‌ರವರು, ನಾನು, ಚಿತ್ರದುರ್ಗದವರು, ಹೊಸಪೇಟೆಯವರು labour ಕಲೆ ಹಾಕುವುದು ಅಷ್ಟೊಂದು ಸುಲಭವಾಗಿಲ್ಲ Mining ನಡೆಯುವ ಭಾಗದಲ್ಲಂತೂ ಬಹಳ ಕಷ್ಟ ಇದೆ ತಮಗೆ Practical difficulty ಗೊತ್ತು ಅವರು mining ಕೆಲಸಕ್ಕೆ ಹೋದರೆ ದಿನಕ್ಕೆ 150, 200 ರೂಪಾಯಿಗಳಷ್ಟು ದಿನಗೂಲಿ ಸಿಗುತ್ತದೆ ನೀವು 63 50 ರೂಪಾಯಿ ಲೆಕ್ಕ ಮಾಡಿಕೊಟ್ಟರೆ ಇಲ್ಲಿಗೆ ಯಾರು ಬರುತ್ತಾರೆ? ಇದರ

ಬಗ್ಗೆ ಸುಮ್ಮನೆ ನಾವು ಮಾತನಾಡಿಕೊಂಡು ಹೋಗಬಹುದಷ್ಟೆ ಅದಕ್ಕೋಸ್ಕರ, ತಾವು ಸರ್ಕಾರ ನಡೆಸುವವರು ನಿರ್ದಿಷ್ಟವಾದ ತೀರ್ಮಾನಗಳನ್ನು ತೆಗೆದುಕೊಳ್ಳಬೇಕು ನಿಜ, ನಾವು ಇದನ್ನು ಅವರಿಗೆ ಕೂಲಿಗೇನೆ ಕೊಡಬೇಕಾಗಿತ್ತು ಕೆಲವು ಕಡೆ ಆಗುವುದಿಲ್ಲವೆಂದಾಗ ನೀವು ಸ್ವಲ್ಪ ಸಡಿಲಗೊಳಿಸಿ machine use ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು ಮತ್ತೆ ನಾನು ನಿಮಗೆ ಒತ್ತಾಯ ಮಾಡುವುದೇನೆಂದರೆ, ಜಿಲ್ಲಾ ಪರಿಷತ್ ಇರಲಿ, ಗ್ರಾಮ ಪಂಚಾಯತ್ ಇರಲಿ, ಅಥವಾ ನಾವು ಏನು ಕಾರ್ಯಪಡೆ ಅಥವಾ Calamity Relief Fundನಲ್ಲಿ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೇವೆ, ಅದನ್ನು ಇವೊತ್ತು ಯಾರಾದರೂ monitor ಮಾಡಬೇಕಾಗಿದೆ ಎಲ್ಲಿ ಆಗುತ್ತಿದೆ, ಯಾರು ಮಾಡುತ್ತಿದ್ದಾರೆ ಒಂದೇ ಕಡೆ ಏಕೆ ಆಗುತ್ತಿದೆ, ಇನ್ನೊಂದು ಕಡೆ ಏಕೆ ಆಗುತ್ತಿಲ್ಲವೆಂದು ನೀವು ಈವತ್ತು ಕೇಳಬೇಕಾಗಿತ್ತು ಇವತ್ತು ಸಹ ನಾವು ಇಷ್ಟು ಮಾತನಾಡುತ್ತಿದ್ದೇವೆ ನಮ್ಮ ತುಮಕೂರು ಜಿಲ್ಲಾ ಪಂಚಾಯಿತಿಯಲ್ಲಿ, ಒಂದೊಂದು ಜಿಲ್ಲಾ ಪಂಚಾಯಿತಿ ಕ್ಷೇತ್ರಕ್ಕೆ 45 ರಿಂದ 46 ಲಕ್ಷ ಖರ್ಚು ಮಾಡಲು ಹಣ ಇದೆ ಅದರಲ್ಲಿ drinking water, roads ಮತ್ತು ಕಟ್ಟಡಗಳೂ ಸೇರಿದೆ ಇಷ್ಟಕ್ಕೆ ನೀವು ಒಂದು programme ಮಾಡಿಕೊಡಿ ಎಂದು ಕೇಳಿಬಿಟ್ಟರು ನೀವು ಕೊಟ್ಟಿದ್ದೀರಿ ಆ ದುಡ್ಡಾದರು ನಮ್ಮ ಹತ್ತಿರ ಇದ್ದಿದ್ದರೆ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಬಹುದಾಗಿತ್ತು ಅವರಿಗೆ ಬಂದಿದ್ದ ಒಂದು ರೂಪಾಯಿ ಹಣವನ್ನು task forceಗೆ divert ಮಾಡುವುದಕ್ಕೆ ಒಪ್ಪಿಕೊಳ್ಳಲಿಲ್ಲ ಮಾನ್ಯ ಸತ್ಯನಾರಾಯಣ್ ರವರು ನೀವು ಎಷ್ಟಾದರೂ ಹಣವನ್ನು ಖರ್ಚು ಮಾಡಿ ಸರ್ಕಾರ ದುಡ್ಡನ್ನು ಕೊಡುತ್ತದೆ ಎಂದು ಶಾಸನ ಸಭೆಯಲ್ಲಿ ಹೇಳಿದ್ದಕ್ಕೆ ನಾವುಗಳು ಅಲ್ಲಿ ಬೋರನ್ನು ಕೊರೆಸಿದೆವು ಅದು record ನಲ್ಲಿದೆ No limit, whatever you want ನೀವು ಹಾಕಿಸಿಕೋಂಡು ದುಡ್ಡಿಗೆ ನಮ್ಮ ಹತ್ತಿರ ಬನ್ನಿ ಎಂದು ಹೇಳಿದ್ದರು ಈಗ ಬೋರನ್ನು ಹಾಕಿಸಿದ್ದೇವೆ ಎರಡನೇ ವರ್ಷಕ್ಕೆ ಬಂದಿದೆ ಕೊಡಲಿಲ್ಲ ಈ ವರ್ಷ ಕುಡಿಯುವ ನೀರಿಗೆ ಏನು ಮಾಡಬೇಕು? ತಕ್ಷಣ ನಿರ್ಧಾರ ತೆಗೆದುಕೊಳ್ಳಬೇಕು task forceನ್ನು ಮತ್ತೆ ನೀವು ಆಚರಣೆಗೆ ತರುತ್ತೀರೋ? calamity relief fund ಮೂಲಕವೇ ಮಾಡಿಸುತ್ತೀರೋ? ನಮ್ಮಲ್ಲಿ ಎಲ್ಲೇ

ಬೋರ್ ಕೊರೆದರೂ electric pumpನ್ನೇ ಬಿಡಬೇಕಾಗಿದೆ ನಮ್ಮಲ್ಲಿ hand pumpನಲ್ಲಿ ನೀರು ಬರುವ ಸ್ಥಿತಿ ಇಲ್ಲ ಅದಕ್ಕೆ ನೀವು ಈಗಲೇ ತೀರ್ಮಾನ ತೆಗೆದುಕೊಳ್ಳಬೇಕು ತುಮಕೂರಿಗೆ ಏಕೆ funds ಜಾಸ್ತಿಯಾಗುತ್ತದೆಂದರೆ, ನಾವೆಲ್ಲಾ energize ಮಾಡಬೇಕಾಗಿದೆ T C ಹಾಕಿ ಎಂದು ಐವತ್ತು ಸಾವಿರ ರೂಪಾಯಿ deposit ಕೊಡಬೇಕಾಗಿದೆ ಈ ಸ್ಥಿತಿಯಲ್ಲಿ ಬೋರನ್ನು ಕೊರೆಯುವವರಿಗೂ hand pump ಹಾಕಿ ಬೋರ್ ಕೊರೆಯುವವರೆಗೂ ಬಹಳ ವ್ಯತ್ಯಾಸವಿದೆ ನಾವು 600–700 ಅಡಿಯಲ್ಲಿ ನೀರನ್ನು ನೋಡುವ ಜನ 110–120 ಅಡಿಗೆ hand pumpನ್ನು ಇಟ್ಟುಕೊಂಡು ನೀರನ್ನು ಒತ್ತಿ ಎಂದರೆ ಯಾವ ಹಳ್ಳಿಯಲ್ಲೂ ನೀರನ್ನು ಒತ್ತಲು ಆಗುವುದಿಲ್ಲ ತಾವು practical ಆಗಿ ಯೋಚನೆ ಮಾಡಬೇಕು ತಕ್ಷಣ container ನಲ್ಲಿ ನೀರನ್ನು ಕೊಡುವ ವ್ಯವಸ್ಥೆಯಾಗಲೇ ಬೇಕು ಕೆಲವು ಊರುಗಳಲ್ಲಿ ನಾವು ಏನು ಮಾಡಿದರೂ ನೀರು ಸಿಗುವಂಥ ಸ್ಥಿತಿ ಇಲ್ಲ

ಶ್ರೀ ಕೆ ಆರ್ ರಮೇಶ್ ಕುಮಾರ್ ಮಾನ್ಯ ಜಗದೀಶ್ ಶೆಟ್ಟರ್ ರವರೇ, ಪ್ರತಿಯೊಂದು ಸಣ್ಣ ವಿಚಾರಕ್ಕೂ ಇವರಿಗೆ ತಿಳುವಳಿದೆಯನ್ನು ಕೊಡಬೇಕಾಗಿದೆ ಒಂದು ಊರು ಇರುತ್ತದೆ ಆ ಊರಿನ ಸುತ್ತಮುತ್ತ ಎಲ್ಲೋ ಬೋರ್ವೆಲ್ ಮಾಡಿದರೆ ನೀರು ಬರುವುದಿಲ್ಲ ಒಂದು ಒಂದೂವರೆ ಕಿಲೋಮಿಟರ್ ಆಚೆ ಎಲ್ಲೋ ನೀರು ಸಿಗುತ್ತದೆ ಪೈಪ್ಲೈನ್ ಹಾಕಬೇಕು ಡಿ ಸಿ ನನ್ನ ಫಂಡ್ಸಗೆ ಬರುವುದಿಲ್ಲವೆಂದು ಹೇಳುತ್ತಾರೆ pipeline ಗೆ ಹಣ ನೀವೇ adjust ಮಾಡುಕೊಳ್ಳಿ ಎಂದು ಹೇಳುತ್ತಾರೆ ಹಾಗಾದರೆ ಆ ಪೈಪ್ಲೈನ್ಗೆ ಯಾರು ಹಣವನ್ನು ಕೊಡಬೇಕು? ನಾವು ಬೆಂಗಳೂರು, ಕೋಲಾರ, ಶ್ರೀನಿವಾಸಪುರ ಎಲ್ಲವನ್ನೂ ಸುತ್ತಿದೆವು ಹೀಗಾದರೆ ಜನರ ಪರಿಸ್ಥಿತಿ ಏನಾಗಬೇದು? Power ಇರುವುದಿಲ್ಲ Pump motor ಕೊಡುತ್ತೀರಿ Power ಇಲ್ಲದಿದ್ದಾಗ ನಾವು ನೀರನ್ನು ಹೇಗೆ ಒದಗಿಸಬೇಕು? ಒಂದು cistern ಕೊಡಿ, ನೀರನ್ನು store ಮಾಡಿ ಇಟ್ಟುಕೊಂಡಿರುತ್ತೇವೆ ಆ cistern ನಿಂದ ಬರತ್ತಕ್ಕ ನೀರನ್ನು ಊರಿನವರೆಲ್ಲಾ ಹಿಡಿದುಕೊಂಡು ಹೋಗುತ್ತಾರೆ ಒಂದು ಸಣ್ಣ ಸಿಮೆಂಟ್ ತೊಟ್ಟಿಯನ್ನು ಕಟ್ಟುತ್ತೇವೆಂದರೆ ಅದು ಆಗುವುದಿಲ್ಲವೆಂದು ಹೇಳುತ್ತಾರೆ cistern ನ್ನು ಕಳುಹಿಸಿ ಎಂದರೆ ಅದು

ಬರುವುದಿಲ್ಲವೆಂದು ಹೇಳುತ್ತಾರೆ ಇವರಿಗೆ object ಏನು, ಉದ್ದೇಶ ಏನು ಎಂಬುದು ಗೊತ್ತಾಗುವುದಿಲ್ಲ ಒಂದು ಸಣ್ಣ ವಿಚಾರದಲ್ಲಿ ಸ್ವಲ್ಪವಾದರೂ ತಮ್ಮ discretionನ್ನು use ಮಾಡದೇ ಹೋದರೆ ಆಡಳಿತವನ್ನು ನಡೆಸುವುದು ಹೇಗೆ? ಲೋಪದೋಷಗಳನ್ನು ತಡೆಗಟ್ಟುವುದಕ್ಕೆ ಏನೇನು ಬೇಕೋ ಅವೆಲ್ಲಾ ಬಂದೂಬಸ್ತನ್ನು ಮಾಡಿಕೊಳ್ಳಿ ಆದರೆ ಉದ್ದೇಶ ನೆರವೇರಬೇಕಲ್ಲವೆ?

ಶ್ರೀ ಜೆ ಸಿ ಮಾಧುಸ್ವಾಮಿ ಈಗ ಅದನ್ನೇ ಮಾಡುತ್ತಿದ್ದಾರೆ ಈಗ 4,5,6 ಹಳ್ಳಿಗಳಿಗೆ Multi village drinking water conceptನ್ನು ತಂದಿದ್ದಾರೆ ಕೊಡಿ, scarsity fundನ್ನು use ಮಾಡಿ ನಾವು ಬೇಡವೆಂದು ಹೇಳುವುದಿಲ್ಲ ಒಂದು ಹಳ್ಳಿಯ ನೀರಿನ ಸಮಸ್ಯೆ ಒಗೆಹರಿಯುತ್ತದೆ ಎಂದರೆ pipe lineಗೆ ಮತ್ತೊಂದಕ್ಕೆ ಹಾಕಿಕೊಡಿ Divert ಮಾಡಿ ಕೊಡಿ ಯಾರು ಬೇಡವೆಂದು ಹೇಳುತ್ತಾರೆ ಹಾಗೆಯೇ ನಮ್ಮ ಕಡೆ ಒಂದು, ಎರಡು ಕಿಲೋಮೀಟರ್ ದೂರದಿಂದ ನೀರನ್ನು ತಂದು ಕೊಡುವಂಥ ಸ್ಥಿತಿ ಇದ್ದಾಗ ಬೋರ್ ಕೊರೆಯುವುದು, pipe ಹಾಕುವುದು ಹೇಗೆ? ಸ್ಥಿತಿಗಳನ್ನು ಹೇಳುವುದಕ್ಕಾಗುವುದಿಲ್ಲ ಮಾನ್ಯ ಸಚಿವರು ಈ ಕಡೆ ಗಮನ ಕೊಡಬೇಕು ನಾನು ತಮಗೆ ಬಹಳ ನಮ್ರತೆಯಿಂದ ಹೇಳುತ್ತಿದ್ದೇನೆ, ಗೋಶಾಲೆಯ ಕಲ್ಪನೆಯ ಬಗ್ಗೆ ಇನ್ನೊಂದು ಸಲ ಯೋಚನೆ ಮಾಡಿ ಗೋಶಾಲೆಯನ್ನು ನೀವು ಮಾಡುವುದು ಬಹಳ hazaridious ಯಾವುದಾದರು ರೋಗ ತಗಲಿಬಿಟ್ಟರೆ ಬಹಳ ಕಷ್ಟ 4 5 ಸಾವಿರ animalಗೆ ನೀವು insure ಮಾಡಿಸಿರಬೇಕಾಗುತ್ತದೆ ನಿಮ್ಮ risk ಇರುತ್ತದೆ ಮೇವನ್ನು supply ಮಾಡುವುದಕ್ಕೆ ತಾವು ಆದ್ಯತೆಯನ್ನು ಕೊಡಬೇಕು ಗೋಶಾಲೆಗಾದರೂ ನೀವು ಮೇವನ್ನು ತೆಗೆದುಕೊಳ್ಳಲೇ ಬೇಕು ಗೋಶಾಲೆಗೆ ತರುವ ಮೇವನ್ನೇ, ರೈತರಿಗೆ ಅವರುಗಳ ಜಾನುವಾರುಗಳನ್ನು ಆಧಾರವಾಗಿ ಇಟ್ಟುಕೊಂಡು ಕೊಡುವಂಥ ಸ್ಥಿತಿಯನ್ನು ನಿರ್ಮಾಣ ಮಾಡಬೇಕು ಅಥವಾ ಅವರೇ ಹೋಗಿ purchase ಮಾಡಿಕೊಂಡು ಬರುವ ಸ್ಥಿತಿಯನ್ನು ನಿರ್ಮಾಣ ಮಾಡಿಕೊಡಬೇಕು ತಾಲ್ಲೂಕಿಗೊಂದು ಗೋಶಾಲೆಯನ್ನು ಕೊಟ್ಟಿದ್ದೇವೆಂದು ಏನು ಆದೇಶವಿದೆ, ದಯಮಾಡಿ ಅದನ್ನು withdraw ಮಾಡಿ

ಶ್ರೀ ಜಗದೀಶ್ ಶೆಟ್ಟರ್ ಗೋಶಾಲೆಯನ್ನು compulsory ಮಾಡಲೇ ಬೇಕೆಂದು ನಾವು direction ಕೊಟ್ಟಿಲ್ಲ ಎಲ್ಲೆಲ್ಲಿ ಅವಶ್ಯಕತೆ ಇದೆಯೋ ಅಲ್ಲಿ ನಾವು ಮಾಡಬೇಕೆಂದು ಹೇಳಿದ್ದೇವೆ

ಶ್ರೀ ಜೆ ಸಿ ಮಾಧುಸ್ವಾಮಿ ಮೇವು ಒದಗಿಸಬೇಕೆಂದು ನಾವು ಕೇಳಿದರೆ ಅದಕ್ಕೆ ಅವಕಾಶ ಇಲ್ಲ, ಗೋಶಾಲೆಯನ್ನು ಮಾಡಿ ಎಂದು ಹೇಳುತ್ತಿದ್ದಾರೆ

ಶ್ರೀ ಜಗದೀಶ್ ಶೆಟ್ಟರ್ ಹಾಗೇನಿಲ್ಲ ಮೇವನ್ನು purchase ಮಾಡುವ ಬಗ್ಗೆಯೂ ಕ್ರಮವನ್ನು ಕೈಗೊಳ್ಳಬೇಕೆಂದು ಹೇಳಿದ್ದೇವೆ ಮತ್ತು ಗೋಶಾಲೆ ಎಲ್ಲಿ ಅಗತ್ಯತೆ ಇದೆ ಅಲ್ಲಿ ತೆಗೆಯಲು ಹೇಳಿದ್ದೇವೆ ಕೊಪ್ಪಳ, ಗದಗ್ ಮುಂತಾದ ಜಿಲ್ಲೆಗಳಲ್ಲಿ ಇದನ್ನು ಕೇಳಿದರು ಅದಕ್ಕಾಗಿ ನಾವು direction ಕೊಟ್ಟಿದ್ದೇವೆ ಮೊನ್ನೆ ಕೋಲಾರಕ್ಕೆ ಹೋಗಿದ್ದಾಗ ಗೋಶಾಲೆ ಬೇಡ, ಅದರ ಅವಶ್ಯಕತೆ ಇಲ್ಲವೆಂದು ಹೇಳಿದರು ಅವಶ್ಯಕತೆ ಇದ್ದಾಗ ನೋಡೋಣವೆಂದು ಹೇಳಿದರು ನಾವು ಅದೇ ರೀತಿ direction ಕೊಟ್ಟಿದ್ದೇವೆ compulsory ಯಾಗಿ ಒಂದೊಂದು ತಾಲ್ಲೂಕಿನಲ್ಲಿ ಮಾಡಲೇಬೇಕೆಂದು ನಾವು direction ಕೊಟ್ಟಿಲ್ಲ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಗೋಶಾಲೆಯ ಬಗ್ಗೆ ನಮಗೆ 1985ರಲ್ಲಿನ ಒಂದು ಅನುಭವ ಇದೆ ಗೋಶಾಲೆ ಪ್ರಾರಂಭ ಮಾಡುವುದರ ಬಗ್ಗೆ ಕೋಲಾರ ಜಿಲ್ಲೆಯಲ್ಲಿ 1985ನೇ ಇಸವಿಯಲ್ಲಿ ಒಂದು ಅನುಭವ ಇದೆ ಆ ಅನುಭವವನ್ನು ತೆಗೆದುಕೊಂಡರೆ ಅದು ಖಂಡಿತ ಕಾರ್ಯಸಾಧುವಲ್ಲ ಏಕೆಂದರೆ ಅದರಲ್ಲಿ ನಾನೇ ಸ್ವತ ಭಾಗವಹಿಸಿದ್ದೆ ಗೋಶಾಲೆಯನ್ನು ಪ್ರಾರಂಭ ಮಾಡಿದರು ಎಲ್ಲಾ ಹಳ್ಳಿಗಳಲ್ಲಿರುವ ದನಕರುಗಳನ್ನು ಅಲ್ಲಿಗೆ ತಂದು ಕಟ್ಟಿ ಹಾಕಿದರು ಹುಲ್ಲನ್ನು ಕೊಡುತ್ತೇವೆಂದು ಹೇಳಿದರು ಕಡೆಗೆ ಎಂಥ ಸ್ಥಿತಿ ನಿರ್ಮಾಣವಾಯಿತು ಎಂದರೆ ಪೋಲೀಸ್ನವರು ಲಾಟಿ ಚಾರ್ಜ್ ಮಾಡಬೇಕಾಯಿತು ನಿಯಂತ್ರಣ ಮಾಡುವುದಕ್ಕಾಗಲಿಲ್ಲ ಜನರು ಹುಲ್ಲನ್ನು ಎತ್ತಿಕೊಂಡು ಹೋಗಿಬಿಡುತ್ತಾರೆ ದನಕರುಗಳನ್ನು ತೋರಿಸಲು ಸುಮ್ಮನೆ ಕರೆದುಕೊಂಡು ಬರುತ್ತಾರೆ ಹುಲ್ಲನ್ನು ತೆಗೆದುಕೊಂಡಮೇಲೆ ಅಲ್ಲಿಂದ ಜಾಗ ಖಾಲಿಮಾಡಿಬಿಡುತ್ತಾರೆ ಮತ್ತೆ ಬೆಳಿಗ್ಗೆ ಕರೆದುಕೊಂಡು ಬರುತ್ತಾರೆ ಗೋಶಾಲೆಗಳನ್ನು ಪ್ರಾರಂಭ ಮಾಡಿದರೆ ಅಲ್ಲಿ ದನಕರುಗಳು ಇರಲು ಜಾಗ ಮಾಡಿಕೊಡಬೇಕಾಗುತ್ತದೆ ದನಗಳನ್ನು ಹೊಡೆದುಕೊಂಡು ಬಂದ ಜನರು ಇರುತ್ತಾರೆ, ಅವರು ಎಲ್ಲಿ ಉಳಿದುಕೊಳ್ಳಬೇಕು? ಇವೆಲ್ಲವೂ

ಪ್ರಾಯೋಗಿಕವಾಗಿ ಬಹಳ ಕಷ್ಟಸಾಧ್ಯವಾದ ಕೆಲಸಗಳು ಬಹಳ ಪ್ರಮುಖವಾಗಿ ನೀರು ಬೇಕು ನೀರನ್ನು ಎಲ್ಲಿಂದ ತರುತ್ತೀರಿ? ಅಲ್ಲಿ Team of Doctors ಇರಬೇಕು ಏಕೆಂದರೆ ಸಾವಿರಾರು ದನಕರುಗಳು ಬಂದಿರುತ್ತವೆ Team of Doctorsನ್ನು ಎಲ್ಲಿಂದ ತರುತ್ತೀರಿ? ಆಸ್ಪತ್ರೆಗಳಲ್ಲಿ Doctorsಗಳೇ ಇಲ್ಲ ಮಾನ್ಯ ರೇವೂನಾಯುಕ್ ರವರು doctors ನ್ನು ಕೊಡುತ್ತೇನೆ ಕೊಡುತ್ತೇನೆ ಎಂದು ಕೊಡಲೇ ಇಲ್ಲ Doctors ಇಲ್ಲ ಅವರನ್ನು ಎಲ್ಲಿಂದ ತರುತ್ತೀರಿ? ಸಣ್ಣ ಕರುಗಳು ಇರುತ್ತವೆ ಆದ್ದರಿಂದ ಇದು ಪ್ರಾಯೋಗಿಕವಲ್ಲ ಅದರ ಬದಲು ಸರ್ಕಾರ ಹುಲ್ಲನ್ನು ತೆಗೆದುಕೊಂಡು ಬಂದು ಜಾನುವಾರುಗಳನ್ನು ಸರ್ವೆ ಮಾಡಬೇಕು ಅದರ ಪ್ರಕಾರ ಹುಲ್ಲನ್ನು ಹಂಚಿದರೆ ಅದು ಸ್ವಲ್ಪ ಪ್ರಯೋಜನವಾಗುತ್ತದೆಯೇ ಹೊರತು ಗೋಶಾಲೆಗಳಿಂದ ಪ್ರಯೋಗಿಕವಾಗಿ ಸಾಧ್ಯವಿಲ್ಲ

ಶ್ರೀ ಜೆ.ಸಿ.ಮಾಧುಸ್ವಾಮಿ ತಾವು ಆ ಕಡೆ ಗಮನಕೊಡಬೇಕು ಪ್ರಮುಖವಾಗಿ ತಾವು ಒಂದೆರಡು ತೀರ್ಮಾನಗಳನ್ನು ತೆಗೆದುಕೊಳ್ಳಬೇಕು Worksನ್ನು monitwer ಮಾಡುವುದಕ್ಕೆಂದು third party ಎಂದು ಯಾರೋ ಒಬ್ಬರನ್ನೇನು ನೇಮಕ ಮಾಡುತ್ತೀರಿ ಅಥವಾ nodel officwer ಎಂದು ಏನು ನೇಮಕ ಮಾಡುತ್ತಿದ್ದೀರಿ , ನಿಮ್ಮ Assistant commissionwer, Thasildar, ಜಿಲ್ಲಾ ಆಡಳಿತ ವ್ಯವಸ್ಥೆಯನ್ನೇನು ಈ ಕಾರ್ಯಕ್ರಮದ ಕೆಳಗಡೆ ಇಟ್ಟಿದ್ದೀರಿ, ಇದರಿಂದ delay ಆಗುತ್ತದೆ ಎಂಬುದು ಬಿಟ್ಟರೆ ಮತ್ತೆ ಯಾವ ಸಾಧನೆಯೂ ಆಗಲಿಲ್ಲ ಖಂಡಿತವಾಗಿ ಯಾವ ಸಾಧನೆಯೂ ಆಗಿಲ್ಲ ಯಾರೊ endineer collegeನಲ್ಲಿ ಪಾಠ ಮಾಡುವವರ ಹತ್ತಿರ ಹೋಗಿ ಸಹಿ ಮಾಡಿಸಿಕೊಂಡು ಬರಲು 15 ದಿವಸವಾಗುತ್ತಿದೆ. ಇದೆಲ್ಲಾ warfootingನಲ್ಲಿ ಆಗುವಂಥ ಕೆಲಸಗಳು, estimate ಇಲ್ಲ, ನಿಮ್ಮ quality control ಒಪ್ಪಿಲ್ಲ, ಆ inspection ಈ inspection ಆಗಿಲ್ಲ, ಇದೆಲ್ಲ ಬರಪರಿಹಾರ ಕಾಮಗಾರಿ ಮಾಡುವ ರೀತಿಯಲ್ಲ ಈ ಬಗ್ಗೆ ಯಾರು ನಿಮಗೆ advise ಮಾಡಿದರೋ ನಮಗೆ ಗೊತ್ತಿಲ್ಲ ಕೆಲವು ಕಾರ್ಯಕ್ರಮಗಳನ್ನು ತಾವು N G O ಗಳ ಮೇಲೆ depend ಆಗಿ ಮಾಡುತ್ತಿದ್ದೀರಿ ಅವೆಲ್ಲಾ ಇದಕ್ಕೆ ಪೂರಕವಾಗಿ ಇರಬೇಕು ಎಂಬ

ಉದ್ದೇಶದಿಂದ ನಾನು ಮಾತನಾಡುತ್ತಿದ್ದೇನೆ Water shed ಕೆಲಸವಾಗುತ್ತಿದ್ದರೆ weast land development, dry land development ಕೆಲಸಗಳು ಆ ಭಾಗದಲ್ಲಿ ಆಗುತ್ತಿದ್ದರೆ ಇಷ್ಟೊಂದು stress ನಿಮ್ಮ Government ಮೇಲೆ ಬೀಳುತ್ತಿರಲಿಲ್ಲ N G O ದವರು ಮೊದಲನೆಯ ವರ್ಷಕ್ಕೆ ಸೀಮಿತವಾಗಿಬಿಟ್ಟಿದ್ದಾರೆ 2ನೇ ವರ್ಷ 3ನೇ ವರ್ಷ ಯಾವ N G Oದವರೂ ಕೆಲಸ ಮಾಡುತ್ತಿಲ್ಲ ನಾವೂ ಏಕೆ ಮಾಡಲಿಲ್ಲವೆಂದು ಕೇಳುವಂತೆ ಇಲ್ಲ ಕೊಟ್ಟವರು ಯಾರೋ ತೆಗೆದುಕೊಂಡವರು ಯಾರೋ, "ಕೊಟ್ಟವನು ಕೊಡಂಗು ಈಸಿಕೊಂಡವನು ಈರಭದ್ರ" ಎಂದು ನಮ್ಮ ಕಡೆ ಹೇಳುತ್ತಾರೆ ಆ ರೀತಿಯಾಗಿದೆ ಈ ರಾಜ್ಯದ ಸ್ಥಿತಿ ಯಾರು N G O ಅದರ stuff ಏನು? trained personal ಎಷ್ಟು ? qualified ಎಷ್ಟು ? ಎಲ್ಲಾದರು ಕೇಳುತ್ತಿದ್ದೀರ ? ಇಡೀ ಸುಜಲಾದಲ್ಲಿ ಮೊದಲ ವರ್ಷ ಮಾತ್ರ ನಮ್ಮ ಹತ್ತಿರ ಬಿ ಎಸ್ಸಿ ಎ ಜಿ ಗ್ರಾಜ್ಯುಯೇಟ್ಸ ಬರುವುದು Training ಮಾಡುತ್ತಿರಿ Lead N G O ದವರಿಗೆ ಒಂದೊಂದು districtಗೆ ಒಬ್ಬರನ್ನು ಇಟ್ಟುಕೊಂಡು ಯಾರಿಗೋ ಹಣವನ್ನು ಕೊಟ್ಟುಬಿಡುತ್ತೀರಿ Nexe year ಅವರ್ಯಾರೂ ಇರುವುದಿಲ್ಲ Training ಆದವರೊಬ್ಬರೂ ಇರುವುದಿಲ್ಲ ಅವರು ಹೇಳಿದಂತೆ ಇದೊಂದು ರ್ಯಾಕೇಟ್ ನಾನು ಏನಾದರು ಸುಲಭವಾಗಿ ದುಡ್ಡು ಮಾಡಬೇಕೆಂದರೆ ಒಂದು N G O register ಮಾಡಿಕೊಂಡು ನಿಮ್ಮ ಹತ್ತಿರ ಬಂದು ಜಗದೀಶ್ ಶೆಟ್ಟರ್ ರವರೇ ನೀವು ನಮಗೆ ಚೆನ್ನಾಗಿ ಇದ್ದೀರಿ, ನನಗಿ ಕೊಡುವುದರ ಬದಲು ನಮ್ಮ N G O ಗೆ ಕೊಡಿ ಎಂದು ಹಾಕಿಸಿಕೊಂಡು ಹೋಗಬಹುದು ಇದು indirect ಆಗಿ ಇಡೀ ಸಂಪನ್ಮೂಲವನ್ನು ಹಾಳು ಮಾಡುತ್ತಿರುವುದು ಸ್ವಲ್ಪ ಆ ಕಡೆ ಗಮನಕೊಟ್ಟು ಪೂಲ್ ಮಾಡುವ ವ್ಯವಸ್ಥೆ ಮಾಡಬೇಕು ಈ distress ಮುಗಿಯುವವರೆಗೆ ಎಲ್ಲಾ ದುಡ್ಡು, ಅದು Z P ದ್ದು ಇರಬಹುದು, T Pದ್ದು ಇರಬಹುದು, ನಾವು ಕೊಡುವುದು ಇರಬಹುದು, ಇದೆಲ್ಲಾ ಎಲ್ಲಾದರೂ ಒಂದು ಕಡೆ ಪೂಲ್ ಮಾಡಿಕೊಟ್ಟರೆ ಕೆಲಸ ಕಾರ್ಯವನ್ನು ಒಂದು ಕಡೆ assetನ್ನು ನಿರ್ಮಾಣ ಮಾಡಲು ಸಾಧ್ಯವಾಗುತ್ತದೆ ಇದರಲ್ಲಿ ತಾವು ಹೆಚ್ಚು ಆದ್ಯತೆಯನ್ನು ಸಣ್ಣ ನೀರಾವರಿಗೆ ಕೊಡಬೇಕು ಏಕೆಂದರೆ ಕರ್ನಾಟಕಕ್ಕೆ

ಬೇರೆ ಮಾರ್ಗವೇ ಇಲ್ಲ ನೀವು ಏನಾದರೂ Minor irrigationಗೆ ಆದ್ಯತೆಯನ್ನು ಕೊಟ್ಟು ಕಾಲುವೆಗಳನ್ನು ಕುಲ್ಲಾ ಮಾಡುವ ವ್ಯವಸ್ಥೆ, ಹೂಳನ್ನು ತೆಗೆಯುವ ವ್ಯವಸ್ಥೆಯನ್ನು ಮಾಡಿ ಅಕಸ್ಮಾತ್ ಅಲ್ಲಿ ಸಿಕ್ಕ ನೀರನ್ನು ಶೇಖರಣೆ ಮಾಡಿಕೊಂಡು ಅಂರ್ತಜಲ ಅಬಿವೃದ್ದಿ ಯಾಗದೇ ಹೋದರೆ ಇಡೀ ಕರ್ನಾಟಕವನ್ನು ತಾವು ಮರಳುಗಾಡನ್ನಾಗಿ ಮಾಡುತ್ತೀರಿ ನಿಮ್ಮ ಊರಿನಿಂದ ಹಿಡಿದು ನಮ್ಮ ಊರಿನವರೆಗೆ, ಮೊಳಕಾಲ್ಮೂರು–ಚಳ್ಳಕೆರೆಯಿಂದ ಹಿಡಿದು ಚಿಕ್ಕನಾಯಕನಹಳ್ಳಿಯವರೆಗೆ 2020ಕ್ಕೆ ಮರಳುಗಾಡು ಆಗಬಹುದು ಎಂದು ಸಮೀಕ್ಷೆಯೊಂದು ಹೇಳಿದೆ ಸಾಧ್ಯವಾದರೆ ಅದು 2010ಕ್ಕೇ ಆಗುತ್ತದೆ ಎನ್ನುವಂತಹ ಭೀತಿಗೆ ನಾವು ಇಂದು ಬಂದಿದ್ದೇವೆ 800 ಅಡಿಯಿಂದ 1000 ಅಡಿಗಳವರೆಗೆ ಇವತ್ತು ನಾವು ಬೋರ್‌ವೆಲ್‌ಗಾಗಿ ಕೊರೆಸುವಂತಾಗಿದೆ ಗುಜರಾತ್‌ನಲ್ಲಿ ಇದ್ದಂತಹ ground water level ಗೆ ನಾವು ತಲ್ಲುಪಿದ್ದೇವೆ 1000 ಅಡಿಗಳವರೆಗೆ ಕರ್ನಾಟಕ ರಾಜ್ಯದಲ್ಲಿ ನಾವು ಬೋರ್ ಕೊರೆಯುತ್ತಿದ್ದೇವೆ ಎಂದರೆ, ಭೂಮಿ ಬೆಂಡಾಗುತ್ತಿದೆ ಮರಳುಗಾಡನ್ನು ಸೃಷ್ಟಿ ನೀವು ಮಾಡುತ್ತಿದ್ದೀರಿ, ಭೂಮಿ ಮೇಲಿರುವ ಹಸಿರನ್ನು ಸರ್ವನಾಶ ಮಾಡಿದ್ದೀರಿ, Horticulture ಸರ್ವನಾಶವಾಗಿದೆ, Forest land ಸರ್ವನಾಶವಾಗಿದೆ, ನಿಮ್ಮ ಹುಲ್ಲುಗಾವಲುಗಳೆಲ್ಲಾ ಸರ್ವನಾಶವಾಗಿವೆ ಮಾನ್ಯ ಚೆಲುವರಾಯಸ್ವಾಮಿಯವರೆ, ಮೊದಲು ನಾವೆಲ್ಲಾ ಮನೆಯಲ್ಲಿ ಕುಳಿತುಕೊಳ್ಳಲಿಕ್ಕಾಗುವುದಿಲ್ಲ, ಸೆಖೆಯಾಗುತ್ತದೆ ಎಂದು ತೋಟಕ್ಕೆ ಹೋಗಿ ಕುಳಿತುಕೊಳ್ಳುತ್ತಿದ್ದೆವು ಆದರೆ ಈಗ ತೋಟದಲ್ಲಿ ಸೆಖೆಯಾಗುತ್ತದೆ ಎಂದು ಮನೆಗೆ ಬರುವಂತಾಗಿದೆ ಇದು ವಾಸ್ತವವಾದ ಸ್ಥಿತಿಯಾಗಿದೆ ತೋಟದಲ್ಲಿ ಇದ್ದಂತಹ ಜಂಗಲ್ ಮರಗಳನ್ನು ಇವತ್ತು ಒಬ್ಬರೂ ಉಳಿಸಿಕೊಂಡಿಲ್ಲ ಹಲಸಿನ ಮರ, ಮಾವಿನ ಮರಗಳು ತೆಂಗಿನ ಮರಗಳ ಮಧ್ಯದಲ್ಲಿ ಅಲ್ಲಲ್ಲೇ ಇರುತ್ತಿದ್ದವು ಇದರಿಂದಾಗಿ ನಮಗೆ ಅಲ್ಲಿ ತಂಪು ಇರುತ್ತಿತ್ತು, ಈಲ್ಡ್ ಕೂಡ ಬರುತ್ತಿತ್ತು ಆದರೆ ಅವತ್ತು ಅವುಗಳು ಒಂದೂ ಇಲ್ಲ, ಎಲ್ಲಾ ಕಡಿದು ಹಾಕಿದ್ದಾರೆ Coffee Plantations ಗೆ ಇವತ್ತು ನೀವು ಹೋಗಿ ನೋಡಿ ಕಾಫಿಗೆ ಬೆಲೆ ಬಿತ್ತು ಎಂದಾಕ್ಷಣ ಇಡೀ Silver Oak ಮರಗಳೆಲ್ಲಾ ನಾಶವಾಗಿಬಿಟ್ಟವು ಮರ ಕಡಿಯಲಿಕ್ಕೆ ತಾವು permit ಮಾಡಿ ಇಡೀ ವಾತಾವರಣ ಇವತ್ತು ಮರಳುಗಾಡು ಆಗುವಂತೆ ನಿರ್ಮಾಣ ಮಾಡಿದ್ದೀರಿ ಅದಕ್ಕಾಗಿ ನಾನು ನಿಮಗೆ ಒತ್ತಾಯ ಮಾಡುತ್ತಿದ್ದೇನೆ You must give

stress on Mınoı Irrıgatıon ನಿಜವಾಗಿಯೂ ನಿಮಗೆ ಕರ್ನಾಟಕದ ಬಗ್ಗೆ ಎಲ್ಲಿಯಾದರೂ ಕಾಳಜಿ ಇದ್ದರೆ ಇದನ್ನು ಮಾಡಬೇಕು ನಮ್ಮನ್ನು ಜನರು ಎಂ ಎಲ್ ಎ ಗಳಾಗಿ ಮಾಡಿದ್ದಾರೆ, ಮಂತ್ರಿಗಳಾಗಿ ಮಾಡಿದ್ದಾರೆ, ಇದರಿಂದ ನಮಗೆ ಸ್ವಲ್ಪ status ಬಂದಿದೆ ಎಂದು ನೀವು ಭಾವಿಸುವುದಾದರೆ ಆ ಕೆಲಸವನ್ನು ನೀವು ಮಾಡಬೇಕು ಮನುಷ್ಯ ಏಕೆ ಸಾರ್ fight ಮಾಡುತ್ತಾನೆ? ನಮ್ಮ ಹೋರಾಟ ಅಥವಾ fight ಏತಕ್ಕೆ ಎಂದರೆ to get recognized and ıdentıfied ನನ್ನನ್ನು ಯಾರಾದರೂ ಗುರುತಿಸಬೇಕು, ನಾನು ಯಾರಿಗಾದರೂ ಮುಂದಾಳು ಎಂದು ಎನಿಸಿಕೊಳ್ಳಲಿಕ್ಕಾಗಿಯೇ ನಾವೆಲ್ಲಾ ಹೋರಾಟ ಮಾಡುತ್ತೇವೆ ಆದರೆ ಆ ಸ್ಥಾನ ನಮಗೆ ಕೊಟ್ಟಾಗ, ಅದನ್ನು ಮಾಡಿದವನನ್ನು ಏತಕ್ಕಾಗಿ ನಾವು ನೆನಸಿಕೊಳ್ಳುವುದಿಲ್ಲ ನಿಜವಾಗಿಯೂ ನಿಮಗೇನಾದರೂ ಕಳಕಳಿ ಇದ್ದರೆ, ಎಲ್ಲಿಂದಾದರೂ ಸರಿ, ಬಯಲು ಸೀಮೆಯ ಕೆರೆಗಳನ್ನು ತುಂಬಲಿಕ್ಕೆ ಒಂದು ಪ್ರಮುಖವಾದ ಕಾರ್ಯಕ್ರಮವನ್ನು ರಾಜ್ಯ ಸರ್ಕಾರದವರು ಜಾರಿಗೆ ತರಬೇಕು ಎಲ್ಲಿ ನಾಲೆ ಇದೆ? ಎಲ್ಲಿ ನಾಲೆಯಿಂದ ಕುಡಿಯುವ ನೀರಿಗೆ dıvert ಮಾಡಲಿಕ್ಕಾಗುತ್ತದೆ? ಎಲ್ಲಿ ನಾಲೆಯಿಂದ ಸ್ವಲ್ಪ ಮೇಲಕ್ಕೆ lıft ಮಾಡಬೇಕಾಗುತ್ತದೆ? ಎಂಬುದರ ಬಗ್ಗೆಯೂ ಕಾರ್ಯಕ್ರಮಗಳನ್ನು ಸರ್ಕಾರದವರು ಜಾರಿಗೆ ತರಬೇಕು ಕಳೆದ ಹತ್ತು ವರ್ಷಗಳಲ್ಲಿ ಪ್ರತಿ ತಾಲ್ಲೂಕಿನಲ್ಲಿ ನೀವು ಎಷ್ಟೆಲ್ಲಾ ಬೋರ್‌ವೆಲ್‌ಗಳನ್ನು ಕೊರೆದಿದ್ದೀರೋ, ಆ ಲೆಕ್ಕವನ್ನು ತೆಗೆದುಕೊಳ್ಳಿ ಎಲ್ಲಾ ತಾಲ್ಲೂಕುಗಳ ಟ್ಯಾಂಕ್‌ಗಳನ್ನು ನೀವು ಇವತ್ತು lıft ಮಾಡಬಹುದಾಗಿತ್ತು ಬೋರ್‌ವೆಲ್‌ಗಳನ್ನು ಕೊರೆಯಲು ನೀವು ಖರ್ಚು ಮಾಡುವ ಹಣದಿಂದ ಟ್ಯಾಂಕ್‌ಗಳನ್ನೆಲ್ಲಾ lınk ಮಾಡಿಕೊಂಡು ಬರಬಹುದಾಗಿತ್ತು Under ground water charge ಆಗಿದ್ದರೆ, ನೀರಿನ consumptıon ಇಷ್ಟೊಂದು ಇರುತ್ತಿರಲಿಲ್ಲ ಎರಡನೆಯದಾಗಿ, ಖರ್ಚೂ ಸಹ ಇಷ್ಟೊಂದು ಬರುತ್ತಿರಲಿಲ್ಲ Electrıcıty Cıty supply ಮಾಡುವುದು ನಮಗೆ ಏಕೆ ಇವತ್ತು ಕಷ್ಟವಾಗಿದೆ ಎಂದರೆ, 5 HPಗೆ servıce ತೆಗೆದುಕೊಂಡು 10–12 HPಯನ್ನು ನಾವು ಇವತ್ತು ಬಳಸುತ್ತಿದ್ದೇವೆ 150 ಅಡಿಗೆ ನೀರು ಬರುತ್ತಿದ್ದ ಕಡೆಗೆ ಇವತ್ತು 500 ಅಡಿಗೆ ನಾವು ಹೋಗುತ್ತಿದ್ದೇವೆ ಬಂಡವಾಳ ಜಾಸ್ತಿಯಾಯಿತು, Consumptıon

ಜಾಸ್ತಿಯಾಯಿತು ಇವತ್ತು ನಾವು chemical ಇರುವ ನೀರನ್ನು ಕುಡಿಯುತ್ತಿದ್ದೇವೆ ನಾಳೆ ಯಾರಾದರೂ ಕೋರ್ಟಿನಲ್ಲಿ ಕೇಸ್ ಹಾಕಿದರೆ ಗತಿಯೇನು? ಇಡೀ ರಾಜ್ಯದಲ್ಲಿ ನೀವು ಫ್ಲೋರೈಡ್ ಇರುವ ವಾಟರ್ ಅನ್ನೇ ಕೊಡುತ್ತಿದ್ದೀರಿ ಮಾನ್ಯ ಡಿ ಆರ್ ಪಾಟೀಲ್‌ರವರು 5–10 ವರ್ಷಗಳ ಹಿಂದೆಯೇ ಫ್ಲೋರೈಡ್ ಬಗ್ಗೆ ಸದನದಲ್ಲಿ ಬಹಳ ಚೆನ್ನಾಗಿ ಮಾತನಾಡಿದ್ದರು ಇಡೀ ರಾಜ್ಯ ಇವತ್ತು fluoride content water ಕುಡಿಯುತ್ತಿದೆ ನೀವೇನು amenities ಅನ್ನು ಇವತ್ತು ನಮಗೆ create ಮಾಡಿಕೊಟ್ಟಿದ್ದೀರಿ? ಈ ಕಡೆಗೆ ಗಮನ ಕೊಡಬೇಕು ರಾಜ್ಯದ ಹಣ ಏನಿದೆಯೋ, ಅದನ್ನು pool ಮಾಡಿ ಖರ್ಚು ಮಾಡಬೇಕು ತಾವು ನಿದ್ದೆ ಮಾಡುತ್ತಿದ್ದೀರಿ ಸುಮ್ಮನೆ ಇಲ್ಲಿ ಮಾತನಾಡುತ್ತೀರಿ, ನಾವು ಬಹಳ ಚೆನ್ನಾಗಿ ಮಾಡಿದ್ದೇವೆ, ಅಷ್ಟು ಕೊಟ್ಟಿದ್ದೇವೆ, ಇಷ್ಟು ಕೊಟ್ಟಿದ್ದೇವೆ ಎಂದು ಹೇಳುತ್ತೀರಿ ನೀವು ಕೊಡುವ advertisementಗಳಿಂದ ಪೇಪರ್‌ನವರು ಬದುಕಿಕೊಳ್ಳುತ್ತಿದ್ದಾರೆ ಒಳ್ಳೆಯ colourful advertisements ಪ್ರತಿ ದಿವಸವೂ ಪ್ರಕಟಿಸುತ್ತಿದ್ದೀರಿ ಅದರ ಜೊತೆಗೆ ಇಲ್ಲೊಂದು ಭಾಷಣವನ್ನು ಇಲ್ಲಿ ಮಾಡುತ್ತೀರಿ ಸನ್ಮಾನ್ಯ ಯಡಿಯೂರಪ್ಪನವರಿಗೆ ದುಡ್ಡು ಕೇಳಿದ್ದೇವೆ, ಅವರು ಕೊಡುತ್ತಾರೆ ಎಂದು ಹೇಳುತ್ತೀರಿ ಯಾವ ಮಂತ್ರಿಗಳು ಉತ್ತರಿಸಲು ಎದ್ದು ನಿಂತುಕೊಂಡರೂ ಶಾಸನ ಸಭೆಯಲ್ಲಿ ಇದೇ ರೀತಿಯ ಉತ್ತರವನ್ನು ಕೊಡುತ್ತಿದ್ದೀರಿ ನಿಮ್ಮದು ಸರ್ಕಾರವಲ್ಲವೇ? ನಿಮ್ಮದು collective responsibility ಇಲ್ಲವೇ? ಏಕೆ ನೀವು ಈ ತರಹ ಮಾತನಾಡಲಿಕ್ಕೆ ಕಲಿತಿದ್ದೀರಿ ಎಂಬುದೇ ನನಗೆ ಅರ್ಥವಾಗುತ್ತಿಲ್ಲ ಏನು ಈ ಶಾಸನ ಸಭೆ ಹೀಗಾಯಿತಲ್ಲಾ ಎಂದು ನಾವು ಮಾತನಾಡಿಕೊಳ್ಳುತ್ತಿರುತ್ತೇವೆ You are part of Government, I say He is also part of the Government ಈ ಚಿಂತನೆಯೇ ಇಲ್ಲದೆ, ಮಂತ್ರಿಗಳಲ್ಲೇ ವರ್ಗಗಳನ್ನು ಸೃಷ್ಟಿ ಮಾಡಿಕೊಳ್ಳುತ್ತಿದ್ದೀರಿ, ಮಂತ್ರಿಗಳಲ್ಲೇ ಪಕ್ಷ ಸೃಷ್ಟಿ ಮಾಡಿಕೊಂಡಿದ್ದೀರಿ ಮಂತ್ರಿಗಳು ಯಾರು ಯಾವ ಕೆಲಸ ಮಾಡಬೇಕೆನ್ನುವ ಆಲೋಚನೆ ಮಾಡುವುದನ್ನು ಬಿಟ್ಟು ಬೇರೆ ಕೆಲಸಗಳನ್ನು ಮಾಡುತ್ತಿದ್ದಾರೆ ರಾಜ್ಯ ದಿಕ್ಕೆಟ್ಟು ಹೋಗಿದೆ ರಾಜ್ಯಕ್ಕೆ ಅಗತ್ಯವಾಗಿ ನಾಯಕತ್ವ ಮೊದಲೇ ಬೇಕು ಅದರಲ್ಲೂ ಕಷ್ಟವಾಗಿರುವಾಗ ನಾಯಕತ್ವ ತೀರಾ ಅನಿವಾರ್ಯ ಇವತ್ತು ಅದು ಕರ್ನಾಟಕದಲ್ಲಿ ಇಲ್ಲ Direct ಮಾಡುವಷ್ಟು

ಅನುಭವವೂ ಕೂಡ ನಿಮಗೆ ಇಲ್ಲ, Co–ordination ಮೊದಲೇ ಇಲ್ಲ, ತತ್ವ ಗೊತ್ತೇ ಇಲ್ಲ, ಸಿದ್ಧಾಂತವೂ ಇಲ್ಲ ನೀವೇ ನಮ್ಮದು marriage of convenience, not of conviction ಎಂದು ಹೇಳಿದ್ದೀರಿ Marriage of convenience ಎಂದರೆ, ಇನ್ನೊಬ್ಬಳು ಬರುವವರೆಗೂ ಇವಳನ್ನೇ ಇಟ್ಟುಕೊಳ್ಳುತ್ತೇವೆ ಎಂದಷ್ಟೇ ಅರ್ಥವಾಗುತ್ತದೆ ಒಂದು ಕಡೆ ಆಯಿತು, ನೀವು ಅವರನ್ನು ಬಿಟ್ಟಿರಿ, ಇನ್ನೊಬ್ಬರ ಜೊತೆಗೆ ಸೇರಿಕೊಂಡಿರಿ ನೀವೇನು ಮಾಡಿದ್ದೀರಿ?

ಶ್ರೀ ಎನ್ ಚೆಲುವರಾಯಸ್ವಾಮಿ – ನಮ್ಮಲ್ಲಿ ಎಲ್ಲಾ ಶಕ್ತಿಯೂ ಸಹ ಇದೆ ಎಲ್ಲಿಯಾದರೂ ವ್ಯತ್ಯಾಸಗಳು ಆಗಿದ್ದರೆ ಅದನ್ನು ಸರಿಯಾಗಿ ಉಪಯೋಗಿಸಿ ಎಂದು ಹೇಳಿ ಇಡೀ ರಾಜ್ಯಕ್ಕೆ ಎಂತೆಂತಹ contributions ಕೊಟ್ಟಿರತಕ್ಕಂಥ ಜನರಿದ್ದಾರೆ ಯಾರೂ ಇಲ್ಲವೆಂದು ನೀವು ಏಕೆ ಹೇಳುತ್ತೀರಿ?

ಶ್ರೀ ಜೆ ಸಿ ಮಾಧುಸ್ವಾಮಿ – This is a marriage of convenience ಈ ಮಾತನ್ನು ನೀವೇ ಹೇಳಿದ್ದೀರಿ, ನಾವು ಹೇಳಿಲ್ಲ ಇದೊಂದು ಒಡಂಬಡಿಕೆ, ಇದು ಸೈದ್ಧಾಂತಿಕವಾದ ಲಗ್ನವಲ್ಲವೆಂದು ನೀವೇ ಹೇಳಿದ್ದೀರಿ Marriage of convenience ಎಂದರೆ ಏನೆಂದರೆ, ಹಿರಿಯ ಹೆಂಡತಿಗೆ divorce ಕೊಡುವವರೆಗೂ ಇವಳ ಜೊತೆಗೆ ಇರುವುದೇ ಆಗಿದೆ ಆ divorce accept ಆಗಲಿಲ್ಲವೆಂದರೆ ತಿರುಗಿ ನೀವು ಅಲ್ಲಿಗೇ ಹೋಗಬೇಕು ಯಾವಾಗ ಅವಳ ಜೊತೆಗೇ ಹೋಗುತ್ತೀರೋ ಎಂಬುದು ನಮಗೆ ಗೊತ್ತಿಲ್ಲ ಏನು ಬೇಕಾದರೂ ಆಗಬಹುದು ಇಲ್ಲಿ ಕೆಟ್ಟ ಭಾಷೆ ಬಳಸಬಾರದು ಕೆಡುವುದು ಒಂದೇ ಸಲ

ಶ್ರೀ ಆರ್ ಧ್ರುವ ನಾರಾಯಣ್ – ಕೆಟ್ಟವರನ್ನು ನಾವು ಪುನ ಸೇರಿಸಿಕೊಳ್ಳುವುದಿಲ್ಲ ಸಾರ್

ಶ್ರೀ ಜೆ ಸಿ ಮಾಧುಸ್ವಾಮಿ ಏನು ಮಾಡುತ್ತೀರಿ ಸಾರ್? ಒಮ್ಮೆ ನೀವು ಸೇರಿಸಿಕೊಂಡಾಗಿದೆ ಒಂದು ಸಲ ಕೆಟ್ಟ ಮೇಲೆ, ಕೆಡುವುದು ಅಭ್ಯಾಸವಾಗಿ ಬಿಡುತ್ತದೆ ಒಮ್ಮೆ ನೀವು ಕೆಟ್ಟಿದ್ದೀರಿ ನೀವು ಮತ್ತೆ ಎಲ್ಲೆಲ್ಲಿ ಹೋಗಿ ಸೇರಿಕೊಳ್ಳುತ್ತೀರೋ ಗೊತ್ತಿಲ್ಲ Conviction ಅನ್ನು ಸ್ವಲ್ಪ ಜನಗಳ ಬಗ್ಗೆಯಾದರೂ ಇಟ್ಟುಕೊಳ್ಳಿ ಅದೇ ರೀತಿ ರಾಜ್ಯದ ಬಗ್ಗೆಯೂ ಇಟ್ಟುಕೊಳ್ಳಿ

ಎರಡನೆಯದಾಗಿ, ನಾನು ಬಹಳ ನೊಂದು ಈ ಮಾತು ಹೇಳುತ್ತಿದ್ದೇನೆ ಮಂತ್ರಿಗಳು ಅವರವರ ಜಿಲ್ಲೆಗಳಿಗೆ ಮತ್ತು ಅವರವರ ಕ್ಷೇತ್ರಗಳಿಗೆ ಮಾತ್ರವೇ ಮಂತ್ರಿಗಳಾಗಿದ್ದಾರೆ ಇಲಾಖೆಗಳಿಗೆಂದು ಯಾರೂ ಮಂತ್ರಿಗಳಿಲ್ಲ ಯಾವ ಮಂತ್ರಿಗಳೂ ಸಹಿತ ಇವತ್ತು ಇಲಾಖೆ ಮಂತ್ರಿಗಳು ಎಂದು ಅನಿಸಿಕೊಳ್ಳುತ್ತಿಲ್ಲ ಆ ಇಲಾಖೆ ಏನು ಮಾಡಬೇಕು? ಆ ಇಲಾಖೆ ಕಾರ್ಯಕ್ರಮ ಏನು? ರಾಜ್ಯದಲ್ಲಿ ನನ್ನ progress ಏನಾಯಿತು? ನಾನು ಏನು ಮಾಡಬೇಕು? ಎಂಬ ಬಗ್ಗೆ ಏಕೋ ಯಾರೂ ತಲೆಗೆ ತೆಗೆದುಕೊಂಡಂತೆ ಕಾಣುವುದಿಲ್ಲ ನೀಪಾಯಿತು, ನಿಮ್ಮ ಕ್ಷೇತ್ರವಾಯಿತು, ನಿಮ್ಮ ಜಿಲ್ಲೆಯಾಯಿತು, ಇಷ್ಟಕ್ಕೇ ಮಾತ್ರ ಮಂತ್ರಿಗಳು ಸೀಮಿತವಾಗುವುದಾದರೆ ರಾಜ್ಯದ ಗತಿಯೇನು? ಹಡಗಿನಲ್ಲಿ ಪಕ್ಕದ ರೂಮಿನಲ್ಲಿ ತೂತಾಗಿದ್ದರೆ ನನಗೇನು ಎಂದು ಸುಮ್ಮನೆ ಕುಳಿತುಕೊಂಡರೆ, ಹಡಗು ಮುಳುಗಿದಾಗ ನೀವೂ ಮುಳುಗುತ್ತೀರಿ ತುಮಕೂರು ಮುಳುಗಿದಾಗ ಹಾಸನವೂ ಮುಳುಗುತ್ತದೆ, ತುಮಕೂರು ಮುಳುಗಿದಾಗ ಮಂಡ್ಯವೂ ಮುಳುಗುತ್ತದೆ, ಮಂಡ್ಯ ಮುಳುಗಿದಾಗ ಮೈಸೂರೂ ಮುಳುಗುತ್ತದೆ, ಚಿಕ್ಕಮಗಳೂರು ಮುಳುಗಿದರೆ ಹಾಸನ–ಶಿವಮೊಗ್ಗವೂ ಸಹ ಮುಳುಗುತ್ತದೆ ಸ್ವಲ್ಪ ನೀವು ಇದನ್ನೆಲ್ಲಾ ಅರ್ಥ ಮಾಡಿಕೊಂಡು ಕೆಲಸ ಮಾಡಿ ರಾಜ್ಯದ ಹಿತದೃಷ್ಟಿಯಿಂದ ತಾವು ಕೆಲಸ ಮಾಡಿ ನಮಗೆ ಸಂಕಟ ಏಕೆಂದರೆ, ನಿಮಗೆ ಇದು revenue surplus ಇರುವ, ದುಡ್ಡು ಜಾಸ್ತಿ ಇರುವ ಕಾಲ ಹಿಂದೆಲ್ಲಾ ಮಾಡಬೇಕೆನ್ನುವ ಕಾಳಜಿ ಇದ್ದವರಿಗೆ ದುಡ್ಡು ಇರಲಿಲ್ಲ ಈಗ ದುಡ್ಡು ಇದೆ, ನೀವು ಮಾಡುತ್ತಿಲ್ಲ ಮಾಡಲೇಬೇಕು ಎನ್ನುವಂತಾದಾಗ ಏನು ಮಾಡುತ್ತಿದ್ದೀರಿ? ಗಣೇಶನ ಚತುರ್ಥಿ ಎಂದು ಕಡಲೆಪುರಿ ಫಲಾಹಾರ ಮಾಡಿ ಹಂಚಿಬಿಡುವ ಕೆಲಸ ಮಾಡುತ್ತಿದ್ದೀರಿ ದಯವಿಟ್ಟು ಕೈ ಮುಗಿದು ಕೇಳಿಕೊಳ್ಳುತ್ತೇವೆ, ಫಲಾಹಾರ ಮಾಡುವುದು ನಿಲ್ಲಿಸಿ ಮಾನ್ಯ ಜಗದೀಶ್ ಶೆಟ್ಟರ್‌ರವರೆ, ಮಾಗುಳಿ ಹೊಲ ಬೇಕೋ, ಕುಯ್ದಿರುವ ರಾಗಿ ಬೇಕೋ ಎಂದು ನಮ್ಮ ಕಡೆಗೊಂದು ಗಾದೆ ಇದೆ ಕುಯ್ದಿರುವ ರಾಗಿ ತೆಗೆದುಕೊಂಡರೆ, ಅದು ಇವತ್ತೇ ಆಗಿ ಹೋಗಿ ಬಿಡುತ್ತದೆ ಮಾಗುಳಿ ಆಗಿರುವ ಹೊಲ ತೆಗೆದುಕೊಂಡರೆ ಜೀವಮಾನವೆಲ್ಲಾ ಸಾಗಿಸಬಹುದು ಯೋಜನೆಗಳನ್ನು ಮಾಡಿ ಜೀವಮಾನವೆಲ್ಲಾ ದುಡಿದುಕೊಂಡು ಬದುಕಿಕೊಳ್ಳುತ್ತೀರಿ ಯಾರಿಗೋ ಸೈಕಲ್ ಕೊಟ್ಟೆವು, ಅದನ್ನು ಕೊಟ್ಟೆವು, ಇದನ್ನು ಕೊಟ್ಟೆವು ಎಂದು ಇವತ್ತಿಗೆ ಹಸಿದಿರುವ ಹೊಟ್ಟೆಗೆ

ಊಟ ಹಾಕಿ ಬಿಟ್ಟರೆ ಅದು ಸಮರ್ಥನೀಯವಲ್ಲವೆಂದು ಹೇಳಿ, ಈ ಸರ್ಕಾರ through relıef works plan ಮಾಡಬೇಕು, ಯೋಜನೆಗಳಿಗೆ ಆದ್ಯತೆ ಕೊಡಬೇಕೆಂದು ಹೇಳಿ, ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ

ಶ್ರೀ ಮಲ್ಲಿಕಾರ್ಜುನ ಖರ್ಗೆ [ಗುರುಮಿರಕಲ್] – ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ಬರ ಪರಿಸ್ಥಿತಿ ಬಗ್ಗೆ ಅನೇಕ ವಿರೋಧ ಪಕ್ಷದ ನಾಯಕರುಗಳು ಮಾತನಾಡಿದ್ದಾರೆ ನಾನು ಹೆಚ್ಚು ಕಾಲ ತೆಗೆದುಕೊಳ್ಳದೇ, ಕೆಲವು ಪ್ರಮುಖವಾದಂತಹ ವಿಷಯಗಳನ್ನು ಸದನದ ಮತ್ತು ಸರ್ಕಾರದ ಗಮನಕ್ಕೆ ತಂದು, ಅದರ ಬಗ್ಗೆ ಅವರು ಏನು ಕಾರ್ಯಕ್ರಮವನ್ನು ರೂಪಿಸಬೇಕು ಎನ್ನುವುದರ ಬಗ್ಗೆ ಸಲಹೆಗಳನ್ನು ಕೊಟ್ಟು ನನ್ನ ಮಾತನ್ನು ಮೊಟಕುಗೊಳಿಸುತ್ತೇನೆ ಈಗಾಗಲೇ ರಾಜ್ಯದ ಸುಮಾರು 128 ತಾಲ್ಲೂಕುಗಳಲ್ಲಿ ಭೀಕರ ಬರಗಾಲ ಪರಿಸ್ಥಿತಿ ಇದೆ ಎನ್ನತಕ್ಕಂಥ ಮಾತನ್ನು ನಾವೆಲ್ಲರೂ ಕೂಡ ಒಪ್ಪಿಕೊಂಡಿದ್ದೇವೆ ಸರ್ಕಾರ ಕೂಡ ಸುಮಾರು ಎರಡು Memorandum ಅನ್ನು ಕೇಂದ್ರ ಸರ್ಕಾರಕ್ಕೆ ಕೊಟ್ಟಿದೆ ಅದೇ ರೀತಿ ಅತಿವೃಷ್ಟಿಯಿಂದ ಸುಮಾರು ಮೂರು ಜಿಲ್ಲೆಗಳು ಅತ್ಯಂತ ಹೆಚ್ಚು ನಷ್ಟಕ್ಕೆ ಒಳಗಾಗಿವೆ ಎನ್ನತಕ್ಕಂಥದ್ದನ್ನೂ ಸಹ ಸರ್ಕಾರ ಹೇಳಿದೆ ನಾವೂ ಕೂಡ ಈಗಾಗಲೇ ಆ ಭಾಗದಲ್ಲಿ ಅಡ್ಡಾಡಿ ಆ ವಿಚಾರವನ್ನು ತಿಳಿದುಕೊಂಡಿದ್ದೇವೆ ಎರಡನೆಯದಾಗಿ, ಕಳೆದ 36 ವರ್ಷಗಳಲ್ಲಿ ಇಂತಹ ಒಂದು ಕೆಟ್ಟ ಪರಿಸ್ಥಿತಿ ಬಂದಿರಲಿಲ್ಲ ಕಳೆದ 36 ವರ್ಷಗಳಲ್ಲಿ ಮೊದಲನೇ ಸಲ ಇಂತಹ ಭೀಕರವಾದಂತಹ ಬರಗಾಲ ಪರಿಸ್ಥಿತಿ ಕರ್ನಾಟಕ ರಾಜ್ಯದಲ್ಲಿ ಬಂದಿದೆ ಎಂಬ ಮಾತನ್ನು ಮಾನ್ಯ ಪ್ರಕಾಶ್‌ರವರು ಅನೇಕ ಸಾರಿ ಪ್ರಸ್ತಾಪ ಮಾಡಿದ್ದಾರೆ ಕಳೆದ 36 ವರ್ಷಗಳಲ್ಲಿ ಬಾರದೇ ಇರತಕ್ಕಂಥ ಭೀಕರವಾದಂತಹ ಬರಗಾಲ ಈ ರಾಜ್ಯದಲ್ಲಿ ಬಂದಿರುವಾಗ ತಾವೇನು ಕೆಲಸ ಮಾಡಿದ್ದೀರಿ ಎಂಬುದು ಮುಖ್ಯವಾಗುತ್ತದೆ ಕಳೆದ 36 ವರ್ಷಗಳಲ್ಲಿ ನಡೆಯದಿರತಕ್ಕಂಥ ವಾತಾವರಣ ಇಲ್ಲಿ ಸೃಷ್ಟಿಯಾದಾಗ, ಅದಕ್ಕೆ ನಿಮ್ಮ ಕೊಡುಗೆ ಏನು ? ನಿಮ್ಮ ಕೊಡುಗೆ ಏನು? ಎಷ್ಟರಮಟ್ಟಿಗೆ ತಾವು ಕೆಲಸಕಾರ್ಯಗಳನ್ನು ರೂಪಿಸಿದ್ದೀರಿ? ಇವತ್ತು ಯಾವ್ಯಾವ ಜಿಲ್ಲೆಗಳಿಗೆ ಎಷ್ಟೆಷ್ಟು ಹಣವನ್ನು ಬಿಡುಗಡೆ ಮಾಡಿ ಖರ್ಚು ಮಾಡಿದ್ದೀರಿ? ಎಷ್ಟು ಕಡೆ ಕುಡಿಯುವ ನೀರಿನ ವ್ಯವಸ್ಥೆಗಾಗಿ ಹಣವನ್ನು ಬಿಡುಗಡೆ ಮಾಡಿ ಖರ್ಚು

ಮಾಡಿದ್ದೀರಿ, ಮೇವಿನ ವ್ಯವಸ್ಥೆ ಮಾಡಿದ್ದೀರಿ? ಜಾನುವಾರುಗಳಿಗೆ ಔಷಧ ಕೊಡುವುದಕ್ಕೆ ಏನು ವ್ಯವಸ್ಥೆ ಮಾಡಿದ್ದೀರಿ? ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳ ಒಂದು ನಿಯಮದ ಪ್ರಕಾರ ಮಕ್ಕಳಿಗೆ ಪೌಷ್ಠಿಕ ಆಹಾರ ಕೊಡುವುದಕ್ಕೆ ಏನು ಮಾಡಿದ್ದೀರಿ? ಈ ಎಲ್ಲಾ ಪ್ರಶ್ನೆಗಳನ್ನು ನಾವು ಕೇಳಿದಾಗ ಖಂಡಿತವಾಗಿಯೂ ಸರ್ಕಾರದ ಹತ್ತಿರ ಉತ್ತರವಿಲ್ಲ ಏಕೆಂದರೆ, ಕೇಂದ್ರ ಸರ್ಕಾರ ಕೊಟ್ಟಂತಹ ಹಣವನ್ನು ಖರ್ಚು ಮಾಡತಕ್ಕಂತ ಶಕ್ತಿಯೇ ಸರ್ಕಾರದಲ್ಲಿಲ್ಲವೆಂದರೆ, ಸರ್ಕಾರ ಕೆಲಸ ಮಾಡಿದೆ ಎಂದು ನಾವು ಒಪ್ಪಿಕೊಳ್ಳುವುದು ಹೇಗೆ? ಮಾನ್ಯ ಮುಖ್ಯಮಂತ್ರಿಗಳು ಕೂಡ ಅನೇಕ ಸಾರಿ, ನಮ್ಮ ಸರ್ಕಾರ ಬಹಳ ಒಳ್ಳೆಯ ಕೆಲಸವನ್ನು ಮಾಡಿದೆ, ಹಿಂದೆಂದೂ ಮಾಡದತಂಹ ಕೆಲಸಗಳನ್ನು ಮಾಡಿದೆ ಎಂದು ಹೇಳಿದ್ದಾರೆ ಹೌದು ಸ್ವಾಮಿ, ಹಿಂದ್ಸೆಂದು ಮಾಡದಿರತಕ್ಕಂತಹ ಕೆಲಸವನ್ನು ಮಾಡಿದ್ದೇವೆ ಎನ್ನತಕ್ಕಂತಹವರು, ನಿಮ್ಮ ಬಜೆಟ್‌ನಲ್ಲಿ ನಮೂದು ಮಾಡಿದ ಹಣದಲ್ಲಿ ಇವತ್ತು 60% ಖರ್ಚು ಮಾಡಿಲ್ಲವೆಂದರೆ, ನೀವು ಪ್ರಗತಿ ಮಾಡಿದಂತೆಯೇ? ನಿಮ್ಮ ಬಜೆಟ್‌ನಲ್ಲಿರುವುದನ್ನು ನೀವೇ ಹೇಳಿಕೊಂಡಿದ್ದು, ನೀವೇ ರೆವ್ಯೂ ಮಾಡಿದ್ದು ಅಂದರೆ ಇನ್ನು ಈ ಎರಡು ತಿಂಗಳಲ್ಲಿ 40% ಬಜೆಟ್ ಹಣವನ್ನು ಖರ್ಚು ಮಾಡಲು ಸಾಧ್ಯವೇ? ಅಂದರೆ ಇದರ ಅರ್ಧ ಬಜೆಟ್ ನಲ್ಲಿಟ್ಟಂತಹ ಹಣವನ್ನು ಖರ್ಚು ಮಾಡಲು ನಿಮಗೆ ಪುರುಸೊತ್ತಿಲ್ಲ, ಅದನ್ನು ರೆವ್ಯೂ ಮಾಡುವುದಕ್ಕಾಗಿಲ್ಲ, ಇನ್ನು ನೀವು in addition, ಹೆಚ್ಚಿನ ಹಣವನ್ನು ಖರ್ಚು ಮಾಡಲು ಸಾಧ್ಯವೇ ? ಇವು ಇವತ್ತು ನಮ್ಮ ಮುಂದೆ ಪ್ರಮುಖವಾಗಿರುವಂತಹ ಪ್ರಶ್ನೆಗಳು ಇದಕ್ಕೆ ಉತ್ತರವನ್ನು ಕೊಡಬೇಕಾಗುತ್ತದೆ ಕೇವಲ ಹಾರಿಕೆ ಉತ್ತರಗಳನ್ನು ಕೊಟ್ಟು ಬಹಳ ಕೆಲಸವನ್ನು ಮಾಡಿದ್ದೇವೆಂದು ಹೇಳಬಹುದು, ಬಹಳ ಕೆಲಸ ನಿಮ್ಮ physical & financial targetನಿಂದ ಗೊತ್ತಾಗಬೇಕೇ ಹೊರತು, ಸುಮ್ಮನೆ ಬಾಯಿ ಮಾತಿನಿಂದ ನಾವು ಕೆಲಸ ಮಾಡಿದ್ದೇವೆಂದರೆ ಆಗುವುದಿಲ್ಲ ನೀವು ಎಷ್ಟು ಹಣವನ್ನು ಖರ್ಚು ಮಾಡಬೇಕೆಂದು ಗುರಿ ಇಟ್ಟಿದ್ದೀರಿ ? ಗುರಿ ಇಟ್ಟದ್ದರಲ್ಲಿ ಎಷ್ಟು ಹಣ ಖರ್ಚಾಗಿದೆ ಎಂಬುದು ಗೊತ್ತಾಗಬೇಕು, ಅದಕ್ಕೆ ತಕ್ಕಂತೆ ಎಷ್ಟು ಕೆಲಸಗಳನ್ನು ಮಾಡಬೇಕೆಂದು ಗುರಿಗಳನ್ನು ಇಟ್ಟಿದ್ದೀರಿ ? ಎಷ್ಟು ಕೆಲಸಗಳನ್ನು ಇವತ್ತು ತಾವು ಭೌತಿಕವಾಗಿ ಮಾಡಿದ್ದೀರಿ? ಆರ್ಥಿಕವಾಗಿ ಎಷ್ಟು ಖರ್ಚು ಮಾಡಿದ್ದೀರಿ ? ಎನ್ನುವುದರ ಮೇಲೆ ನಾವು ಸಾಧನೆಗಳನ್ನು

ಅಳೆಯಬಹುದೇ ಹೊರತು ಸುಮ್ಮನೆ ನಾನು ಸೈಕಲ್‌ಗಳನ್ನು ಕೊಟ್ಟೆ ನೋಡಿ, ನಾನು ರಸ್ತೆಗಳಿಗೆ ದುಡ್ಡು ಕೊಟ್ಟೆ ನೋಡಿ, ನಾನು ಅದು ಮಾಡಿದೆ ಎಂದು ಹೇಳಿದರೆ, ಅದು ಸಾಧನೆಯಲ್ಲ, ಅದು achievement ಅಲ್ಲ ಸೈಕಲ್ ರಿಪೇರಿಗೆ ಹೋಗಿದೆಯಂತೆ, ಅದನ್ನು ದುರಸ್ತಿ ಮಾಡಿಕೊಳ್ಳುವುದಕ್ಕೆ ಮೊನ್ನೆ ಮಾನ್ಯ ಮುಖ್ಯಮಂತ್ರಿಗಳು ಬಂಗಾರಪ್ಪನವರ ಹತ್ತಿರ ಹೋಗಿದ್ದರಂತೆ ನನ್ನ ಸೈಕಲ್ ನಿಮ್ಮ ಅಂಗಡಿಗೆ ದುರಸ್ತಿಗೆ ಬಂದಿದೆ, ದಯವಿಟ್ಟು ಬೇಗ ದುರಸ್ತಿ ಮಾಡಿ ಕಳುಹಿಸಿ ಎಂದು ಹೇಳಿದರಂತೆ ದುರಸ್ತಿ ಮಾಡುತ್ತಾರೋ ಏನೊ ಗೊತ್ತಿಲ್ಲ, ಅವರಿಬ್ಬರ ಮಧ್ಯೆದಲ್ಲೆ ಆಗಿದೆ, ಇವರ[ಬಿಜೆಪಿ] ಪರಿಸ್ಥಿತಿ ಏನಾಗುತ್ತದೆಯೋ ಗೊತ್ತಿಲ್ಲ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಇನ್ನು ವರ್ಕ್‌ಶಾಪೆ ಮಾಡಿಲ್ಲ, ದುರಸ್ತಿ ಎಲ್ಲಾಗುತ್ತದೆ?

ಶ್ರೀ ಜೆ ಸಿ ಮಾಧುಸ್ವಾಮಿ ಮೆಕ್ಯಾನಿಕ್ ಅನ್ನು ಇನ್ನು ಇವರ[ಕಾಂಗ್ರೆಸ್] ಹತ್ತಿರವೇ ಬಿಟ್ಟಿದ್ದಾರೆ ಅದು ನಿಮಗೆ ಗೊತ್ತಿಲ್ಲವೇ?

ಶ್ರೀ ವಾಟಾಳ್ ನಾಗರಾಜ್ ಖರ್ಗೆ ಸಾಹೇಬರೆ, ಇವರು ಕೊಟ್ಟಿರುವ ಸೈಕಲ್‌ಗೆ ಈಗ ಟೈರು ಹೋಗಿದೆ, ಟ್ಯೂಬ್ ಹೋಗಿದೆ, ಬೆಲ್ ಹೋಗಿದೆ, ಬೇಕ್ ಇಲ್ಲವೇ ಇಲ್ಲ, ಸೈಕಲ್ ಅನ್ನು ತಲೆಯ ಮೇಲೆ ಹೊತ್ತುಕೊಂಡು ಹೋಗಬೇಕು

ಶ್ರೀ ಹೆಚ್ ಎಸ್ ಮಹದೇವ ಪ್ರಸಾದ್ ಚಾಮರಾಜ ನಗರದಲ್ಲಿ ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರೇ ಸೈಕಲ್ ವಿತರಣೆಯನ್ನು ಸ್ವತ ಸೈಕಲ್‌ಅನ್ನು ಓಡಿಸಿ ಉದ್ಘಾಟನೆ ಮಾಡಿದ್ದಾರೆ, ಅವರು ಈಗ ಆ ಸೈಕಲ್ ಸರಿ ಇಲ್ಲವೆಂದರೆ ಹೇಗೆ?

ಶ್ರೀ ಎನ್ ಚೆಲುವರಾಯ ಸ್ವಾಮಿ ಆಗ ಹೊಸದಾಗಿತ್ತು ಈಗೆಲ್ಲಾ ಬಿದ್ದುಹೋಗಿದೆ, ಹೊಸದಾಗಿದ್ದಾಗ ಅವರು ಓಡಿಸಿದರು

ಶ್ರೀ ವಾಟಾಳ್ ನಾಗರಾಜ್ ಆ ಸೈಕಲ್‌ಗೆ ಏನಾಗಿದೆ ಎಂದರೆ ಟ್ಯೂಬ್ ಇಲ್ಲ, ಟೈರ್ ಇಲ್ಲ, ಬೆಲ್ ಇಲ್ಲ ಬೇಕ್ ಇಲ್ಲ, ಅದರ ಮೇಲೆ ಕುಳಿತುಕೊಂಡು ಹೋಗುವ ಬದಲು ಸೈಕಲನ್ನೆ ತಲೆಯ ಮೇಲೆ ಹೊತ್ತಿಕೊಂಡು ಹೋಗಬೇಕಾಗಿದೆ, ಇದು ಇರುವ ಪರಸ್ಥಿತಿ

ಶ್ರೀ ಹೆಚ್ ಎಸ್ ಮಹದೇವ ಪ್ರಸಾದ್ ನೀವೇ ಎಲ್ಲಾ ಟ್ರಯಲ್ ಮಾಡಿ ನೋಡಿ ಎಲ್ಲಾ ಬಂದೊಬಸ್ತಾಗಿದೆ ಎಂದು ಇಡೀ ಡಿಸ್ಟ್ರಿಕ್ಟ್ ಎಲ್ಲಾ

ಸೈಕಲ್ ಮೇಲೆ ಒಂದು ರೌಂಡ್ ಹಾಕಿದ್ದೀರಿ, ಈಗ ಸರಿ ಇಲ್ಲವೆಂದು ಹೇಳಿದರೆ ಅದನ್ನು ಹೇಗೆ ಒಪ್ಪುವುದಕ್ಕಾಗುತ್ತದೆ?

ಶ್ರೀ ಎಸ್ ರಾಜೇಂದ್ರನ್ ಮಾಡ್ರನ್ ಟೆಕ್ನಾಲಜಿ ಇದೆಯಲ್ಲ, ಅಂತಹ ಒಂದು ಹೊಸ ಸೈಕಲ ನ್ನು ಸರ್ಕಾರದವರು ಕೊಟ್ಟಿರುವುದು ಬಹಳ ಗಂಭೀರವಾದುದು, ಅಂತಹ ಸೈಕಲನ್ನು ನಾವು ನೋಡಬೇಕು ಸ್ವಾಮಿ

ಶ್ರೀ ವಾಟಾಳ್ ನಾಗರಾಜ್ ಅವತ್ತು ಮೊದಲನೇ ದಿವಸ ಚೆನ್ನಾಗಿತ್ತು, ಎರಡನೇ ದಿವಸ ಶುರುವಾಯಿತು ಸ್ವಾಮಿ, ಬೆಲ್ ಹೋಯಿತು, ಬ್ರೇಕ್ ಹೋಯಿತು,ಟ್ಯೂಬ್ ಹೋಯಿತು, ಟೈರ್ ಹೋಯಿತು

ಶ್ರೀ ಹೆಚ್ ಎಸ್ ಮಹದೇವ ಪ್ರಸಾದ್ ಅವರು ನಡೆಸುವ ಚಳುವಳಿಗೆಲ್ಲಾ ಈ ನಮ್ಮ ಸೈಕಲ್‌ಗಳನ್ನು ಬಳಸಿಕೊಳ್ಳಲು ಶುರು ಮಾಡಿದ್ದಾರೆ ಹಾಗಾಗಿ ಸ್ವಲ್ಪ ವ್ಯತ್ಯಾಸವಾಗಿದೆ

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ ಮಹಾರಾಜರು ಎಂದಾದರು ಸೈಕಲ್ ಮೇಲೆ ಹೋಗುತ್ತಾರಾ?

ಶ್ರೀ ಜಿ ವಿ ಶ್ರೀರಾಮರೆಡ್ಡಿ ಮಹಾರಾಜರು ಕುದುರೆ ಮೇಲೆ ಹೋಗುತ್ತಾರೆ, ಮಹಾರಾಜರಿಗೆ ಸೈಕಲ್ ಬಗ್ಗೆ ಅನುಭವವಿರುವುದಿಲ್ಲ

ಶ್ರೀ ವಾಟಾಳ್ ನಾಗರಾಜ್ ನೀವು ಮಹಾರಾಜರ ವಿಚಾರವನ್ನು ಏತಕ್ಕೆ ತಂದಿರಿ?

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ ತಾವು ಮಹಾರಾಜರು

ಶ್ರೀ ವಾಟಾಳ್ ನಾಗರಾಜ್ ನಾವು ಮಹಾರಾಜರಲ್ಲ, ವಾಟಾಳ್ ನಾಗಾರಾಜ್ ಅವರು ಯಾರು ಮಹಾರಾಜರೆಂದು ಸದನಕ್ಕೆ ಪರಿಚಯ ಮಾಡಿಕೊಟ್ಟರೆ ಸಂತೋಷ

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ ಈ ಸರ್ಕಾರದ ಆರ್ಥಿಕ ಮತ್ತು ಭೌತಿಕ ಗುರಿ ಏನಿದೆ ? ಏಕೆಂದರೆ, ಬಜೆಟ್‌ನಲ್ಲಿ ನೀರಾವರಿಗೆ ನಾವು ಇಷ್ಟು ಖರ್ಚು ಮಾಡುತ್ತೇವೆ, ಸಣ್ಣ ನೀರಾವರಿಗೆ ಇಷ್ಟು ಖರ್ಚು ಮಾಡುತ್ತೇವೆ, ಉದ್ಯೋಗ ಭರವಸೆ ಯೋಜನೆಯಲ್ಲಿ ಇಷ್ಟು ಖರ್ಚು ಮಾಡುತ್ತೇವೆಂದು ಎಲ್ಲಾ ಹೇಳಿ ಪ್ರತಿಯೊಂದಕ್ಕೂ ಗುರಿ ಕೊಟ್ಟು ಅದರಲ್ಲಿ ನಮೂದು ಮಾಡಿ, ಸದನದ ಅನುಮತಿಯನ್ನು ಪಡೆದುಕೊಂಡು ಆ ಬಜೆಟ್ ಮೂಲಕ ಹಣ ಅವರ ಕೈಸೇರುತ್ತದೆ ಅದರಲ್ಲಿ ಎಷ್ಟು ಖರ್ಚು ಮಾಡಿದ್ದೇವೆ ಎನ್ನುವುದು ಇಲ್ಲಿಯವರೆಗೆ ಗೊತ್ತಿಲ್ಲ ಸಹಜವಾಗಿ ಯಾವಾಗಲಾದರು ರೆವ್ಯೂ ಮಾಡುವಾಗ ಮಾತ್ರ ಅವರು ಹೇಳುವುದು, ಇದು ದುರ್ದೈವ, ನಮ್ಮ ಬಜೆಟ್

ನಲ್ಲಿರುವ ಹಣದಲ್ಲಿ 40% ಕೂಡ ಖರ್ಚಾಗಿಲ್ಲವೆಂದು ಒಂದು ಸಾರಿ ಹೇಳುತ್ತಾರೆ ಪುನ ಇದನ್ನು ನಾವೆಲ್ಲಾ ಟೀಕೆ ಮಾಡಿದಾಗ, ಈಗಾಗಲೇ 50% ಖರ್ಚಾಗಿದೆ, ಎಂದು ಹೇಳುತ್ತಾರೆ ಇತ್ತೀಚೆಗೆ, 60% ಖರ್ಚಾಗಿದೆ ಇನ್ನು ಉಳಿದದ್ದು ಮಾರ್ಚ್ ಒಳಗೆ ಖರ್ಚು ಮಾಡುತ್ತೇವೆಂದು ಹೇಳುತ್ತಾರೆ ಇದರ ಅರ್ಥ, ಅಭಿವೃದ್ಧಿ ಮಾಡತಕ್ಕಂತಹವರು ಅಧವಾ ನಾವು ಅಭಿವೃದ್ಧಿಪರವಿದ್ದೇವೆಂದು ಹೇಳುವ ಈ ಎರಡೂ ಪಕ್ಷದವರು ಸೇರಿ ಸರ್ಕಾರವನ್ನೇನು ಮಾಡಿದ್ದಾರೆ, ಇವರು ಹಣವನ್ನು ಖರ್ಚು ಮಾಡಿ ಇನ್ನು ಹೆಚ್ಚಿನ ಅಭಿವೃದ್ಧಿಯನ್ನು ಮಾಡಿದ್ದರೆ ನಮ್ಮ ಹತ್ತಿರ ಸಪ್ಲಿಮೆಂಟರಿ ಬಜೆಟ್‌ಗೆ ಬರಬಹುದಾಗಿತ್ತು ಏಕೆಂದರೆ, ಅದು ಮುಗಿದು ಹೋಯಿತು ನಮ್ಮಲ್ಲಿ ಹಚ್ಚಿನ ಹಣ ಉಳಿದಿದೆ, ಟ್ರಜರಿಯಲ್ಲಿ ಬಹಳ ದುಡ್ಡಿದೆ, ಅದಕ್ಕೆ ನಾವು ಅಡಿಷನಲ್ ವರ್ಕ್ ತೆಗೆದುಕೊಂಡಿದ್ದೇವೆಂದು ಬೆಳಗಾಂ ಅಧಿವೇಶನದಲ್ಲಾದರೂ ತರಬಹುದಾಗಿತ್ತು, ಇಲ್ಲ ಈ ಅಧಿವೇಶನದಲ್ಲಾದರೂ ಬರಬೇಕಾಗಿತ್ತು, ಅದೂ ಇಲ್ಲ, ನಿಮ್ಮಲ್ಲಿ ಈ ರೀತಿ ಇರುವುದು ಒಂದು ಕಡೆ ಎರಡನೆಯದಾಗಿ, ಕೇಂದ್ರ ಸರ್ಕಾರದಿಂದ ಸಿಕ್ಕ ಹಣವನ್ನೂ ಕೂಡ ಖರ್ಚು ಮಾಡುವ ಶಕ್ತಿ ಈ ಸರ್ಕಾರಕ್ಕೆ ಇಲ್ಲವೆಂದರೆ ನಾವೇನು ಹೇಳೋಣ ಕೇಂದ್ರ ಗೃಹ ಸಚಿವರಾದ ಸನ್ಮಾನ್ಯ ಶಿವರಾಜ್ ಪಾಟೀಲ್ ರವರು ರಾಜ್ಯಕ್ಕೆ ಬಂದಾಗ 250 ಕೋಟಿ ರೂಪಾಯಿಗಳನ್ನು ಪ್ರಕಟಿಸಿ ಅತಿವೃಷ್ಟಿಗೆ ಬಿಡುಗಡೆ ಮಾಡಿದ್ದಾರೆ ಅದನ್ನು ಕೊಟ್ಟ ಮೇಲೆ, ಇವರಿಗೆ ಇದುವರೆವಿಗೆ ಸಿಕ್ಕಂತ ಹಣ, 250 ಕೋಟಿ ರೂಪಾಯಿಗಳಲ್ಲದೆ, 2005–6ರಲ್ಲಿ CRF ನಲ್ಲಿ 86 ಕೋಟಿ ರೂಪಾಯಿಗಳು, NCCF ನಲ್ಲಿ 358 ಕೋಟಿ ರೂಪಾಯಿಗಳು ಮತ್ತು 2,52,000 ಮೆಟ್ರಿಕ್ ಟನ್‌ಗಳ ಆಹಾರಧಾನ್ಯ ಇಷ್ಟೊಂದು ನಿಮಗೆ ಕೇಂದ್ರ ಸರ್ಕಾರದಿಂದ ಬಂದಿದೆ ಇದಲ್ಲದೆ 2006–7ನೇ ಸಾಲಿನಲ್ಲು ಕೂಡ CRFನಲ್ಲಿ 9 ಕೋಟಿ 28 ಲಕ್ಷ ರೂಪಾಯಿಗಳು, NCCFನಲ್ಲಿ 226 ಕೋಟಿ 30 ಲಕ್ಷ ರೂಪಾಯಿಗಳು ಮತ್ತು 50,000 ಮೆಟ್ರಿಕ್ ಟನ್‌ಗಳ ಆಹಾರಧಾನ್ಯ ಬಿಡುಗಡೆಯಾಗಿದೆ ಇವತ್ತು ಇಷ್ಟೊಂದು ಆಹಾರಧಾನ್ಯ ಹಾಗೂ ಹಣ ನಿಮಗೆ ಸಿಕ್ಕಿದ ಮೇಲೆ ಎಷ್ಟನ್ನು ನೀವು ಖರ್ಚು ಮಾಡಿದ್ದೀರಿ? ನಿಮಗೆ ಹಣ ಸಿಕ್ಕ ಮೇಲೆ ಎಲ್ಲೆಲ್ಲಿ ಎಷ್ಟು ನೀವು ಇದನ್ನು ಖರ್ಚು ಮಾಡಿದ್ದೀರಿ, ಏಕೆಂದರೆ 128 ತಾಲ್ಲೂಕುಗಳಲ್ಲಿ ಬರಗಾಲ ಇದೆ Out of 176 taluks 128 ತಾಲ್ಲೂಕುಗಳಲ್ಲಿ ಭೀಕರವಾದ ಬರಗಾಲ ಇದೆ ಎಂದು

ನಾವೆಲ್ಲರೂ ಒಪ್ಪಿಕೊಂಡಿದ್ದೇವೆ ಎಲ್ಲ ಕಡೆಯಿಂದ ವರದಿ ಕೂಡ ಇದೆ ನಾನು ಕೂಡ ನಮ್ಮ KPCC ಪರವಾಗಿ ಅನೇಕ ಕಡೆ ಟೀಮ್‌ಗಳನ್ನು ಕಳುಹಿಸಿದ್ದೆ ತಮಗೆ ಗೊತ್ತಿದೆ ಪ್ರತಿ ಜಿಲ್ಲೆಗೆ ನಮ್ಮ ಕಾರ್ಯಕರ್ತರನ್ನು, ಶಾಸಕರನ್ನು ಮತ್ತು ಪಾರ್ಲಿಮೆಂಟ್ ಮೆಂಬರ್‌ನ್ನು ಕಳುಹಿಸಿ ಅಲ್ಲಿರತಕ್ಕಂತಹ ಜಿಲ್ಲಾಧಿಕಾರಿಗಳನ್ನು ಭೇಟಿ ಮಾಡಿ ಸಂಬಂಧಪಟ್ಟ ತಾಲ್ಲೂಕುಗಳಲ್ಲಿ ಸಂಬಂಧಪಟ್ಟ ಸಬ್ ಡಿವಿಷನ್ ಅಸಿಸ್ಟೆಂಟ್ ಕಮಿಷನರ್‌ನ್ನು ಭೇಟಿ ಆಗಿ ಎಷ್ಟು ಹಣ ಬಂದಿದೆ, ಎಷ್ಟು employment ಜನರೇಟ್ ಆಗಿದೆ ಮತ್ತು ಕುಡಿಯುವ ನೀರಿಗೆ ಏನು ವ್ಯವಸ್ಥೆ ಮಾಡಿದ್ದಾರೆ, ಮೇವಿಗೆ ಏನು ವ್ಯವಸ್ಥೆ ಮಾಡಿದ್ದಾರೆ, ಜಾನುವಾರುಗಳಿಗೆ ಎಂತಹ ವ್ಯವಸ್ಥೆ ಆಗಿದೆ ಎನ್ನತಕ್ಕಂಥದ್ದರ ಬಗ್ಗೆ ಇಡೀ ರಾಜ್ಯದಲ್ಲಿ ಅಡ್ಡಾಡಿ ಮಾಹಿತಿಯನ್ನು ತಂದಿದ್ದಾರೆ ನಾನು ಅವೆಲ್ಲವನ್ನು ಹೇಳಿಕೊಂಡು ಹೋದರೆ ಸಾಕಷ್ಟು ಸಮಯ ಹಿಡಿಯುತ್ತದೆ ಮತ್ತು ಆ ವರದಿ ಬೇಕಾದರೆ ನಾನು ಕನ್‌ಸಾಲಿಡೇಟ್ ಮಾಡಿ ಅವರಿಗೆ ಕಳುಹಿಸುತ್ತೇನೆ ಈ ಮಾತು ಏಕೆ ಹೇಳುತ್ತಿದ್ದೇನೆ ಎಂದರೆ, ಒಂದು ಕಡೆ ಕೇಂದ್ರ ಸರ್ಕಾರದ ಹಣ ಕೊಟ್ಟರೂ ಕೂಡ ನೀವು ಸರಿಯಾಗಿ ಖರ್ಚು ಮಾಡುತ್ತಿಲ್ಲ ಇನ್ನೊಂದು ಕಡೆ ಎಲ್ಲೋ casual ಆಗಿ ಮೀಟಿಂಗ್ ಮಾಡುವುದು, ಭಾಷಣದಲ್ಲಿ ಹೇಳುವುದು, press conference ನಲ್ಲಿ ಹೇಳುವುದು, ಕೇಂದ್ರ ಸರ್ಕಾರ ನಮಗೆ ಮಲತಾಯಿ ಧೋರಣೆ ಅನುಸರಿಸುತ್ತಿದೆ ಎಂದು ಹೇಳುವುದು ಕೊಟ್ಟಂತಹ ಹಣ ಖರ್ಚು ಮಾಡಿ ನಮಗೆ ಹಣ ಬೇಕೆಂದು ಅಲ್ಲಿ ಹೋಗಿ ಕುಳಿತು ಹೋರಾಟ ಮಾಡಿ ಹಣ ತರಬೇಕು ಅದು ಬಿಟ್ಟು ಮಲತಾಯಿ ಧೋರಣೆ ಎಂದು ಹೇಳಿ ಇಲ್ಲಿ ಕುಳಿತು ಬಿಡುವುದು ಇದ್ದ ದುಡ್ಡನ್ನು ಕೂಡ ಖರ್ಚು ಮಾಡದಿರುವುದು, ಇವರು ಖರ್ಚು ಮಾಡಿದ್ದು ಎಷ್ಟು, ಇವರ ರಾಜ್ಯ ಸರ್ಕಾರದ ಪಾಲು ಏನಿದೆ, Natural calamity ಯಲ್ಲಿ ಇವರ ಪಾಲು ಎಷ್ಟು ಕೊಡಬೇಕೆಂದು ಇದೆ 2005–06ರಲ್ಲಿ 149 ಕೋಟಿ, 2006–07ರಲ್ಲಿ 153 ಕೋಟಿ ಇದು ಹೆಚ್ಚು ಕಡಿಮೆ 300 ಕೋಟಿ ರೂಪಾಯಿ ಆಗುತ್ತದೆ ಅದು ಎಲ್ಲವೂ ಕೂಡ ಸೇರಿದರೆ ಹಚ್ಚು ಕಡಿಮೆ 800 ಕೋಟಿ, 775 ಕೋಟಿ ರೂಪಾಯಿ ಆದರೆ, ಸುಮಾರು 300 ಎಂದರೆ ಸಾವಿರ ಕೋಟಿ ರೂಪಾಯಿ ಆಗುತ್ತದೆ ಸಾವಿರ ಕೋಟಿ ರೂಪಾಯಿಗಳಲ್ಲಿ ಯಾವ ಯಾವ ಬಾಬತ್ತಿಗೆ ಎಷ್ಟೆಷ್ಟು ನೀವು ಖರ್ಚು ಮಾಡಿ, ಇಂತಹ ಭೀಕರ ಬರಗಾಲ ಇದೆ ಎಂದು ಹೇಳಿ

additional ಆಗಿ ಇವತ್ತಿನ ದಿವಸ ಪತ್ರದಲ್ಲಿ ಕೇಳಿರಬಹುದು ಆದರೆ ಜಿಲ್ಲೆಯಲ್ಲಿ ನಿಮ್ಮ account ಏನಿದೆ, PD account ನಲ್ಲಿ 153 ಕೋಟಿ ರೂಪಾಯಿಗಳು ಇದೆ, ಎಂದರೆ ಅದು ಖರ್ಚು ಮಾಡಿದ ಹಾಗೆ ಆಗುತ್ತದೆಯೇ ? All right, ನನಗೂ ಗೊತ್ತಾಗುತ್ತದೆ, ಏಕೆಂದರೆ 153 ಕೋಟಿ ಯಾವುದೋ committed ಕೆಲಸಕ್ಕಾಗಿ ಅಲ್ಲಿ ಇಟ್ಟಿದ್ದಾರೆ, ಬೇಕಾದ ಹಾಗೆ ತೆಗೆದು ಕೊಳ್ಳುತ್ತಾರೆ ಎಂದರೆ ಒಪ್ಪಬಹುದು ಆದರೆ ಅಧಿವೇಶನ ಕರೆಯುತ್ತಾರೆಂದರೆ ನೀವು ಹಣ ಬಿಡುಗಡೆ ಮಾಡುವುದು ಬೆಳಗಾಂ ಅಧಿವೇಶನ ಕರೆದಾಗ ಒಂದೊಂದು ಕೋಟಿ ಎಂದು ಹೇಳಿ 50–50 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದಿರಿ ಅದಾದ ನಂತರ 50 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದಿರಿ ಪುನ ಈ ಅಧಿವೇಶನ ಕರೆದಿದ್ದಾರೆಂದು ಮೊನ್ನೆ ನಿಮ್ಮ ಸರ್ಕಾರದ ಆದೇಶ ಹೊರ ಬಿದ್ದಿದೆ ಒಂದೊಂದು ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದೀರಿ ಇದು ಕೆಲಸ ಮಾಡತಕ್ಕಂತಹ ವಿಧಾನ ಬರಗಾಲ ನೆನ್ನೆಯಿಂದ ಇದೆಯಾ? ಇವತ್ತು ನೀವು ಹಣ ಬಿಡುಗಡೆ ಮಾಡುವುದಕ್ಕೆ 6–8 ತಿಂಗಳುಗಳಿಂದ ನಾವು ಒದ್ದಾಡುತ್ತಿದ್ದೇವೆ ಎಲ್ಲರೂ ಮಾತನಾಡುತ್ತಿದ್ದೇವೆ ನೀವು ಕೂಡ ಕೇಂದ್ರ ಸರ್ಕಾರದ ಹತ್ತಿರ ಒಂದೆರಡು ಸಾರಿ ಹೋಗಿ ಬಂದಿರಿ ದುಡ್ಡು ಬಂದ ಮೇಲೆ ಕೂಡ ಇಂತಹ ಒಂದು ಕೆಲಸ ತಾವು ಮಾಡತಕ್ಕಂತಹ ಶಕ್ತಿ ಇಲ್ಲವೆಂದರೆ ತಾವು ಏಕೆ ಇರಬೇಕು? ಅಧಿಕಾರ ಹಿಡಿಯತಕ್ಕಂಥದ್ದೇ ಒಂದು ದೊಡ್ಡ ಕೆಲಸವಾ? ಅಧಿಕಾರ, ಏತಕ್ಕೋಸ್ಕರ ಅಧಿಕಾರ, ಜನರ ಸಮಸ್ಯೆಗೆ ಸ್ಪಂದಿಸಿ ಒಳ್ಳೆಯ ಕೆಲಸ ಮಾಡುವುದಕ್ಕೋಸ್ಕರ ಎಂದು ಹೇಳಿ ನೀವು ಬಂದಿದ್ದು ನಾನು ಏನೋ ಬರಗಾಲದ ಬಗ್ಗೆ ಚಿಂತನೆ ಮಾಡುವುದಕ್ಕೆ ಇವರು ಶಿಬಿರಗಳನ್ನು ಮಾಡುತ್ತಿದ್ದಾರೆ, ಅವರ MLA ಗಳಿಗೆ training ಕೊಡುತ್ತಿದ್ದಾರೆ, ಅವರ ಮಂತ್ರಿಗಳಿಗೆ ಯಾವ ಯಾವ account ನಲ್ಲಿ ಎಷ್ಟು ಹಣ ಇರುತ್ತದೆ, ಯಾವ ಯಾವ ಬಜೆಟ್‌ನಲ್ಲಿ ಎಷ್ಟು ಕೇಂದ್ರ ಸರ್ಕಾರದ ಹಣ ಬರುತ್ತದೆ, ರಾಜ್ಯ ಸರ್ಕಾರದ ಪಾಲು ಇರುತ್ತದೆ ಹೇಗೆ ಖರ್ಚು ಮಾಡಬೇಕು, ಹೇಗೆ ಅಭಿವೃದ್ಧಿ ಮಾಡಬೇಕು, ಹೇಗೆ ನಂಜುಂಡಪ್ಪ ವರದಿ ಅನುಷ್ಠಾನಕ್ಕೆ ತರಬೇಕು, ಹೇಗೆ ಈ ತಾರತಮ್ಯವನ್ನು ಹೋಗಲಾಡಿಸಬೇಕು, ಇದರ ಬಗ್ಗೆ ಚಿಂತನೆ ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೆ ಆದರೆ ಇವರು ಪೂನಾ ರಿಸಾರ್ಟ್‌ನಲ್ಲಿ ಹೋಗಿ ಮಾಡುವುದು ಏನೆಂದರೆ

ಅಧಿಕಾರದಲ್ಲಿ ಉಳಿಯುವುದಕ್ಕೋಸ್ಕರ ಏನೇನು ಮಾಡುವುದು, ಯಾರ್ಯಾರಿಗೆ ಹಿಡಿದುಕೊಳ್ಳುವುದು, ಯಾರ್ಯಾರಿಗೆ ಹಣ ಕೊಡುವುದು, ಅಥವಾ ಯಾರಿಗೆ ಹೆಚ್ಚಿನ ಶಕ್ತಿ ಕೊಡುವುದು, ಯಾರನ್ನು ಮಂತ್ರಿಗಳನ್ನಾಗಿ ಮಾಡುವುದು, ಯಾರಿಗೆ Chairman ಮಾಡುವುದು, ಯಾರಿಗೆ ಸೈಟ್ ಕೊಡುವುದು, ಯಾರಿಗೆ ಬೆಂಬಲವನ್ನು ಕೊಡುವುದು, ಯಾರಿಗೆ ನಮ್ಮವರು ಎಂದು ಹೇಳಿ ಸಮಾಧಾನ ಮಾಡುವುದು ಇದೇ ಕೆಲಸ ಯಾರಿಗೆ ಮುಜುಗರಕ್ಕೆ ಸಿಕ್ಕಿಸುವುದು ಯಾರ ಮೇಲೆ ಕೇಸ್ ಹಾಕಬೇಕು, ಯಾರಿಗೆ ಕಮ್‌ಸೋರ್ ಮಾಡಬೇಕು, discretionary amount ಇದ್ದರೂ ಕೂಡ ಅದು ಇಡೀ ರಾಜ್ಯಕ್ಕೆ ಇದೆ ಬರೀ ನಿಮಗೋಸ್ಕರ ಇದೆಯಾ? ನಿಮಗೆ ಓಟು ಕೊಟ್ಟವರು ನಮ್ಮ ಕ್ಷೇತ್ರದಲ್ಲಿರುತ್ತಾರೆ, ನಮಗೆ ಓಟು ಕೊಟ್ಟವರು ನಿಮ್ಮ ಕ್ಷೇತ್ರದಲ್ಲಿರುತ್ತಾರೆ ಆದರೆ ಇದೆಲ್ಲವನ್ನೂ ಕೂಡ ನೀವು ಕೇವಲ ಪಾರ್ಟಿ ಬೇಸಿಸ್ ಮೇಲೆ ಮಾಡುವುದು, ನಾವು ಒಂದೂ ಕೂಡ ಪಾರ್ಟಿ ಬೇಸಿಸ್ ಮೇಲೆ ಮಾಡುವುದಿಲ್ಲ ಏನಾದರೂ ಒಂದು ತಾಲ್ಲೂಕಿಗೆ ಯಾವುದಾದರೂ ಒಂದು additional scheme ಹೋಗಿರಬಹುದು, ಅಥವಾ ಎರಡು ಹೋಗಿರಬಹುದು ಆದರೆ ನೀವು ಹಾಗಿಲ್ಲ ಸಾರಾಸಗಟಾಗಿ ಒಂದು instruction ಇದೆ First JD(S) ಮುಖಂಡರು ಯಾರಿದ್ದಾರೆ, MLA ಯಾರಿದ್ದಾರೆ ಅವರ ಕೆಲಸ ನೀವು ಮಾಡಬೇಕು, ಅಧಿಕಾರಿಗಳನ್ನು ಕರೆಸಿ ಅವರಿಗೆ instruction ಕೊಡುತ್ತಾರೆ "ರಾಜ್ಯವ್ಯಾಪಿ ಅವರು ಏನೇ ಕೇಳಿದರೂ ಮೊದಲು ಅವರ ಕೆಲಸ ಮಾಡಬೇಕು ಎರಡನೆಯದು BJPಯವರು ಅವರ ಮತ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಕೆಲಸ ಮಾಡಬೇಕು ಮೂರನೆಯದು ಕಾಂಗ್ರೆಸ್‌ನವರದು ಯಾವುದೂ ಕೂಡ ನಾವು ಹೇಳುವವರೆಗೆ ಮಾಡಬಾರದು" These are the instructions given to the officers ಈ ರೀತಿಯಾಗಿ ರಾಜ್ಯ ನಡೆದರೆ ಹೇಗೆ? ನಿಮ್ಮ discretion ಇರುತ್ತದೆ But, you must use that discretion judiciously ನ್ಯಾಯವಾಗಿ ಅದನ್ನು ಉಪಯೋಗ ಮಾಡಿಕೊಳ್ಳಬೇಕೇ ಹೊರತಾಗಿ, ನೀವು ನನಗೆ ಅಧಿಕಾರ ಇದೆ ಎಂದು ಹೇಳಿ ಹೇಗೆ ಬೇಕು ಹಾಗೆ ಮಾಡಿದರೆ ರಾಜ್ಯ ಎಲ್ಲಿಗೆ ಹೋಗುತ್ತದೆ? ನಾವು ಎಲ್ಲಿಗೆ ಹೋಗುತ್ತೇವೆ, ಅದಕ್ಕೆ ಇವತ್ತು , ಅನೇಕ ಸಮಸ್ಯೆಗಳು ಇರುತ್ತವೆ, schemeಗಳು ಇರುತ್ತವೆ

ವಿರೋಧಪಕ್ಷದವರು ಮತ್ತು ಆಡಳಿತ ಪಕ್ಷದವರು co–ordination ಮಾಡಿ ಅಂತಹ ಕಾರ್ಯಕ್ರಮಗಳನ್ನು implement ಮಾಡಬೇಕಾಗುತ್ತದೆ ಆದರೆ ನಾವು ಅವರು ಯಾರನ್ನೂ ಕೂಡ ಗಣನೆಗೆ ತೆಗೆದುಕೊಂಡಿಲ್ಲ ಅದು ಕೇಳುವುದೇ ಇಲ್ಲ ಮಟ್ಟ ಹಾಕಿರಿ ಎಂದು ಹೇಳುತ್ತಾರೆ ನಾನು ಇವತ್ತು ಈ ಎಲ್ಲ figures ಕೊಡುತ್ತೇನೆ ಇದರಲ್ಲಿ ಖರ್ಚು ಮಾಡಿದ್ದು ಎಷ್ಟು? ನೀವು ಮೊನ್ನೆ ಇನ್ನು ಹಣ ಬಿಡುಗಡೆ ಮಾಡಿದ್ದೀರಿ ಎಂದರೆ ಎಲ್ಲಿಂದ ಖರ್ಚು ಮಾಡುತ್ತೀರಿ? ಬೆಳಗಾಂ ಅಧಿವೇಶನದಲ್ಲಿ ಬಿಡುಗಡೆ ಮಾಡಿದ 100 ಕೋಟಿ, ಈಗ ಒಂದು 100 ಕೋಟಿ, ಇನ್ನು 28 ತಾಲ್ಲೂಕುಗಳಿಗೆ ದುಡ್ಡು ಕೊಟ್ಟಿಲ್ಲ ತಾವೇನು ಮೊನ್ನೆ ಹಣ ಬಿಡುಗಡೆ ಮಾಡಿದ್ದೀರಿ, ಅದರಲ್ಲಿ ಸುಮಾರು ಇನ್ನು 28 ತಾಲ್ಲೂಕುಗಳಿಗೆ ಹಣ ಕೊಟ್ಟಿಲ್ಲ ನಿಮ್ಮ ಸಚಿವಾಲಯದಿಂದ ಹೊರಡಿಸಿರುವಂತಹ ಸರ್ಕಾರದ ಆದೇಶ ಅದರಲ್ಲಿ ಸುಮಾರು ಇನ್ನು 28 ತಾಲ್ಲೂಕುಗಳಿಗೆ ಹಣ ಇಲ್ಲ ಏಕೆ ಈ ತಾಲ್ಲೂಕುಗಳಿಗೆ ಹಣ ಬಿಡುಗಡೆಯಾಗಿಲ್ಲ? 100 ತಾಲ್ಲೂಕುಗಳಿಗೆ ಒಂದೊಂದು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ ಟೆಜರಿಯಲ್ಲಿ ಹಣ ಇಲ್ಲ ಅದಕ್ಕೋಸ್ಕರ ಇನ್ನು 28 ತಾಲ್ಲೂಕುಗಳಿಗೆ ಹಣ ಇಲ್ಲ.

ಶ್ರೀ ಜಗದೀಶ್ ಶೆಟ್ಟರ್ 28 ತಾಲ್ಲೂಕುಗಳಿಗೆ ಹಣ ಬಿಡುಗಡೆ ಆಗುತ್ತಿದೆ.

ಶ್ರೀ ಮಲ್ಲಿಕಾರ್ಜುನ ಎಂ ಖರ್ಗೆ ಆಮೇಲೆ ಆಗುತ್ತದೆ ಆದರೆ ಇದರ ಜೊತೆಯಲ್ಲಿ ಏಕೆ ಹಣ ಬಿಡುಗಡೆ ಆಗಲಿಲ್ಲ?

ಶ್ರೀ ಜಗದೀಶ್ ಶೆಟ್ಟರ್ ನೀವು ಆಗಲೇ ಒಂದು ಸಾವಿರ ಕೋಟಿ ರೂಪಾಯಿ ಕೇಂದ್ರ ಸರ್ಕಾರದಿಂದ ಬರುತ್ತದೆ ಎಂದು ಹೇಳಿದಿರಿ ಉತ್ತರ ಹೇಳುವಾಗ ನಾನು ಅದೆಲ್ಲವನ್ನೂ ಹೇಳುತ್ತೇನೆ ಒಂದು ಸಾವಿರ ಕೋಟಿ ರೂಪಾಯಿಗಳಷ್ಟು ಕೇಂದ್ರದಿಂದ ಹಣ ಬಂದಿದೆ ಎಂದು ಹೇಳಿದಿರಿ.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ ತಾವು ಹಾಗೆ mistake ಮಾಡಿಕೊಳ್ಳಬೇಡಿ ನಾನು ಹಣ ಯಾವಾಗ ಯಾವಾಗ ಬಂದಿತ್ತು ಎಂದು ಹೇಳಿದೆ ಒಟ್ಟಾರೆ natural calamity ಯಲ್ಲಿ ಅತೀವೃಷ್ಟಿ ಮತ್ತು ಅನಾವೃಷ್ಟಿ ಇವೆರಡಕ್ಕೂ ಸೇರಿ ರಾಜ್ಯ ಸರ್ಕಾರದ 300 ಕೋಟಿ ರೂಪಾಯಿಗಳು, ಕೇಂದ್ರ ಸರ್ಕಾರ ಕೊಟ್ಟಂತಹ 700 ಕೋಟಿ ರೂಪಾಯಿಗಳು ಎರಡೂ ಸೇರಿ ಸಾವಿರ ಕೋಟಿ ರೂಪಾಯಿ ಎನ್ನತಕ್ಕಂಥದ್ದು ಇದೆ ಮತ್ತೆ ನಿಮಗೆ ಗೊತ್ತಿದೆ,

ಯಾವಾಗಲೂ ಅತಿವೃಷ್ಟಿ ಇರಲಿ, ಅನಾವೃಷ್ಟಿ ಇರಲಿ, ಭೀಕರವಾದಂಥ ಪರಿಸ್ಥಿತಿ ಇದ್ದಾಗ ಎಲ್ಲ ಕೆಲಸಗಳನ್ನು ನಿಲ್ಲಿಸಿ ನೀವು ಹಣವನ್ನು ಖರ್ಚು ಮಾಡತಕ್ಕಂಥ ಒಂದು ಪ್ರಯತ್ನವನ್ನು ಮಾಡಬೇಕು ಈ ರೀತಿ ಯಾವಾಗಲೂ ಎಲ್ಲ ಸರ್ಕಾರಗಳು ಮಾಡಿವೆ ಈವನ್ ನೀರಾವರಿ ಯೋಜನೆಯನ್ನೂ ಕೂಡ ನಿಲ್ಲಿಸಿ ತಾತ್ಪರ್ತಿಕವಾಗಿ ಬರಗಾಲಕ್ಕೆ ಹೆಚ್ಚಿನ ಹಣವನ್ನು ಕೊಡಬೇಕಾಗುತ್ತದೆ ಹಿಂದೆಲ್ಲಾ ಬಿಲ್ಡಿಂಗ್ ಕೆಲಸವನ್ನು ನಿಲ್ಲಿಸಿ ಹಣವನ್ನು ಕೊಟ್ಟಿದ್ದಾರೆ, ರಸ್ತೆ ಕೆಲಸವನ್ನು ನಿಲ್ಲಿಸಿ ಕೊಟ್ಟಿದ್ದಾರೆ ಆದರೆ ಇಲ್ಲಿ ಆ ರೀತಿ ನಿಲ್ಲಿಸುವುದು ಬೇರೆ ವಿಷಯ ಕೇಂದ್ರ ಸರ್ಕಾರ ಕೊಟ್ಟಂಥ ಹಣವನ್ನು ಖರ್ಚು ಮಾಡತಕ್ಕಂಥ ಕೆಲಸವನ್ನೂ ಮಾಡಿಲ್ಲವಲ್ಲ ಸ್ವಾಮಿ ನಿಮ್ಮ ಜಿ ಓ ನೇ ಎರಡು ತಿಂಗಳ ಹಿಂದೆ, ಒಂದು ತಿಂಗಳ ಹಿಂದೆ ಬಂದರೆ ಅದು ಖರ್ಚು ಮಾಡಿದಂತಾಗುತ್ತದೆಯೆ ? ಯಾವಾಗ ಸೆಶನ್ ಬರುತ್ತದೆ ಎಂಬುದು ಗೊತ್ತಾದಾಗ ಮಾತ್ರ ಅಲರ್ಟ್ ಆಗಿ ಹಣವನ್ನು ರಿಲೀಸ್ ಮಾಡುವುದು ಇಲ್ಲದೇ ಹೋದರೆ ಅದರ ಗೋಜಿಗೇ ಹೋಗುವುದಿಲ್ಲ ಬರೇ ರೆಸಾರ್ಟ್‌ನಲ್ಲಿ ಮೀಟಿಂಗ್ ಮಾಡುವುದು ಅಥವಾ ತಮಗೆ ಎಲ್ಲಿ ಬೇಕೋ ಅಲ್ಲಿ ಮಾತನಾಡಿಕೊಂದು ಅದನ್ನು ಅಲ್ಲಿಗೇ. ಬಿಟ್ಟುಬಿಡುವುದು ಅದೊಂದನ್ನು ಬಿಟ್ಟರೆ ಇವರಿಗೆ ಬೇರೆ ಕೆಲಸವಿಲ್ಲ ಶ್ರೀಮಾನ್ ಎಂ ಪಿ ಪ್ರಕಾಶ್‌ರವರ ಅಧ್ಯಕ್ಷತೆಯಲ್ಲಿ ಇವ್ವೊತ್ತು ರಾಜ್ಯಮಟ್ಟದಲ್ಲಿ ಟಾಸ್ಕ್‌ಫೋರ್ಸ್‌ಗಳನ್ನು ಮಾಡಿದ್ದಾರೆ ಅವರು ಹಿಂದೆ ರೆವಿನ್ಯೂ ಮಿನಿಸ್ಟರ್ ಆಗಿದ್ದರು, ಅದಕ್ಕೆ ಬಹುಶ ನಾನು ರೆವಿನ್ಯೂ ಮಿನಿಸ್ಟರೆ ಇದ್ದೇನೆ, ನಾನೇ ಇರುತ್ತೇನೆ ಎಂದ ಹಾಗೆ ಆಯಿತು ಪುನ ಈಗ ಹೋಂ ಮಿನಿಸ್ಟರ್ ಆದಮೇಲೂ ಕೂಡ ಅವರೇ ಇದ್ದಾರೆ ರೆವಿನ್ಯೂ ಮಿನಿಸ್ಟರ್ ಹೆಚ್ಚು ಕಡಿಮೆ ಎನ್ ಸಿ ಸಿ ಎಫ್ ಫಂಡ್‌ನ್ನು ತರತಕ್ಕಂಥದ್ದು, ಡಿಸ್ಟ್ರಿಬ್ಯೂಟ್ ಮಾಡತಕ್ಕಂಥದ್ದು ಇವರ ಆಧ್ಯಕ್ಷತೆಯಲ್ಲಿಯೇ ಆಗುತ್ತದೆ ಅದಕ್ಕೆ ನೀವು ತಾಲ್ಲೂಕು ಮಟ್ಟದಲ್ಲಿ ಟಾಸ್ಕ್‌ಫೋರ್ಸ್‌ಗಳನ್ನು ಮಾಡಿದ್ದೀರಿ ಎಷ್ಟು ಟಾಸ್ಕ್‌ಫೋರ್ಸ್ ಮೀಟಿಂಗ್‌ಗಳು ಈ 8 ತಿಂಗಳಲ್ಲಿ ಆಗಿದೆ ಆ 8 ತಿಂಗಳಲ್ಲಿ ಎಷ್ಟು ಕೆಲಸಗಳು ಅಪ್ರೂವ್ ಆಗಿವೆ ಆ ರೀತಿ ಅಪ್ರೂವ್ ಆದಂಥ ಕೆಲಸಕ್ಕೆ ಎಷ್ಟು ಖರ್ಚು ಆಗಿದೆ ಇದಲ್ಲದೇ ಪ್ರತಿ ತಾಲ್ಲೂಕಿನಲ್ಲಿ, ಪ್ರತಿ ಜಿಲ್ಲೆಯಲ್ಲಿ ಒಬ್ಬ ಅಧಿಕಾರಿಯನ್ನು ರಿವ್ಯೂ ಮಾಡುವುದಕ್ಕೆ ನೇಮಿಸಬೇಕು ಎಂದು ಇದೆ ಪ್ರತಿ ಜಿಲ್ಲೆಗೆ ಒಬ್ಬ ಸೆಕೆಟರಿ, ಆ ಸೆಕೆಟರಿಗಳು ಹೋಗಿ ಎಷ್ಟು ಮೀಟಿಂಗ್‌ಗಳನ್ನು ಮಾಡಿದ್ದಾರೆ, ಎಷ್ಟು ಕೆಲಸಗಳನ್ನು ಮಾಡಿಸಿದ್ದಾರೆ, ಅಲ್ಲಿನ ಸಮಸ್ಯೆಗಳನ್ನು

ಎಷ್ಟರ ಮಟ್ಟಿಗೆ ಬಗೆಹರಿಸಿದ್ದಾರೆ? ಏಕೆಂದರೆ ಸಾಕಷ್ಟು ಕಡೆ ಹೆಚ್ಚು ಸಮಸ್ಯೆಗಳಿವೆ ಏನು ಸಮಸ್ಯೆಯೆಂದರೆ, ಬರಗಾಲ ಇರುವ ಕಡೆ ಕೆಲಸವಿಲ್ಲದೇ ಇರುವುದು, ಈಗಾಗಲೇ ಮಾಧುಸ್ವಾಮಿಯವರು ಹೇಳಿದ ಹಾಗೆ ಕುಡಿಯುವ ನೀರಿಗೆ ಭೀಮಾ ನದಿಯಿಂದ ನೀರು ತರಬೇಕು ಎಂದು ಹೇಳಿದರು 5 ಕಿ ಮೀ , 6 ಕಿ ಮೀ ನಷ್ಟು ಪೈಪ್‌ಲೈನ್ ಹಾಕಬೇಕೆಂದರೆ ಅಷ್ಟೊಂದು ದುಡ್ಡು ಕೊಡುವುದಕ್ಕೆ ಆಗುವುದಿಲ್ಲವೆಂದು ಡೆಪ್ಯೂಟಿ ಕಮಿಶನರ್ ಹೇಳುತ್ತಾರೆ ಸಿ ಇ ಒ ಹತ್ತಿರ ಅಷ್ಟೊಂದು ದುಡ್ಡು ಇರುವುದಿಲ್ಲ ಅವರು ಮಾಡುವುದಕ್ಕೆ ಆಗುವುದಿಲ್ಲ ಈ ರೀತಿ ಇದ್ದಾಗ ಆ ಸಮಸ್ಯೆಯನ್ನು ಯಾರು ಬಗೆಹರಿಸಬೇಕು? ಆ ಸಮಸ್ಯೆ ಬಗೆಹರಿಸಲು ಸ್ಟೇಟ್ ಲೆವೆಲ್ ಸೆಕೆಟರಿಗಳು ಬಂದು ಅದನ್ನು ನೋಡಿ, "ನೀವು ಮಾಡಿ ನಾನು ಇದನ್ನು ಸ್ಟೇಟ್ ಲೆವೆಲ್ ಕಮಿಟಿಯಲ್ಲಿ ಅಪ್ರೂವ್ ಮಾಡಿಸಿಕೊಡುತ್ತೇನೆ" ಎಂದಾದರೂ ಹೇಳಬೇಕು ಅದನ್ನು ಮಾಡುವುದಕ್ಕೆ ಆಗುವುದಿಲ್ಲವೆಂದರೆ ಸರ್ಕಾರದವರೇ ಈ ಬಗ್ಗೆ ಜನರಲ್ ಆಗಿ ಜಿ ಒ ಹೊರಡಿಸಬೇಕು ಅದನ್ನೂ ಮಾಡಿಲ್ಲ ಸ್ಟೇಟ್ ಲೆವೆಲ್ ಮೀಟಿಂಗ್ 15 ದಿವಸಕ್ಕೊಮ್ಮೆ ನೀವು ಮಾಡಬೇಕು ನೀವು ಬೇಕಾದರೆ ಹಿಂದಿನ ಪ್ರೊಸಿಡಿಂಗ್ಸ್ ತೆಗೆದು ನೋಡಿ ಪ್ರತಿ 15 ದಿವಸಕ್ಕೊಮ್ಮೆ ನಾವು ಸಿ ಆರ್ ಎಫ್ ಮೀಟಿಂಗ್‌ನ್ನು ಕಂಡಕ್ಟ್ ಮಾಡಿದ್ದೇವೆ ನಿಮಗೂ ಗೊತ್ತಿದೆ ಅನೇಕ ಕೆರೆಗಳಿಗೆ ದುಡ್ಡು ಕೊಟ್ಟಿದ್ದೇವೆ ಡೀಸಿಲ್ಟಿಂಗ್ ಮಾಡುವುದಕ್ಕೆ ದುಡ್ಡು ಕೊಟ್ಟಿದ್ದೇವೆ ಯಾವ ಪಕ್ಷದ ಶಾಸಕರೇ ಇರಲಿ, ಸರಿ ಸಮಾನವಾಗಿ ಎಲ್ಲ ಶಾಸಕರಿಗೂ ಜನೋಪಯೋಗಿ ಬರಗಾಲ ಕೆಲಸ ಮಾಡುವುದಕ್ಕಾಗಿ ಹಣವನ್ನು ಹಂಚತಕ್ಕಂಥ ಕೆಲಸವನ್ನು ಮಾಡಿದ್ದೇವೆ ಆದರೆ ಇವೊತ್ತು ಆ ರೀತಿಯ ರಿವ್ಯೂ ಇಲ್ಲ ಆ ರೀತಿಯ ರಿವ್ಯೂ ಮಾಡಿದರೆ ನಿಮಗೆ ಗೊತ್ತಾಗುತ್ತದೆ, ಪವರ್ ಶಾರ್ಟೇಜ್ ಎಲ್ಲಿದೆ? ಕುಡಿಯುವ ನೀರಿನ ತೊಂದರೆ ಎಲ್ಲಿದೆ? ಕುಡಿಯುವ ನೀರಿನ ತೊಂದರೆ ಇದ್ದರೆ ಸಂಬಂಧ ಪಟ್ಟ ಸೆಕ್ರಟರಿಯನ್ನು ಕರೆದು ಅಲ್ಲಿಯೇ ಅದನ್ನು haul up ಮಾಡಬಹುದು ಅಥವಾ ಪವರ್ ಶಾರ್ಟೇಜ್ ಇತ್ತೆಂದರೆ ಅಲ್ಲಿಯೇ ಕೆ ಪಿ ಟಿ ಸಿ ಎಲ್ ನವರನ್ನು ಕರೆಸಿ ಅಲ್ಲಿಯೇ ನೀವು ಅವರನ್ನು haul up ಮಾಡಬಹುದು ಹೀಗೆ scarcity ಗೆ ಸಂಬಂಧಪಟ್ಟಂಥ ಅಥವಾ ಆ ಇಲಾಖೆಗೆ ಸಂಬಂಧಪಟ್ಟಂಥ Heads of the departmentನವರನ್ನು, ಇಲಾಖಾ ಸೆಕೆಟರಿಗಳ ಸಭೆಯನ್ನು ಕರೆದು ಪ್ರತಿ 15 ದಿವಸಕ್ಕೆ ಒಮ್ಮೆ ನೀವು ರಿವ್ಯೂ ಮಾಡಿದ್ದರೆ ಇವೊತ್ತು ಈ

ಪರಿಸ್ಥಿತಿ ಬರುತ್ತಿರಲಿಲ್ಲ ಏನು ಹಣ ಇವೊತ್ತು ಖರ್ಚು ಮಾಡದೇ ಉಳಿದಿದೆ ಅಥವಾ ಖರ್ಚು ಮಾಡುತ್ತೇವೆ ಎಂದು ತೋರಿಸಿ ಇವೊತ್ತು ಪಿ ಡಿ ಅಕೌಂಟ್‌ನಲ್ಲಿ ಬಿದ್ದಿದೆ ಆ ರೀತಿ ಆಗುತ್ತಿರಲಿಲ್ಲ ಇನ್ನೂ ಹಣಕ್ಕಾಗಿ ನೀವು ಹೋರಾಟ ಮಾಡುತ್ತಿದ್ದಿರಿ ಇದು ಒಂದು ವಿಷಯ ಎರಡನೆಯದಾಗಿ ಅಭಿವೃದ್ಧಿ ಕೆಲಸದ ಬಗ್ಗೆ ನಿಜವಾಗಿ ನಾನು ಹೇಳುತ್ತೇನೆ, ನಾನೂ ಆ ಕಡೆ ಇದ್ದಾಗಲೂ ಕೂಡ ನಾನು ಈ ಬಗ್ಗೆ ಹೇಳಿದಾಗ ನೀವೇ ಟೀಕೆ ಮಾಡುತ್ತಿದ್ದಿರಿ ಅಭಿವೃದ್ಧಿ ಕೆಲಸಕ್ಕಾಗಿ ನಾವು ಪರಸ್ಪರ ಹೊಂದಾಣಿಕೆಯಿಂದ ಕೆಲಸ ಮಾಡಿದರೆ ಮಾತ್ರ ಹಳ್ಳಿಗಳಲ್ಲಿ ರಸ್ತೆಗಳ ದುರಸ್ತಿಯಾಗಲಿ, ಕೆರೆಗಳ ದುರಸ್ತಿಯಾಗಲಿ, ಕುಡಿಯುವ ನೀರಿನ ವ್ಯವಸ್ಥೆಯಾಗಲೀ ಆಗುತ್ತದೆಯೇ ಹೊರತು ಅದನ್ನು ಬಿಟ್ಟು ಕೇವಲ ನೀವು ಯೋಜನೆಗಳನ್ನು ಘೋಷಣೆ ಮಾಡುವುದು, ನಾವು ಅದನ್ನು ಸರಿ ಇಲ್ಲವೆಂದು ಹೇಳುವುದು ಇದನ್ನೇ ಮಾಡಿಕೊಂಡು ಹೋದರೆ ಖಂಡಿತವಾಗಿ ಸಮಸ್ಯೆ ಬಗೆಹರಿಯುವುದಿಲ್ಲ, ಡೆವಲಪ್‌ಮೆಂಟ್ ಕೂಡ ಆಗುವುದಿಲ್ಲ ಪಕ್ಕದ ರಾಜ್ಯಗಳಿಂದ ನಾವು ಕಲಿಯಬೇಕಾಗುತ್ತದೆ ನಮ್ಮ ಹಾಗೆ ಪಕ್ಕದ ರಾಜ್ಯಗಳವರಾದ ಆಂಧ್ರದವರಿದ್ದಾರೆ, ತಮಿಳುನಾಡಿನವರಿದ್ದಾರೆ ಅಲ್ಲೆಲ್ಲಾ ಎಲ್ಲರೂ ಕೂಡಿ ಕೆಲಸ ಮಾಡುತ್ತಾರೆ ಅಧಿಕಾರಿಗಳು, ಮಂತ್ರಿಗಳು, ಶಾಸಕರು ಮತ್ತು ಜಿಲ್ಲಾ ಪಂಚಾಯತ್‌ನವರು ಎಲ್ಲರೂ ಒಟ್ಟಾಗಿ ಸೇರಿ ಕೆಲಸ ಮಾಡುತ್ತಾರೆ ಇಲ್ಲಿ ಆ ರೀತಿ ಏನೂ ಇಲ್ಲ ಒಬ್ಬರ ಮೇಲೆ ಒಬ್ಬರು ಸೇಡಿನ ಭಾವನೆ ಇಟ್ಟುಕೊಂಡಿದ್ದಾರೆ ಅವನ ಮೇಲೆ ಈ ರೀತಿ ಮಾಡಿದ್ದಾನೆಂದು ಇವನು ಅಪ್ಲಿಕೇಶನ್ ಕೊಡುವುದು ಇವನು ಮಾಡಿದರೆ ಅವನ ಮೇಲೆ ಅಪ್ಲಿಕೇಶನ್ ಕೊಡುವುದು ನಿಮ್ಮವರು ಹಾಗೆ ಮಾಡಿದ್ದಾರೆ ನೀವೇನು ಮಾಡಿದಿರಿ ನಾನು ಪ್ರತಿ ಸಲ ನೋಡುತ್ತಿದ್ದೇನೆ ಯಾವುದೇ ಮಾತು ಬಂತೆಂದರೆ, ನೀವೇನು 50 ವರ್ಷದಿಂದ ಮಾಡಿದ್ದೀರಿ, ನೀವೇನು ಮಾಡಿದಿರಿ ನಿಮ್ಮ ಸರ್ಕಾರ ಇದ್ದಾಗ ಎಂದು ಕೇಳುವುದು ಅದಕ್ಕೆ ಉತ್ತರವನ್ನೂ ನಾವು ಕೊಟ್ಟಾಗಿದೆ ಈಗ ನಿಮಗೆ ಅಧಿಕಾರ ಸಿಕ್ಕಿದೆ ನೀವೇನು ಮಾಡುತ್ತೀರಿ ಎಂಬುದು ಮುಖ್ಯವೇ ಹೊರತು ಅದನ್ನು ಬಿಟ್ಟು ನೀವೇನು ಹಿಂದೆ ಮಾಡಿದ್ದೀರಿ ಎಂದು ಪ್ರಶ್ನೆ ಕೇಳುವುದು ಸರಿಯಲ್ಲ ಆ ಕೆಲಸವನ್ನು ಎಲೆಕ್ಷನ್‌ನಲ್ಲಿ ಮಾಡೋಣ ಹೊರಗಡೆ ಪಬ್ಲಿಕ್ ಸ್ಪೀಚ್‌ನಲ್ಲಿ ನೀವೂ ಹೇಳಿಕೊಂಡು ಹೋಗಿ ನಾವೂ ಹೇಳಿಕೊಂಡು ಹೋಗುತ್ತೇವೆ ಆದರೆ ನಾವೂ ನೀವೂ ಸೇರಿ ಇಂಥ ಬರಗಾಲ ಪರಿಸ್ಥಿತಿಯಲ್ಲಿ ಜನರಿಗೆ ಕುಡಿಯುವ

ನೀರಿನ ವ್ಯವಸ್ಥೆ, ಜಾನುವಾರುಗಳಿಗೆ ಮೇವಿನ ವ್ಯವಸ್ಥೆ, ಜನರಿಗೆ ಮಾಡಲು ಕೆಲಸವನ್ನು ಕೊಡತಕ್ಕಂಥ ವ್ಯವಸ್ಥೆ, ಹೊಟ್ಟೆಗೆ ಅನ್ನ, ಮೈಗೆ ಬಟ್ಟೆ ಕೊಡುವ ನಿಟ್ಟಿನಲ್ಲಿ ಚಿಂತನೆಯನ್ನಯನ್ನು ಮಾಡಿ ನಾನು ಹೇಳುತ್ತೇನೆ, ಅಧ್ಯಕ್ಷರೆ, ಈ ವಿಚಾರದಲ್ಲಿ ಈ ಸರ್ಕಾರ ವಿಫಲವಾಗಿದೆ ಬಹುಶ ರೆವಿನ್ಯೂ ಮಿನಿಸ್ಟರ್ ರವರಿಗೆ ಸಂಪೂರ್ಣವಾದಂಥ ಅಧಿಕಾರವನ್ನು ಕೊಟ್ಟಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ ಏಕೆಂದರೆ ಇದರಲ್ಲಿ ಕೋ–ಆರ್ಡಿನೇಶನ್ ಬಹಳ ಮುಖ್ಯವಾಗಿರುತ್ತದೆ ನಿಮ್ಮ ಮಾತು ನಡೆಯಬೇಕೆಂದರೆ ನಿಮ್ಮನ್ನು ಆ ಕಮಿಟಿ ಛೇರ್ಮನ್ ಮಾಡಿ ಎಲ್ಲಾ ಡಿಪಾರ್ಟ್‌ಮೆಂಟ್‌ನೊಂದಿಗೆ ಈ ವಿಷಯದಲ್ಲಿ ಕೋ–ಆರ್ಡಿನೇಟ್ ಮಾಡತಕ್ಕಂಥದ್ದು ಅಗತ್ಯವಾಗಿರುತ್ತದೆ ಅದು ಫ್ಲಡ್ ವಿಚಾರವಿರಬಹುದು, ಡ್ರಿಂಕಿಂಗ್ ವಾಟರ್ ಇರಬಹುದು, ಎಲೆಕ್ಟ್ರಿಸಿಟಿ ವಿಚಾರವಿರಬಹುದು ಅಥವಾ ಯಾವುದೇ ವಿಚಾರವಿರಬಹುದು ಕ್ಯಾಬಿನೆಟ್‌ನಲ್ಲಿ ಏನು ಎಂಪವರ್ ಕಮಿಟಿ ಎಂದು ಮಾಡುತ್ತೇವೆ, ಅಂದರೆ ಏನು ಕ್ಯಾಬಿನೆಟ್‌ಗೆ ಅಧಿಕಾರವಿರುತ್ತದೆಯೋ ಆ ಅಧಿಕಾರ ಸಂಪೂರ್ಣವಾಗಿ ಸಬ್ ಕಮಿಟಿಗೆ ಇರುತ್ತದೆ ಪುನ ಅಲ್ಲಿಗೆ ಹೋಗಬೇಕಾಗಿಲ್ಲ ನೀವು ಸಬ್ ಕಮಿಟಿಯಲ್ಲಿ ಏನು ತೀರ್ಮಾನವನ್ನು ತೆಗೆದುಕೊಳ್ಳುತ್ತೀರಿ ಅದೇ ಅಂತಿಮ ಅದೇ ಕ್ಯಾಬಿನೆಟ್ ಡಿಸಿಶನ್ ಆ ಎಂಪವರ್ ಕಮಿಟಿ ನಮ್ಮ ಕಾಲದಲ್ಲಿ ಇತ್ತು ಈಗ ಏಕೆ ಆ ರೀತಿ ಮಾಡಬಾರದು

ಶ್ರೀ ಜಗದೀಶ್ ಶೆಟ್ಟರ್ – ಆ ರೀತಿಯ ಎಂಪವರ್ ಕಮಿಟಿ ಈಗಲೂ ಇದೆ 15 ದಿವಸಗಳಿಗೊಮ್ಮೆ ಮೀಟಿಂಗ್ ಮಾಡುತ್ತಿದ್ದೇವೆ ಆ ಮೀಟಿಂಗ್‌ಗಳಲ್ಲಿ ಎಲ್ಲಾ ರೀತಿಯ ಮಹತ್ವದ ನಿರ್ಣಯಗಳನ್ನು ನಾವು ಕೈಗೊಂಡಿದ್ದೇವೆ ನಾನು ಉತ್ತರ ಕೊಡುವಾಗ ಅದರ ಎಲ್ಲಾ ಡೀಟೈಲ್ಸ್‌ಗಳನ್ನು ಹೇಳುತ್ತೇನೆ ಕಮಿಟಿ ಇಲ್ಲವೆಂದು ನೀವು ಹೇಳುತ್ತಿದ್ದೀರಿ ಆದರೆ ಆ ಕಮಿಟಿ ಇದೆ

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ – ಹಾಗಾದರೆ ಆ ಎಂಪವರ್ ಕಮಿಟಿ ಇದ್ದರೆ ಹಣಕ್ಕಾಗಿ ನೀವು ಏನು ಮಾಡಬೇಕಾಗಿಲ್ಲ ಆ ಕಮಿಟಿ ಮೀಟಿಂಗ್‌ಗೇ ಫೈನಾನ್ಸ್ ಸೆಕ್ರೆಟರಿ ಬರುತ್ತಾರೆ ಈಗಾಗಲೇ ನಿಮ್ಮ ಹತ್ತಿರ ಕೇಂದ್ರ ಸರ್ಕಾರದಿಂದ ಹಣ ಯಾವ ಯಾವುದಕ್ಕೆ ಬಿಡುಗಡೆಯಾಗಿದೆ ಎಂಬ ಬಗ್ಗೆ ಲಿಸ್ಟ್ ಇದೆ ನಮ್ಮ ಹತ್ತಿರ ಕೂಡ ಲಿಸ್ಟ್ ಇದೆ ತಾವು ಬಿಡುಗಡೆ ಮಾಡಿ ಎಂದು ಅಲ್ಲಿಯೇ ಹೇಳಬೇಕು ಅಲ್ಲಿ ಹೇಳಿದರೆ ಅಲ್ಲಿಯೇ ಹಣ ಬಿಡುಗಡೆಯಾಗುತ್ತದೆ ಹೊರತು, ಹಣಕ್ಕಾಗಿ ಮತ್ತೊಂದು ಕಡೆ

ಹೋಗಬೇಕಾಗಿಲ್ಲ ಅಥವಾ ಪುನ ಕ್ಯಾಬಿನೆಟ್‌ಗೆ ತರಬೇಕಾಗಿಲ್ಲ ಎರಡನೆಯದಾಗಿ ನಿಮ್ಮಲ್ಲಿ ಹಣ ಇಲ್ಲದಿದ್ದರೂ ಕೂಡ ಯಾವ ರೀತಿಯಾಗಿ ಕ್ರೋಡಿಕರಿಸಬೇಕೆಂದು ಹೇಳಿ ಅವರು ಇಲ್ಲಿ ಬೇರೆ ಬೇರೆ ಕೆಲಸದಲ್ಲಿ ಕಟ್ ಮಾಡಿ ಇದನ್ನು ನಾವು ಮಾಡುತ್ತೇವೆಂದು ಪಪೋಸಲ್ ಕೊಟ್ಟರೆ ಅದಕ್ಕೂ ಕೂಡ ಕ್ಯಾಬಿನೆಟ್ ಒಪ್ಪಬೇಕಾಗುತ್ತದೆ ಏಕೆಂದರೆ ಇದಕ್ಕೆ ಪ್ರಾಮುಖ್ಯತೆ ಕೊಡುವ ದೃಷ್ಟಿಯಿಂದಲೇ ಆ ಎಂಪವರ್ ಕಮಿಟಿ ರಚನೆಯಾಗಿರುತ್ತದೆ ಅದಕ್ಕಾಗಿ ನಾನು ಹೇಳುತ್ತಿದ್ದೇನೆ, ಆ ಎಂಪವರ್ ಕಮಿಟಿ ಇದ್ದರೆ ನೀವು ನಿಮ್ಮ ಹಕ್ಕನ್ನು ಅದರ ಮುಖಾಂತರ ಚಲಾಯಿಸುತ್ತಿಲ್ಲ ಅಥವಾ ನಿಮ್ಮ ಕರ್ತವ್ಯವನ್ನು ನೀವು ಮಾಡುತ್ತಿಲ್ಲವೆಂದಂತಾಗುತ್ತದೆ ಅದಿಲ್ಲದಿದ್ದರೆ ನಿಮಗೆ ಎಂಪವರ್ ಕಮಿಟಿ ಎಂದು ಹೆಸರಿಗೆ ಮಾತ್ರ ಕೊಟ್ಟು ಪತಿ ದಿನ ರಾತಿ ಫೈಲ್‌ಗಳನ್ನು ಮಾನ್ಯ ಯಡಿಯೂರಪ್ಪನವರು ಮತ್ತು ಮಾನ್ಯ ಕುಮಾರಸ್ವಾಮಿಯವರು ತರಿಸಿಕೊಳ್ಳುತ್ತಾರೋ ಏನೋ ನನಗೆ ಗೊತ್ತಿಲ್ಲ ಎರಡರಲ್ಲಿ ಒಂದಿರಬೇಕು Either you are not executing or you are not exercising your power ಅಥವಾ ನೀವು ಎಕ್ಸರ್‌ಸೈಸ್ ಮಾಡುವುದಕ್ಕೆ ಅವರೇನಾದರೂ ಅಡ್ಡಿ ಬರುತ್ತಾರೋ ನನಗೆ ಗೊತ್ತಿಲ್ಲ ಎರಡರಲ್ಲಿ ಈ ಒಂದು ಯಾವುದಾದರೂ ಆಗಿರಬೇಕು ಎರಡನೆಯದಾಗಿ ಕೇಂದ್ರ ಸರ್ಕಾರದಿಂದ ಹಣ ಬಿಡುಗಡೆಯಾದ ವಿಚಾರದ ಬಗ್ಗೆ ಕೂಡ ತಾವು ಹೇಳಿದಿರಿ ಈಗ ನಾನು ಆ ಬಗ್ಗೆ ಸ್ಪಷ್ಟವಾಗಿ ನಿಮ್ಮ ಮುಂದೆ ಹೇಳಿದೆ ಆದರೆ ನಾನು ಹೇಳಿದ್ದನ್ನು ತಾವು ಒಪ್ಪಲಿಲ್ಲ ಇನ್ನೊಮ್ಮೆ ನಾನು ಬೀಫಾಗಿ ಹೇಳುತ್ತೇನೆ ಒಂದೇನೆಂದರೆ ಈ ಸಿ ಆರ್ ಎಫ್ ನಲ್ಲಂತೂ ರೆಗ್ಯುಲರ್ ಆಗಿ ಬರತಕ್ಕಂಥ ಫಂಡ್ ಇದೆ ಇದರಿಂದ 90 ಕೋಟಿ ರೂಪಾಯಿ ಬಂದಿರುವುದಂತೂ ನಿಜ ತಾನೇ ಆಮೇಲೆ ಎನ್ ಸಿ ಸಿ ಎಫ್ ಅಡಿಯಲ್ಲಿ ಬಂದದ್ದು 226 ಕೋಟಿ ರೂಪಾಯಿಗಳು, ನಿಜ ತಾನೇ ಆಮೇಲೆ ಏಳು, ಎಂಟರಲ್ಲಿ ಅಡ್ವಾನ್ಸ್ ಅಮೌಂಟ್, ಅಂದರೆ ನೆಕ್ಸ್ಟ್ ಈಯರ್‌ದು ಈ ವರ್ಷವೇ ನಿಮಗೆ ಬೇಕಾದರೆ ಅಡ್ವಾನ್ಸ್ ಅಮೌಂಟ್ ಕೊಡುತ್ತಾರೆ ಮುಂದಿನ ವರ್ಷದ ಹಣ ಈ ವರ್ಷ ನಿಮಗೆ ಬೇಕೆಂದರೆ ಅದರ advance amount ಕೊಡುತ್ತಾರೆ ಅದನ್ನು ನೀವು ಕೇಳಿಕೊಂಡಿರಿ, ಅದು 23 ಕೋಟಿ ರೂಪಾಯಿ ಬಂದಿರುವುದು ನಿಜವೇ ? ನಾನು ಹಿಂದಿನದ್ದೂ ಹೇಳುತ್ತೇನೆ

ಶ್ರೀ ಜಗದೀಶ್ ಶೆಟ್ಟರ್ ಇಲ್ಲವೆಂದು ನಾನು ಹೇಳುತ್ತಿಲ್ಲ ಹಿಂದಿನ ವರ್ಷದ್ದು ಅದಕ್ಕೆ ಮಿಕ್ಸ್ ಮಾಡಿದ್ದೀರಿ ನೀವು 2005–06 ಮತ್ತು 2006–07 ನೆ ಎರಡು ಸಾಲಿನದನ್ನು ಸೇರಿಸಿ ಒಂದು ಸಾವಿರ ಕೋಟಿ ರೂಪಾಯಿ ಎಂದು ಹೇಳಿದಿರಿ ನೀವು 2006–07ನೆ ಸಾಲಿನದ್ದನ್ನು ಹೇಳಿ

ಶ್ರೀ ಮಲ್ಲಿಕಾರ್ಜುನ ಖರ್ಗೆ 2006–07ನೇ ಸಾಲಿನದ್ದನ್ನು ಕೂಡ ಹೇಳುತ್ತೇನೆ ನಿಮ್ಮದು expenditure cumulative ಇದೆ ನಾನೇನೋ ಬಿಡಿಸಿ ಹೇಳಿದರೆ ಸರಿ ನೀವು ಬರಗಾಲಕ್ಕೆ ಏನು expenditure ಮಾಡಿಕೊಂಡು ಬಂದಿದ್ದೀರಿ, ಅದನ್ನು cumulative ಆಗಿ ತೋರಿಸಿದ್ದೀರಿ 2005–06ರ ಏಪ್ರಿಲ್‌ನಿಂದ ಡಿಸೆಂಬರ್ end ವರೆಗೆ ಏನು ನಡೆದಿದೆ ಎನ್ನುವುದರೆ ಬಗ್ಗೆ ನಿಮಗೆ ಕೊಟ್ಟಂತಹ ಅಂಕಿ ಅಂಶಗಳಿಂದ ಅಥವಾ ಕಾಗದಪತ್ರಗಳಿಂದ ಗೊತ್ತಾಗುತ್ತದೆ ಅದನ್ನು ನೀವು ಬೇರ್ಪಡಿಸಿ ಹೇಳಿಕೊಳ್ಳಿ ಆ ಮಾತು ಬೇರೆ ಆದರೆ ಹಣ ಬಂದಿದ್ದಂತೂ ನಿಜ ಆದರೆ ಹಣ ಎಷ್ಟು ಬಂತು, ಅದು ಸರಿಯಾದ ರೀತಿಯಲ್ಲಿ ಖರ್ಚಾಗಿಲ್ಲವೆನ್ನುವುದು ನಿಜ ಅದನ್ನು ನೀವು ಒಪ್ಪಿಕೊಳ್ಳಬೇಕು ಮತ್ತೆ ನಮ್ಮ ಮಾನ್ಯ ವಿರೋಧ ಪಕ್ಷದ ನಾಯಕರು ಪತ್ರ ಬರೆದು ಮಾಹಿತಿಯನ್ನು ತರಿಸಿಕೊಂಡಿದ್ದಾರೆ ಅದರಲ್ಲೂ ವಿಶೇಷವಾಗಿ ಡೆಪ್ಯೂಟಿ ಕಮಿಷನರ್‌ರವರನ್ನು ನೇರವಾಗಿ ಸಂಪರ್ಕಿಸಿ Expenditure Section ನಿಂದ ಮಾಹಿತಿಯನ್ನು ಪಡೆದುಕೊಂಡಿದ್ದಾರೆ ಇಲ್ಲಿಯವರೆಗೆ ಬಂದಂತಹ ಮಾಹಿತಿ ಪ್ರಕಾರ ಹಣ ಖರ್ಚಾಗಿರುವುದು 151 ಕೋಟಿ 38 ಲಕ್ಷ ರೂಪಾಯಿ ಮಾತ್ರ ಜಿಲ್ಲಾಧಿಕಾರಿಗಳ PD account ನಲ್ಲಿ 135 ಕೋಟಿ ರೂಪಾಯಿ ಇದೆ ಆದರೆ ನೀವು ಇಲ್ಲಿಯವರೆಗೆ ಬಿಡುಗಡೆ ಮಾಡಿದ್ದು 261 ಕೋಟಿ ರೂಪಾಯಿ ಮಾತ್ರ ಕೇಂದ್ರದಿಂದ ಈ ವರ್ಷದ್ದು ಸೇರಿ ಬಂದಂತಹ ಹಣ 340 ಕೋಟಿ ರೂಪಾಯಿ ಅದಕ್ಕೆ ಈ ಎಲ್ಲಾ ಅಂಕಿಅಂಶಗಳನ್ನು ಮುಚ್ಚಿ ಹಾಕುವುದಕ್ಕೆ ಬರುವುದಿಲ್ಲ ಆದರೆ ಕೆಳಮಟ್ಟದಲ್ಲಿ ಎಷ್ಟರಮಟ್ಟಿಗೆ implement ಆಗಿದೆಯೆಂದು ನೋಡುವುದಕ್ಕೆ ನಿಮಗೆ ಪುರುಸೊತ್ತಿಲ್ಲ ನಾನು ಯಾವಾಗಲೂ, ನಿಮಗೆ ಜನರ ಮೇಲೆ ಪ್ರೀತಿ ಇದೆ, ಆದರೆ ಅವರ ಸೇವೆ ಮಾಡುವುದಕ್ಕೆ ಪುರುಸೊತ್ತಿಲ್ಲವೆಂದು ಹೇಳುತ್ತೇನೆ ಆದುದರಿಂದ ದಯವಿಟ್ಟು ಈಗಲಾದರೂ ಪುರುಸೊತ್ತು ಮಾಡಿಕೊಳ್ಳಿ ಈಗ ಕೊನೆ ಹಂತದಲ್ಲಿ ಮಾತುಕತೆಯಲ್ಲಿ ನೋಡಿದರೆ Judicial separation ನಲ್ಲಿ ಇದ್ದೀರಿ ಎಂದು ಕಾಣುತ್ತದೆ Divorce ಗೆ

ಇನ್ನು ಬಹಳ ದಿನ ಬೇಕು Judicial separation ಇಲ್ಲವೆಂದರೆ ಅದನ್ನು ಬಿಟ್ಟು ಬಿಡುತ್ತೇನೆ ಅದರ ಗೋಜಿಗೆ ಹೋಗುವುದಿಲ್ಲ ಇನ್ನು ರಘುವಂಶಿ ಪ್ರಸಾದ್‌ರವರು party politics ಮಾಡಬೇಕೆಂದು ಇಲ್ಲ ಅವರೆ ಸ್ವತ ಹೇಳಿದ್ದಾರೆ, 88 ಕೋಟಿ ರೂಪಾಯಿ ಕುಡಿಯುವ ನೀರಿನ ಯೋಜನೆಗೆ ಕೊಟ್ಟಿದ್ದಾರೆ ಅದರಲ್ಲಿ ಕರ್ನಾಟಕ 44 ಕೋಟಿ ರೂಪಾಯಿ ಮಾತ್ರ ಖರ್ಚು ಮಾಡಿದೆ ಒಂದು ಕಡೆ ಕೇಂದ್ರ ಸರ್ಕಾರದಿಂದ ಹಣ ಬಂದಿಲ್ಲವೆಂದು, ಹಣ ಇಲ್ಲವೆಂದು ಹೇಳಿಕೊಳ್ಳುತ್ತಾ ಹೋಗುವುದು ಆದರೆ ರಾಜ್ಯ ಸರ್ಕಾರದಲ್ಲಿ ಹಣ ತುಂಬಿ ತುಳುಕುತ್ತಿದೆ ಯಾವುದಕ್ಕೂ ಕೇಳಿದರೂ ಕೂಡ National Highwayಗೆ ದುಡ್ಡು ಬೇಕೆಂದು ಕೇಳಿದರೂ ಕೂಡ yes ಎಂದು ಹೇಳುವುದು Dam ಕಟ್ಟುವುದಕ್ಕೆ ಕೇಳಿದರೂ ಕೂಡ yes, 300 High School ಕಟ್ಟಬೇಕೆಂದರೂ yes, Junior College, Degree College ಬೇಕೆಂದರೂ yes, ದಾವಾಖಾನೆಗಳು ಬೇಕೆಂದರೂ yes, ಎಷ್ಟು ಬೇಕೋ ಅಷ್ಟು ಇದೆ ಎಲ್ಲಾ ಕೋಟಿಗಟ್ಟಲೆ ಮಾತನಾಡುತ್ತೇವೆ ಮಾನ್ಯ ರಾಜ್ಯಪಾಲರ speech ನಲ್ಲಿ ಏನು ಹೇಳಿದ್ದಾರೆಂದರೆ ಡಾ ನಂಜುಂಡಪ್ಪರವರ ವರದಿ ಪ್ರಕಾರ ಯಾವ್ಯಾವುದು ಹಿಂದುಳಿದಿರತಕ್ಕಂಥ ತಾಲ್ಲೂಕು ಇವೆ, ಅಲ್ಲಿ ಹೊಸದಾಗಿ ಸರ್ಕಾರದ ಖರ್ಚಿನಲ್ಲಿ ಹೊಸ ಆಸ್ಪತ್ರೆಗಳನ್ನು ಮಾಡುತ್ತೇವೆಂದು ಕೊಟ್ಟಿದ್ದಾರೆ ಅದಕ್ಕಾಗಿ ಇವತ್ತು 44 ಕೋಟಿ ರೂಪಾಯಿಗಳು ಎಂದರೆ 60 ಪರ್ಸೆಂಟ್‌ನಷ್ಟು ಖರ್ಚಾಗಿದೆ ಇನ್ನು 40 ಪರ್ಸೆಂಟ್‌ನಷ್ಟು ಖರ್ಚಾಗಿಲ್ಲ ಅದೇ ರೀತಿಯಾಗಿ ಕುಡಿಯುವ ನೀರಿನ ಹಾಗೂ ನೀರಾವರಿ ಯೋಜನೆಗಳು ಇವೆ ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ಸಾಕಷ್ಟು ಯೋಜನೆಗಳು ಇವೆ ಉದ್ಯೋಗ ಖಾತ್ರಿ ಯೋಜನೆ ಐದು ಜಿಲ್ಲೆಗಳಲ್ಲಿ ಇದೆ ಅದಕ್ಕೆ ಕೋಟ್ಯಾಂತರ ರೂಪಾಯಿ ಬರುತ್ತಿದೆ ಆ ಯೋಜನೆ ಅನುಷ್ಠಾನಕ್ಕೆ ತರಬೇಕು ಎಂದರೆ co-ordination ಬೇಕು ಆ ಯೋಜನೆಯ ಪ್ರಕಾರ strict ಆಗಿ ಕೆಲಸ ಮಾಡಿದವರಿಗೆ cheques ನೇರವಾಗಿ ಕೊಡಬೇಕು ಎಂದಿದೆ ಆಗ naturally Engineers, Junior Engineers ಕೆಲಸ ಮಾಡುವುದಿಲ್ಲ ಏಕೆಂದರೆ ಬಂದಂತಹ ಹಣ ನೇರವಾಗಿ ಕೆಲಸ ಮಾಡಿದವರಿಗೆ ಹೋಗುತ್ತದೆ, ಇದರಿಂದ ನಮಗೆ ಏನು ಸಿಗುತ್ತದೆಂದು ಹೇಳಿ ಅವರು interest

ತೆಗೆದುಕೊಳ್ಳುವುದಿಲ್ಲ ಅದಕ್ಕಾಗಿ ಚಿತ್ರದುರ್ಗ, ದಾವಣಗೆರೆ, ರಾಯಚೂರು, ಗುಲ್ಬರ್ಗ ಮತ್ತು ಬೀದರ್, ಈ 5 ಜಿಲ್ಲೆಗಳಲ್ಲಿ ಏನು Employment Guarantee Scheme ಇದೆ ಇದು ಸರಿಯಾದ ರೀತಿಯಲ್ಲಿ ಏಕೆ ಅನುಷ್ಠಾನಕ್ಕೆ ಬರುತ್ತಿಲ್ಲವೆಂದರೆ ಅಲ್ಲಿ Engineers ಹೆದರುತ್ತಿದ್ದಾರೆ ಏಕೆಂದರೆ ಅವರು machines use ಮಾಡುವ ಹಾಗಿಲ್ಲ ಎರಡನೆಯದಾಗಿ labours ಗೆ ಇಷ್ಟು quantity ಕೆಲಸ ಮಾಡಬೇಕೆಂದು ಇದ್ದು, ಅಷ್ಟು ಕೆಲಸ ಮಾಡಿದರೆ ಮಾತ್ರ ಇಷ್ಟು ಹಣ ಎಂದು ನಿಗದಿ ಮಾಡಿದ್ದಾರೆ ಆದರೆ ಅನೇಕ ಕಡೆ ಹೇಳಿರುವಂತಹ quantity ಪ್ರಕಾರ ಕೆಲಸ ಮಾಡುವುದಕ್ಕೆ ಆಗುವುದಿಲ್ಲವೆಂದು ಹೇಳಿ ಆ ಜನರೇ Engineers ಮೇಲೆ ಬೀಳುತ್ತಾರೆ ಕೆಲವು ಕಡೆ Engineers ಇದರಲ್ಲಿ ನಮಗೆ ಏನೂ ಬರುವುದಿಲ್ಲ, ಸಿಗುವುದಿಲ್ಲ, ನಾವು ಏಕೆ ಇದರ ಕೆಲಸ ಮಾಡಬೇಕು ಎಂದು ಸುಮ್ಮನೆ ಇದ್ದು ಬಿಡುತ್ತಾರೆ ಇದನ್ನು solve ಮಾಡುವವರು ಯಾರು? At least ಜಿಲ್ಲಾ ಉಸ್ತುವಾರಿ ಸಚಿವರು ಅಥವಾ in charge , Secretary ಅವರನ್ನು ಕರೆದು ಕುಳಿತುಕೊಂಡು ನಿಮ್ಮ ನ್ಯೂನ್ಯತೆ ಏನು? ಇದನ್ನು ಹೇಗೆ ಬಗೆಹರಿಸಬೇಕು? ಕೇಂದ್ರದಿಂದ ಬಂದಿರುವಂತಹ ಹಣವನ್ನು maximum utilize ಹೇಗೆ ಮಾಡಬೇಕು ಎಂದು ಚಿಂತನೆ ನಡೆಸಿದರೆ ಮಾತ್ರ ಬಂದಂತಹ ಹಣವನ್ನು ಖರ್ಚು ಮಾಡುವುದಕ್ಕೆ ಸಾಧ್ಯವಾಗುತ್ತದೆ, ಅಭಿವೃದ್ಧಿಯಾಗುತ್ತದೆ ಮತ್ತು ಸ್ಥಳದಲ್ಲಿ ಇರುವಂತಹ ಸಮಸ್ಯೆಯನ್ನು ಕೂಡ ಬಗೆಹರಿಸಿದ ಹಾಗೆ ಆಗುತ್ತದೆ ನೀವು ಅಲ್ಲಿ ಹೋಗಿ ಕೆಲಸ ಏಕೆ ಮಾಡಿಲ್ಲವೆಂದು ಸುಮ್ಮನೆ ಬಯ್ದುಕೊಂಡು ಬಂದರೆ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ ನಾವು rules ಕೇಳುತ್ತೇವೆ, ಆದರೆ ಅವರು rules ಪ್ರಕಾರ ಆಗಿಲ್ಲವೆಂದು ಹೇಳುತ್ತಾರೆ ಅಲ್ಲಿ ಯಾರು ಇಷ್ಟು ಹಣಕ್ಕೆ ಬರುತ್ತಿಲ್ಲವೆಂದು ಕೆಲವು ಕಡೆ ಹೇಳುತ್ತಾರೆ ಶಿವಮೊಗ್ಗ, ಚಿಕ್ಕಮಗಳೂರು ಅಥವಾ ದಾವಣಗೆರೆ ಇಂತಹ ಭಾಗದಲ್ಲಿ ನೂರರಿಂದ ನೂರತ್ತು ರೂಪಾಯಿಯವರೆಗೆ ಕೂಲಿ ಇದೆ ಅದಕ್ಕೆ ಅಲ್ಲಿ ಕೂಲಿಗಾರರು ಏನೂ ಮಾಡುತ್ತಾರೆಂದರೆ ಇಂತಹ ಯಾವುದೇ ಯೋಜನೆಗಳು ಬಂದರೂ ಕೂಡ ಇದಕ್ಕೆ ಬರುವುದಿಲ್ಲ ಹೀಗಿದ್ದಾಗ ನಾವು ಇದಕ್ಕೆ ಏನಾದರೂ ಪರ್ಯಾಯ ಪರಿಹಾರವನ್ನು ಕಂಡುಹಿಡಿಯಬೇಕಲ್ಲ ಅದು ಕೂಡ ಇಲ್ಲ 2006–07ನೆ

ಸಾಲಿನಲ್ಲಿ ಉದ್ಯೋಗ ಖಾತ್ರಿಯಲ್ಲಿ ಡಿಸೆಂಬರ್ 31 ರವರಗೆ ಬಂದಂತಹ ಹಣ 170 ಕೋಟಿ ರೂಪಾಯಿ ಎಂದು ನೀವು ಕೊಟ್ಟಿರುವುದು ಆದರೆ ಡಿಸೆಂಬರ್‌ವರೆಗೆ ಖ ರ್ಚಾಗಿದ್ದು 149 ಕೋಟಿ ರೂಪಾಯಿ ಎಂದರೆ ಇನ್ನು 20 ಕೋಟಿ ರೂಪಾಯಿ ಟಾರ್ಗೆಟ್ ಪ್ರಕಾರ ಖರ್ಚಾಗಬೇಕಾಗಿದ್ದು ಆಗಲಿಲ್ಲ ಅದೇ ರೀತಿಯಾಗಿ ನೀವು 173 fluoride affected villages ಗೆ alternative sourceನಿಂದ ನೀರು ಕೊಡಬೇಕು ಆದರೆ ಇಲ್ಲಿಯವರೆಗೆ ಯಾವ ಜಿಲ್ಲಾಪಂಚಾಯತ್ ಕೂಡ interest ತೆಗೆದು ಕೊಂಡು ಇದರ ಬಗ್ಗೆ ಚಿಂತನೆ ಮಾಡಿಲ್ಲ ಆಥವಾ ಕಾರ್ಯಕ್ರಮ ಹಾಕಿಕೊಂಡಿಲ್ಲ Alternative ಯೋಜನೆಗೆ ಇಟ್ಟಿರುವ 470 ಕೋಟಿ ರೂಪಾಯಿ ಹಣದಲ್ಲಿ ಅದರಲ್ಲಿ ಇನ್ನು 50 percent ಹಣ ಕೂಡ ಖರ್ಚಾಗಿಲ್ಲ ನಮಗೆ ಕೊಟ್ಟಿರುವಂತಹ ಅಂಕಿಸಂಖ್ಯೆಗಳೆಲ್ಲಾ ಕೇಂದ್ರ ಸರ್ಕಾರದ ಇಲಾಖೆಗಳಿಂದ ಒದಗಿಸಿರುವಂತಾದ್ದು ನಾವೇನು ಇದನ್ನು ಹುಟ್ಟಿಸಿ ಹೇಳುತ್ತಿಲ್ಲ ಇದೆಲ್ಲಾ ಕೂಡ ಏನು ತೋರಿಸುತ್ತದೆ ಎಂದರೆ, there is a lacking in the administration ಆಡಳಿತದಲ್ಲಿ ನಾವು ಎಲ್ಲೋ ತಪ್ಪುತ್ತಿದ್ದೇವೆ ಅಥವಾ ನಿಧಾನ ಗತಿಯಿಂದ ನಡೆದಿದೆ ಅಥವಾ ನಾವು interest ತೋರಿಸುತ್ತಿಲ್ಲವೆಂದು ಇದರಿಂದ ತಿಳಿಯುತ್ತದೆ, ಹೊರತಾಗಿ ಮತ್ತೆ ಬೇರೆ ಏನೂ ತಿಳಿದುಕೊಳ್ಳುವುದಕ್ಕೆ ಆಗುವುದಿಲ್ಲ ಮಾತಿಗೆ ಬಂದಾಗ ಸಾರಾಸಗಟಾಗಿ ನಾವು ಇದನ್ನು ಮಾಡಿದ್ದೇವೆ ಅದನ್ನು ಮಾಡಿದ್ದೇವೆ ಎಂದು ಹೇಳಬಹುದು ಆದರೆ ನೀವು, ಯಾವ್ಯಾವ ಬಾಬ್ತಿನಲ್ಲಿ ಹಣ ಬಂದಿದೆ, ಅದರಲ್ಲಿ ಎಷ್ಟು ಖರ್ಚು ಮಾಡಿದ್ದೀರಿ ಎನ್ನುವ ಉತ್ತರ ಕೊಡಬೇಕು ಜನ ಅದನ್ನು ಅಪೇಕ್ಷೆ ಮಾಡುತ್ತಾರೆ ಯಾವ ಉದ್ದೇಶಕ್ಕಾಗಿ ಹಣವನ್ನು ಕೊಡುತ್ತೇವೆ ಆ ಉದ್ದೇಶಕ್ಕೆ ಹಣವನ್ನು ಖರ್ಚು ಮಾಡದೇ ಹೋದರೆ, ಖಂಡಿತವಾಗಿ ಇವತ್ತಿನ ದಿವಸ ಪ್ರಯೋಜನವಾಗುವುದಿಲ್ಲ ಇವತ್ತು ಅತಿವೃಷ್ಟಿಯಲ್ಲೂ ಕೂಡ ಎಲ್ಲಾ ಜಿಲ್ಲೆಗಳಿಗೂ ನೀವೇ ಫಂಡ್ ರಿಲೀಸ್ ಮಾಡಿದ್ದು ರಾಜ್ಯದ 27 ಜಿಲ್ಲೆಗಳಿಗೂ ಸೇರಿಸಿದ್ದೀರಿ ಅದರಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಇಲ್ಲ, ಕೊಡಗು ಇಲ್ಲ, ಆ ಮಾತು ಬೇರೆ ನೀವು 261ಕೋಟಿ ರೂಪಾಯಿಗಳನ್ನು ರಿಲೀಸ್ ಮಾಡಿದ್ದೀರಿ ಅದರಲ್ಲಿ 151ಕೋಟಿ ರೂಪಾಯಿಗಳು ಖರ್ಚು ಆಗಿದೆ, ಅಂದರೆ ಹೆಚ್ಚು ಕಡಿಮೆ ಶೇ 58ರಷ್ಟು ಹಣ

ಖರ್ಚು ಆಗಿದೆ ಇನ್ನು more than 42% ಹಣ ಖರ್ಚು ಆಗಿಲ್ಲ ಇವೆಲ್ಲಾ ಇವತ್ತು ಕನ್ನಡಿಯಲ್ಲಿ ನಿಮ್ಮ ಕೆಲಸ ಆಗಿರುವ ಬಗ್ಗೆ ತೋರಿಸುವ ಹಾಗಿದೆ ತಾವು ಸುಮ್ಮನೆ ಕೆಲಸ ಮಾಡಿದ್ದೇವೆಂದರೆ, ನೀವು ಎಲ್ಲಿ ಕೆಲಸವನ್ನು ಮಾಡಿದ್ದೀರಿ? ಅಂದರೆ ದುಡ್ಡು ಇಲ್ಲದೇ ಕೆಲಸವನ್ನು ಮಾಡಿದ್ದೀರಾ? ಹಣ ಖರ್ಚು ಅಗದೇ ಕೆಲಸವನ್ನು ಮಾಡಿದ್ದೀರಾ ? ಎಲ್ಲಾ ಮಂತ್ರಿಮಂಡಲದ ಸದಸ್ಯರು, ಶಾಸಕರು, ಗುದ್ದಲಿ, ಸಲಿಕೆಯನ್ನು ಹಿಡಿದುಕೊಂದು ಹೋಗಿ ಕೆಲಸವನ್ನು ಮಾಡಿದ್ದಾರಾ ? ಇವತ್ತು ಈ ಅಂಕಿ–ಸಂಖ್ಯೆಗಳೇ ಹೇಳುತ್ತವೆ ನೀವು ಎಷ್ಟರ ಮಟ್ಟಿಗೆ ನಿಮ್ಮ ಟಾರ್ಗೆಟ್ ಅನ್ನು reach ಮಾಡಿದ್ದೀರೆಂದು ಹೇಳುತ್ತದೆ ಅದುದರಿಂದ ಇದರಲ್ಲಿ ಕೂಡ ನಿಮ್ಮ ಸಫಲತೆ ಏನು ಕಾಣಲಿಲ್ಲ ಇದರ ಜೊತೆಗೆ ಇನ್ನೊಂದು NREG (National Rural Employment Guarantee) ಸ್ಕೀಂ ಬಗ್ಗೆ ನಿಮಗೆ ನಾನು ಹೇಳಿದೆ ಆ 216ಕೋಟಿ ರೂಪಾಯಿಗಳಲ್ಲೂ ಕೂಡ ಟೋಟಲ್ 5 ಜಿಲ್ಲೆಗಳನ್ನು ಸೇರಿಸಿದರೆ, 149ಕೋಟಿ ರೂಪಾಯಿಗಳು ಮಾತ್ರ ಖರ್ಚು ಆಗಿದೆ ಅಂದರೆ ಹೆಚ್ಚು ಕಡಿಮೆ ಇಲ್ಲೂ ಕೂಡ 60, 70ಕೋಟಿ ರೂಪಾಯಿಗಳು ಇವತ್ತಿನ ದಿವಸ ಖರ್ಚು ಆಗಬೇಕಾಗಿತ್ತು, ಅದೂ ಆಗಿಲ್ಲ ಈ ರೀತಿಯಾಗಿ ಇವತ್ತು ಈ ಸರ್ಕಾರ ಕೆಲಸವನ್ನು ಮಾಡದೇ, ಹಿಂದೆ ಬಿದ್ದಿದೆಯೆಂದು ಹೇಳುವುದಕ್ಕೆ ಇದೊಂದು ಉದಾಹರಣೆ ಹೇಳುವುದಕ್ಕೆ ನಾನು ಇಚ್ಛಿಸುತ್ತೇನೆ ಇನ್ನು ಆನೇಕ ಕಡೆಗಳಲ್ಲಿ ಡೆಪ್ಯೂಟಿ ಕಮೀಷನರ್‌ಗಳು ಕೂಡ, ಸರಿಯಾಗಿ ಕೆಲಸ ಮಾಡುತ್ತಿಲ್ಲ ಇವರಿಗೆ free hand ಇಲ್ಲವೊ, ಅಥವಾ ಇವರು ಮೈಗಳ್ಳತನ ಮಾಡುತ್ತಿದ್ದಾರೋ, ಅಥವಾ ಅವರಿಗೆ ಸರ್ಕಾರ ಇವತ್ತು ಒಂದು ಸೂಚನೆಯನ್ನು ಕೊಟ್ಟಮೇಲೆ ಅದನ್ನು ನಾವು ಜಾರಿಗೆ ತರಬೇಕೆಂಬ ಇಚ್ಛಾಶಕ್ತಿ ಇದೆಯೋ, ಇಲ್ಲವೋ ಗೊತ್ತಿಲ್ಲ ಆನೇಕ ಕಡೆಗಳಲ್ಲಿ ಇವರು ಆಸಕ್ತಿಯನ್ನು ವಹಿಸಿ, ಕಮಿಟ್‌ಮೆಂಟ್ ಅನ್ನು ಇಟ್ಟುಕೊಂಡು ಕೆಲಸವನ್ನು ಮಾಡುತ್ತಿಲ್ಲ ನೀವು ಅದನ್ನು ಕೇಳುತ್ತಾ ಇಲ್ಲ ಇದರಿಂದ ಜನರಿಗೆ ಸಾಕಷ್ಟು ತೊಂದರೆಯಾಗಿದೆ ಅದರಲ್ಲೂ ವಿಶೇಷವಾಗಿ ಕುಡಿಯುವ ನೀರು, ಮೇವು ಮತ್ತು ಕೆಲಸ ಮುಖ್ಯವಾಗಿದೆ ನೀವು ಅವರನ್ನು ಕರೆದು ಕೇಳಬೇಕು ನೀವು ಇದನ್ನು ಏಕೆ ಮಾಡಿಲ್ಲವೆಂದು ಕೇಳಬೇಕು ಅವರು ಹಣವನ್ನು ಕೇಳುವಾಗ 1,200ಕೋಟಿ ರೂಪಾಯಿಗಳಿಗೂ ಹೆಚ್ಚು ಎಲ್ಲಾ ಜಿಲ್ಲಾಧಿಕಾರಿಗಳು ಸೇರಿ ಕೇಳಿದ್ದಾರೆ ನೀವು ಬಿಡುಗಡೆ ಮಾಡುತ್ತೇವೆಂದು ಹೇಳಿದ ಹಣದಲ್ಲಿ

1/3 ಭಾಗದಷ್ಟು ಹೆಚ್ಚು ಕಡಿಮೆ ಹಣ ಬಿಡುಗಡೆಯಾಗಿದೆ ಅವರು ಏನು ಹಣವನ್ನು ಕೇಳಿದ್ದಾರೋ, ಆದರ 1/3 ಹಣವನ್ನು ರಾಜ್ಯ ಸರ್ಕಾರದಿಂದ ಬಿಡುಗಡೆ ಮಾಡಿದರೂ ಕೂಡ, ಅದರಲ್ಲಿ ಅವರು ಖರ್ಚು ಮಾಡಿದ್ದು ಶೇ 50ರಷ್ಟು ಇಲ್ಲ ಅದನ್ನು ನೀವು ಕೇಳಬೇಕು ಇಲ್ಲಿ ನಿಮ್ಮ ಡಿಮಾಂಡ್ 1,200ಕೋಟಿ ರೂಪಾಯಿಗಳು ಇರುವುದು ಅದರಲ್ಲಿ ನಾವು 1/3ಭಾಗ ಹಣವನ್ನು ರಿಲೀಜ್ ಮಾಡಿದ್ದೇವೆ ಅದರಲ್ಲೂ ಅವರು ಶೇ 50ರಷ್ಟು ಹಣವನ್ನು ಖರ್ಚು ಮಾಡಿದ್ದೀರೆಂದರೆ, ನೀವು ಏನು ಕೆಲಸವನ್ನು ಮಾಡುತ್ತೀರೆಂದು ಯಾರಿಗಾದರೂ ಒಂದು ಷೋಕಾಸ್ ನೋಟಿಸ್ ಅನ್ನು ಕೊಟ್ಟಿದ್ದೀರಾ? ಅಥವಾ ಯಾರನ್ನಾದರೂ ಸಸ್ಪೆಂಡ್ ಮಾಡಿದ್ದೀರಾ? ಅಥವಾ ಯಾರ ಮೇಲಾದರೂ ಕ್ರಮ ಜರುಗಿಸಿ, ಛೀಮಾರಿ ಹಾಕಿ, ಇಂಥಾ ಜಿಲ್ಲಾಧಿಕಾರಿ ಇಂತಹ ಕೆಲಸವನ್ನು ಮಾಡಿಲ್ಲ ಅದಕ್ಕೆ ನಾವು ಹೀಗೆ ಮಾಡಿದ್ದೇವೆಂದು ಹೇಳಿದ್ದಿರಾ? ಯಾರಿಗೂ ಕೂಡ ಈ ಕಡೆಗೆ ಲಕ್ಷ್ಯವಿಲ್ಲ, ಈ ರೀತಿಯಾಗಿದೆ ಅದಕ್ಕೆ ನಾನು ನಿಮಗೆ ಹೇಳುವುದೇನೆಂದರೆ, ಈಗಲಾದರೂ ಕನಿಷ್ಟ ನೀರು, ಇದು ಇನ್ನೂ ಮುಂದಿನ ದಿನಗಳಲ್ಲಿ ತೊಂದರೆಯಾಗುತ್ತದೆ ಈ ಫೆಬ್ರವರಿ, ಮಾರ್ಚ್, ಏಪ್ರಿಲ್, ಮೇ, ಈ ನಾಲ್ಕು ತಿಂಗಳುಗಳಲ್ಲಿ ವಿಶೇಷವಾಗಿ, ಕೋಲಾರ, ತುಮಕೂರು, ಚಿತ್ರದುರ್ಗ, ರಾಯಚೂರು, ಬಳ್ಳಾರಿ, ಹೈದರಬಾದ್ ಕರ್ನಾಟಕ, ಈ ಎಲ್ಲಾ ಏರಿಯಾಗಳಲ್ಲಿ ಕುಡಿಯುವ ನೀರಿನ ಅವಶ್ಯಕತೆ ಇದೆ ಅದಕ್ಕೆ ನೀವು ನಮ್ಮ Task Force ಅನ್ನು ಕರೆಸಿ, minimum need ನೀರಿಗೆ ಏನು ಮಾಡಬಹುದು, ಅಥವಾ ಅವರಿಗೆ ಯಾವ ಯಾವ ಕೆಲಸಗಳಿಗೆ ನೀವು ಒಪ್ಪಿಗೆಯನ್ನು ಕೊಡಬಹುದು ಅವರಿಗೆ ಅಂಥಾದ್ದನ್ನು ಕೊಟ್ಟು ಮಾಡಿಸಿ, ಅವರಿಂದ ಕೆಲಸವನ್ನು ತೆಗೆದುಕೊಳ್ಳುವುದನ್ನು ಮಾಡಬೇಕು ಆ ರೀತಿಯಾಗಿ ಆಗದಿದ್ದರೆ, ನಾವು ಭಾಷಣವನ್ನು ಮಾಡುತ್ತೇವೆ ಅದಕ್ಕೆ ನೀವು ಉತ್ತರವನ್ನು ಕೊಡುತ್ತೀರಿ ಅಷ್ಟೇ, ಮತ್ತೆ ನಾವು ಪುನ ಹೋಗುವುದು ನಾವು ಇಲ್ಲಿ ಇದರ ಬಗ್ಗೆ ನಿಮ್ಮ ಉತ್ತರ ಸರಿಯಿಲ್ಲವೆಂದು ಗಲಾಟೆಯನ್ನು ಮಾಡಿದರೆ, ಇವರಿಗೆ ಸದನವನ್ನು ನಡೆಸುವುದಕ್ಕೆ ಆಸಕ್ತಿಯಿಲ್ಲವೆಂದು, ಗೂಬೆಯನ್ನು ನಮ್ಮ ಮೇಲೆ ಕೂರಿಸುವುದು ಆಗುತ್ತದೆ ನಾವು ಕೇಳದೇ ಹೋದರೆ ನೀವು ಮಾಡುವುದಿಲ್ಲ ನಿಮ್ಮ ನಡವಳಿಕೆಗಳನ್ನು, GO ಗಳನ್ನು ನೋಡಿದಾಗ, ಸದನ ಯಾವಾಗ ಸೇರುತ್ತದೆಂದರೆ, ಆಗ GO ಗಳು ಹೊರಡುತ್ತವೆ, ಅಥವಾ

ಎಲ್ಲಾದರೂ ಯಾರಾದರೂ ಕೂಗಿದರೆ ಆಗ ಮಾತ್ರ ಬರುವುದು Swo–moto ಕೆಲಸವನ್ನು ಮಾಡಬೇಕೆಂಬ ದೃಷ್ಟಿಯಿಂದ ಮಾಡಿರುವ ಒಂದು ನಿದರ್ಶನ ಕೂಡ ಇಲ್ಲ ನಾನು ತಮ್ಮ ಮೂಖಾಂತರ ಹೇಳುವುದೆನೆಂದರೆ, ಇದರಲ್ಲಿ ನಿಷ್ಪಕ್ಷಪಾತವಾಗಿ ಏನು ನಡೆದಿದೆಯೆಂಬುದು ಗೊತ್ತಾಗಬೇಕಾದರೆ, ಇದಕ್ಕೆ ಒಂದು ಸದನ ಸಮಿತಿಯನ್ನು ಮಾಡಿ ಇದರಲ್ಲಿ ನೀವು prestige issue ಮಾಡಿಕೊಳ್ಳಬೇಡಿ ನಿಮಗೇ ಗೊತ್ತಿದೆ, ಮಾನ್ಯ ಎಂ ಪಿ ಪ್ರಕಾಶ್‌ರವರು ಹಿಂದೆ ದಿ ದೇವರಾಜ ಅರಸರ ಕಾಲದ ವಿಚಾರವನ್ನು ನೆನಪು ಮಾಡಿದರು ಆಗ ಭೀಕರ ಬರಗಾಲ ಬಂದಾಗ Republican Party ಸದಸ್ಯರಾಗಿ ಇದ್ದಂತಹ ಆರ್ಮುಗಂರವರಿಗೆ One Man Commission ಮಾಡಿ ಕಳುಹಿಸಿದರು ಅವರು opposition ನಲ್ಲಿದ್ದರು ಅವರಿಗೆ One Man Commission ಅನ್ನು ಮಾಡಿ, ಅವರು ಇಡೀ ಬರಗಾಲ ಪೀಡಿತ ಪ್ರದೇಶವನ್ನು ಸುತ್ತಾಡಿ, ನೀವು ಸಲಹೆಗಳನ್ನು ಕೊಡಬೇಕೆಂದು ಹೇಳಿದರು ನೀವು ಕೊಡುವ ಸಲಹೆಗಳ ಪ್ರಕಾರವೇ, ನಾನು in toto implement ಮಾಡುತ್ತೇನೆಂದು ದಿ ದೇವರಾಜ ಅರಸುರವರು ಹೇಳಿದ್ದರು ಅದು ಅಲ್ಲದೇ ಮೊಗದಂ ಎಂದು ಚೀಫ್ ಇಂಜಿನಿಯರ್ ಇದ್ದರು ಅವರಿಗೆ ಸಂಪೂರ್ಣವಾಗಿ ಅಧಿಕಾರವನ್ನು ಕೊಟ್ಟರು ಅವರಿಗೆ secretary power, finance power, ಎಲ್ಲವನ್ನು ಕೂಡ ಕ್ಯಾಬಿನೆಟ್‌ನಿಂದ ವಿಶೇಷ ಆಜ್ಞೆಯನ್ನು ಪಾಸು ಮಾಡಿ, ಆರ್ಡರ್ ಅನ್ನು ತೆಗೆದು ಅವರಿಗೆ ಕೊಟ್ಟರು ಆಗ ಮೊಗದಂರವರು ಅರ್ಮುಗಂರವರು ಸಜೆಸ್ಟ್ ಮಾಡಿದಂತಹ ಕೆಲಸಗಳನ್ನು, ಶಾಸಕರು ಸಜೆಸ್ಟ್ ಮಾಡಿದಂತಹ ಕೆಲಸಗಳನ್ನು, ತಕ್ಷಣ ಎಲ್ಲಿ ಆಗಬೇಕೋ ಅಲ್ಲಿಗೆ ಅಪ್ರೂವಲ್ ಮಾಡಿದರು ಅದಕ್ಕೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿದರು ನಾವು ಆಗ ಎಲ್ಲಾ ಹೊಸದಾಗಿ ಶಾಸಕರಾಗಿ ಇದ್ದೆವು ಅದು ಆದಮೇಲೆ 1985–86ರಲ್ಲಿ ಮಾನ್ಯ ಬೊಮ್ಮಾಯಿಯವರು ರೆವಿನ್ಯೂ ಮಿನಿಸ್ಟರ್ ಆಗಿದ್ದರು ಆಗ ನನ್ನನ್ನು ಆಧ್ಯಕ್ಷನನ್ನಾಗಿ ಮಾಡಿ, ಇಡೀ ರಾಜ್ಯದಲ್ಲಿ ಎಲ್ಲೆಲ್ಲಿ ಭೀಕರ ಬರಗಾಲವಿದೆ ಅಲ್ಲಿ ಹೋಗಿ ನಮಗೆ ರಿಪೋರ್ಟ್ ಕೊಡಿಯೆಂದು ಹೇಳಿದ್ದರು ನಾನು ಆಗ ವಿರೋಧಪಕ್ಷದಲ್ಲಿ Deputy Leader ಆಗಿದ್ದೆ ಆಗ ನಾವು ಬರಗಾಲವಿರುವ ಪ್ರದೇಶಗಳಿಗೆ ಹೋಗಿ ಬಂದು ಒಂದು

ರಿಪೋರ್ಟ್ ಅನ್ನು ಕೊಟ್ಟೆವು ಆದರೆ ಇಲ್ಲಿ ಏನಾಗಿದೆಯೆಂದರೆ ಇರುವಂತಹ ಹಣವನ್ನು ಖರ್ಚು ಮಾಡುತ್ತಿಲ್ಲ, ಅಥವಾ ಬರಗಾಲ ಪೀಡಿತ ಪ್ರದೇಶಗಳಿಗೆ need based ಆಗುವಂಥಾದ್ದು, ಅದು ಆಗುತ್ತಿಲ್ಲ ಇಲ್ಲಿ ಫೆವರ್ ಮಾಡಬೇಕೆಂದರೆ ಎಲ್ಲರಿಗೂ ಸರಿಸಮಾನವಾಗಿ ಕೊಡಬೇಕೆಂದು ಅಲ್ಲ ಇಲ್ಲಿ ಒಂದು constituency ಯಲ್ಲಿ need based ಆಧಾರದ ಮೇಲೆ ಹತ್ತು ಬೊರ್‌ವೆಲ್ ಬೇಕಾದರೂ ಕೊಡಬೇಕು ಇನ್ನೊಂದು constituency ಯಲ್ಲಿ ಪರಿಸ್ಥಿತಿ ಬಹಳ ಕೆಟ್ಟಿದ್ದರೆ, ಅಲ್ಲಿಗೆ ನೂರು ಬೋರ್‌ವೆಲ್ ಬೇಕಾಗಿದ್ದರೂ ಕೊಡಬೇಕು ಆದರೆ ಇಲ್ಲಿ ಹಾಗೆ ಆಗುವುದಿಲ್ಲ ನಾವು ಇಲ್ಲಿ ಕೊಟ್ಟರೆ ಸರಿಸಮವೆಂದು ಈಗ ಕೊಡುತ್ತಿದ್ದೀರಿ, ಇಲ್ಲವೆಂದರೆ favoritism ನೀವೇ ಮಾಡಿಕೊಂಡು ಹೋಗಿ ಎನ್ನುವಂಥಾದ್ದು ಆಗುತ್ತದೆ ಇಲ್ಲಿ "ಹುಚ್ಚನ ಮದುವೆಯಲ್ಲಿ ಉಂಡವನೆ ಜಾಣ" ಎನ್ನುವಂತೆ ಯಾರ ಕೈಯಲ್ಲಿ ಏನು ಸಿಗುತ್ತದೋ, ಅದನ್ನು ಮಾಡಿಕೊಂಡು ಹೋಗುವುದು ಈ ರೀತಿಯಾದರೆ, ಅಭಿವೃದ್ಧಿ ಕೆಲಸವನ್ನು ಮಾಡಿದ ಹಾಗೆ ಆಗುವುದಿಲ್ಲ ಮಾನ್ಯ ಎಂ ಪಿ ಪ್ರಕಾಶ್‌ರವರೆ, ತಾವು State levelನಲ್ಲಿ Task Force Empower Committee Chairman ಆಗಿದ್ದೀರಿ ತಾವು ಇದರ ಚೇರ್‌ಮನ್ ಆಗಿದ್ದಾಗ ನಿಮಗೆ ಇಡೀ ರಾಜ್ಯದಲ್ಲಿ ಸಂಪೂರ್ಣ ಅಧಿಕಾರವಿದೆ ಅದುದರಿಂದ ಎಲ್ಲೆಲ್ಲಿ ಹೋಗಬೇಕು, ಏನು commitment ಮಾಡಬೇಕು, ಏನು ಹಣವನ್ನು ಬಿಡುಗಡೆ ಮಾಡಬೇಕು, ಅಥವಾ ಯಾವ್ಯಾವ ಇಲಾಖೆಗಳಿಂದ ಏನು ಕೆಲಸಗಳನ್ನು ತೆಗೆದುಕೊಳ್ಳಬೇಕೆಂಬ ಅಧಿಕಾರವನ್ನು ನಿಮಗೆ ಕೊಟ್ಟಿದ್ದಾರೆ ದಯವಿಟ್ಟು ಅದನ್ನು ನೀವು ಚಲಾಯಿಸಿ, ಇಲ್ಲಿ ಮಾನ್ಯ ಕುಮಾರಸ್ವಾಮಿಯವರು ಅಡ್ಡ ಬಂದರು, ಮಾನ್ಯ ಯಡಿಯೂರಪ್ಪನವರು ಅಡ್ಡ ಬಂದರು, ಅಥವಾ ಬೇರೆಯವರು ಅಡ್ಡ ಬಂದರೆಂದು ನೀವು ಏನಾದರೂ ಮುಜುಗರಕ್ಕೆ ಒಳಗಾದರೆ, ನೀವು ಈ ರೈತರಿಗೆ ಅನ್ಯಾಯ ಮಾಡಿದ ಹಾಗೆ ಆಗುತ್ತದೆ ಇವತ್ತು ಯಾರು ಬರಗಾಲಕ್ಕೆ ಒಳಗಾಗಿದ್ದಾರೋ, ಅವರೆಲ್ಲರಿಗೂ ಅನ್ಯಾಯ ಮಾಡಿದ ಹಾಗೆ ಆಗುತ್ತದೆ ನಿಮ್ಮ ಅಧಿಕಾರವನ್ನು ನೀವು ಚಲಾಯಿಸಿ ಪವರ್ ವಿಷಯದಲ್ಲಿ transformer ಕೆಟ್ಟು ಹೋದಾಗ, ಅದರ ಬಗ್ಗೆ ಏನಾದರೂ ಹೇಳಿದರೆ ರೇವಣ್ಣ ಏನನ್ನುತ್ತಾರೋ, Foodgrains ಇಲ್ಲ ಎಂದ ಕೂಡಲೇ ಅದಕ್ಕೆ ಆರ್ಡರ್ ಕೊಡಿಸಿದರೆ ಕಾರಜೋಳ ಏನನ್ನುತ್ತಾರೋ ಅಥವಾ ಈ ಅಧಿಕಾರವನ್ನು ಚಲಾಯಿಸಿದರೆ, ಹೆಚ್ಚಿನ

ಹಣವನ್ನು ಬಿಡುಗಡೆ ಮಾಡಿ ಎಂದರೆ ಯಡಿಯೂರಪ್ಪ ಏನನ್ನುತ್ತಾರೋ ಎಂದುಕೊಂಡು ನೀವು, ಆ ಒಂದು ಮುಜುಗರಕ್ಕೆ ಒಳಗಾಗಿ ಸುಮ್ಮನಾದರೆ ಖಂಡಿತವಾಗಿ ನೀವು ಆ ಪೋಸ್ಟ್‌ಗೆ ನ್ಯಾಯ ಮಾಡಿದ ಹಾಗಾಗುವುದಿಲ್ಲ, ಜನರಿಗೂ ನ್ಯಾಯ ಕೊಟ್ಟ ಹಾಗೆ ಆಗುವುದಿಲ್ಲ ಅವರಿಗೆ ನೀವು ಸ್ಪಷ್ಟವಾಗಿ ಹೇಳಬೇಕು, ಇಲ್ಲದಿದ್ದರೆ ನೀವೇ ಮಾಡಿ ಎಂದು ಅವರಿಗೆ ಹೇಳಬೇಕು ಮಾಧುಸ್ವಾಮಿಯವರು ಬಹಳ ಚೆನ್ನಾಗಿ ಹೇಳಿದರು Power Transformer Sense ಸುಧಾರಣೆ ಮಾಡಬೇಕೆಂದು ಒಂದು ಕಮಿಟಿ ಮಾಡಿ, ಅದಕ್ಕೆ ಅಧ್ಯಕ್ಷರಾಗಿ ಎಂದರೆ ಯಡಿಯೂರಪ್ಪನವರು ನಾ ಒಲ್ಲೆ ಎಂದು ಹೇಳಿದರು ಏಕೆಂದರೆ, ರೇವಣ್ಣನವರು ಅವರು ಮಾತನ್ನು ಕೇಳುವುದಿಲ್ಲ ಎಂದು ಅವರಿಗೆ ಗೊತ್ತಿದೆ ಇದೆಲ್ಲಿಯ ಕಿರಿಕಿರಿ ಎಂದು ಹೇಳಿ, ಆ ಸಬ್ ಕಮಿಟಿಯೂ ಬೇಡ, ಅದರ ಛೇರ್‌ಮೆನ್‌ಗಿರಿಯೂ ಬೇಡ, ಅವರೇ ಮಾಡಲಿ ಎಂದು ಸುಮ್ಮನಾದರು ಇದನ್ನು ಕೇಳುವವರು ಯಾರಾದರೂ ಬೇಕಲ್ಲವೇ ? At least ಮುಖ್ಯಂತ್ರಿಗಳಾದರೂ, ನಾನಿದ್ದೇನೆ, ನೀವು ಮಾಡಿ, ನಾನು ಸಪೋರ್ಟ್ ಮಾಡುತ್ತೇನೆ ಎಂದು ಹೇಳಬೇಕಲ್ಲವೇ? ಅವರಿಗೂ ಕೇಳುವ ಧೈರ್ಯವಿಲ್ಲ, ನನ್ನನ್ನು ಛೇರ್‌ಮೆನ್ ಮಾಡಿರುವಾಗ ನಾನು ಈ ಕೆಲಸ ಮಾಡುತ್ತೇನೆ ಎಂದು ಹೇಳತಕ್ಕಂಥ ಧೈರ್ಯ ಇವರಿಗೂ ಇಲ್ಲ ಹೀಗಿರುವಾಗ ಏನಾಗುತ್ತದೆ ? ಇದು ಎಲ್ಲಿಗೆ ಹೋಗಿ ಮುಟ್ಟಬೇಕು ? ನಿಮ್ಮ ಪರಿಸ್ಥಿತಿಯೇ ಇದಾದರೆ ನಮ್ಮ ಪರಿಸ್ಥಿತಿ ಏನು ? ನಮ್ಮಲ್ಲಿ ಕೆಲಸ ಮಾಡಿ, ಕುಡಿಯುವ ನೀರಿಗೆ ಹಣ ಬಿಡುಗಡೆ ಮಾಡಿ ಎಂದು ಅರ್ಜಿ ಕೊಟ್ಟು ನಾವು ನಿಮ್ಮನ್ನು ಕೇಳುವವರು ನಿಮ್ಮ ಮಾತೇ ಅಲ್ಲಿ ನಡೆಯುವುದಿಲ್ಲ ಅಂದಾಗ ನಮ್ಮ ಮಾತು ಎಲ್ಲಿ ನಡೆಯುತ್ತದೆ? ಅಂದರೆ ನಾವು ಹೀಗೇ ಸಫರ್ ಆಗಬೇಕು, ನಮ್ಮ ಜನ ಸಫರ್ ಆಗಬೇಕು ಅದಕ್ಕಾಗಿ ಹೇಳುತ್ತಿದ್ದೇನೆ, at least ನಿಜಾಂಶ ತಿಳಿಯಲಿ, ಕೇಂದ್ರದಿಂದ ಎಷ್ಟು ಹಣ ಬಂತು, ನೀವು ಎಷ್ಟು ಖರ್ಚು ಮಾಡಿದಿರಿ, ಬೇಕಾಗಿದ್ದುದು ಎಷ್ಟು, ಯಾವ ಯಾವ ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಗಳು ನಿಧಾನ ಮಾಡಿದರು, ಸಿ ಇ ಓ ಗಳು ನಿಧಾನ ಮಾಡಿದರು, ಇವುಗಳನ್ನೆಲ್ಲ ತಿಳಿದುಕೊಳ್ಳುವುದಕ್ಕಾಗುತ್ತದೆ ಅದಕ್ಕಾಗಿ ತಾವು ಒಂದು ಸದನ ಸಮಿತಿ ಮಾಡಿ ಆಗ ಎಲ್ಲೆಲ್ಲಿ ನ್ಯೂನ್ಯತೆ ಇದೆ ಅದನ್ನು ಸರಿಪಡಿಸುವುದಕ್ಕಾಗುತ್ತದೆ ಆದು ಪವರ್ ಇರಬಹುದು, ಡ್ರಿಂಕಿಂಗ್ ವಾಟರ್

2 00 p m

ಇರಬಹುದು, ರಸ್ತೆ ದುರಸ್ತಿ ಇರಬಹುದು, ಟ್ಯಾಂಕ್ ಇರಬಹುದು, ಸೀಡ್ ಇರಬಹುದು ಅಥವಾ ಯಾವುದೇ ವಿಷಯವಿರಬಹುದು ಮುಂದೆ ಬರತಕ್ಕಂಥ ದೊಡ್ಡ ಸಮಸ್ಯೆ ಎಂದರೆ ಸೀಡ್ಸ್ ಸೀಡ್ಸ್‌ಅನ್ನು ನೀವು ನಿಮ್ಮಲ್ಲಿಂದ ಅಂದರೆ Agro Industry ಯಿಂದ ವ್ಯವಸ್ಥೆ ಮಾಡುತ್ತೀರೋ ಅಥವಾ ಹೊರಗಡೆಯಿಂದ ತರುತ್ತೀರೋ, ಪ್ರೈವೇಟ್ ಏಜೆನ್ಸಿಗಳಿಂದ ತರುತ್ತೀರೋ, ಅದು ಯಾವ ಏಜೆನ್ಸಿ ಎನ್ನುವುದು ನನಗೆ ಗೊತ್ತಿಲ್ಲ ಅದೂ ಒಂದು ದೊಡ್ಡ ಹೊಡೆತ ನಮ್ಮ ರೈತರಿಗೆ ಬೀಳುತ್ತದೆ ಹಾಗಾಗಿ, ಅದರ ವ್ಯವಸ್ಥೆಯನ್ನೂ ನೀವು ಮಾಡಿಕೊಳ್ಳಬೇಕು ಈ ಕಡೆಗೆ ಸೀಡ್ಸ್ ಮೇ ತಿಂಗಳಲ್ಲಿಯೇ ಬೇಕು ನಮ್ಮ ಕಡೆ ಜೂನ್ ಫಸ್ಟ್ ವೀಕ್‌ನಲ್ಲಿ ಬೇಕು ಅದಕ್ಕೆ ಏನು ವ್ಯವಸ್ಥೆ ಮಾಡಿದಿರಿ, ಅದಕ್ಕೆ ಏನು ಹಣ ಇಟ್ಟಿರಿ ಅಥವಾ ಯಾವ ಪ್ರಯತ್ನಗಳು ನಡೆದಿವೆ ಎನ್ನುವುದನ್ನು ಹೇಳಬೇಕು ತಮಗೇ ಗೊತ್ತಿದೆ, ಹಿಂದೆ ಮೇವು ಇಲ್ಲ ಎನ್ನುವ ಸಂದರ್ಭ ಬಂದಿದ್ದಾಗ ನಾವು ಅದನ್ನು ಪಂಜಾಬಿನಿಂದ by train ತರಿಸಿದ್ದೆವು ಅದು ಎಷ್ಟು ಜಾನುವಾರುಗಳಿಗೆ ಆಗುತ್ತದೋ, ಬಿಡುತ್ತದೋ ಅದು ಬೇರೆ ವಿಷಯ ಅಲ್ಲಿಂದ ಅದನ್ನು ತಂದು ಚಿತ್ರದುರ್ಗದಲ್ಲಿ ಒಂದು ಗೋಡೌನಿನಲ್ಲಿ ಇಟ್ಟರೆ, ಅದನ್ನು ಯಾರೂ ಒಯ್ಯಲಿಲ್ಲ ಎಂದು ಹೇಳಿ, 6 ತಿಂಗಳ ನಂತರ, ನಿಮ್ಮ ಸರ್ಕಾರ ಬಂದ ಮೇಲೆ ಅದು ಡಿಸ್ಪೋಸ್ ಆಯಿತು ನಿಮಗೆ ಗೊತ್ತಿದೆ, ಮಾಜಿ ಸಚಿವರಾದ ಮಂಜುನಾಥ್‌ರವರೇ ಪ್ರಸ್ತಾಪ ಮಾಡಿದರು ಅಂದರೆ, ನಾವು ಅಷ್ಟೊಂದು ಕಾಳಜಿ ವಹಿಸಿ ಹೊರಗಡೆಯಿಂದಲೂ ಮೇವು ತರಿಸಿದ್ದೆವು ಈಗ ಮೇವು ಹೊರಗಡೆ ಹೋಗತಕ್ಕಂಥಾದ್ದನ್ನು ನೀವು ಬ್ಯಾನ್ ಮಾಡಬೇಕು ಅದನ್ನು ಹೊರಗಡೆ ಹೋಗಗೊಡಬಾರದು ಹೊರಗಡೆಯಿಂದ ಒಳಕ್ಕೆ ಬರುತ್ತಿದ್ದರೆ ನೀವು ಅಲೋ ಮಾಡಬಹುದು ಆದರೆ ನಮ್ಮದು ಹೊರಗಡೆ ಹೋಗತಕ್ಕಂಥಾದ್ದನ್ನು strict ಆಗಿ ತಡೆಯಬೇಕು ಈ ಬಗ್ಗೆ G O issue ಆಗಿದೆ ಆದರೆ ಅದನ್ನು strict ಆಗಿ implement ಮಾಡತಕ್ಕಂಥಾದ್ದನ್ನು ಮಾಡಬೇಕು, ಇದು ಒಂದು ಆಗಲೇ ಮಾಧುಸ್ವಾಮಿಯವರು ಹೇಳಿದ ಹಾಗೆ ಕೆಲವು ಏರಿಯಾಗಳಲ್ಲಿ ಹುಲ್ಲು ಬೆಳೆಯಲೂ ನೀವು ಅವಕಾಶ ಮಾಡಿಕೊಡಬೇಕು ಅದಕ್ಕೆ ಬೀಜವನ್ನಾದರೂ ತಂದುಕೊಡಿ, ನದಿ ದಂಡೆಯಲ್ಲಿ ಕೆಲವು ಎಕರೆಗಳನ್ನು ಹುಲ್ಲು ಬೆಳೆಯಲೆಂದೇ ಫೈನಲೈಸ್ ಮಾಡಿ

ಈಗ ಬಹಳಷ್ಟು ಬ್ಯಾರೇಜಸ್ ಆಗಿವೆ, ದೊಡ್ಡದೊಡ್ಡ ಡ್ಯಾಂಗಳಿವೆ ಅಂಥ ಕಡೆಗಳಲ್ಲಿ ನೂರಾರು ಎಕರೆಗಳಲ್ಲಿ ಹುಲ್ಲು ಬೆಳೆಯತಕ್ಕಂಥಾದ್ದನ್ನು ಮಾಡಬೇಕು ಈ ರೀತಿ ಎಲ್ಲವನ್ನೂ ಮಾಡಬೇಕಾಗುತ್ತದೆ ಅದಕ್ಕಾಗಿ, ತಾವು ದಯವಿಟ್ಟು ಒಂದು ಸದನ ಸಮಿತಿ ಮಾಡಿ, ಅದರಿಂದ ಪ್ರಯೋಜನವಾಗುತ್ತದೆ, ಅವರು ಎಲ್ಲ ಕಡೆ ಹೋಗಿ ಮಾಹಿತಿ ತರುತ್ತಾರೆ ಮತ್ತು ಜನರ ಸಮಸ್ಯೆಗೆ ಸ್ಪಂದಿಸುವುದಕ್ಕೆ ಇದೊಂದು ಅವಕಾಶವಾಗುತ್ತದೆ ಸಾಕಷ್ಟು ಹಣ ಇದ್ದರೂ ಕೂಡ ಇವತ್ತು ಕೆಲಸ ಆಗಿಲ್ಲ ಏನೋ ನಿಮಗೆ ದಯೆ ಇದೆ, ಏಕೆಂದರೆ ಬಹಳಷ್ಟು ಕಡೆಗಳಲ್ಲಿ ಜನರು ಇದರ ಬಗ್ಗೆ ರೊಚ್ಚಿಗೆದ್ದಿಲ್ಲ ಆದರೆ ನಿಮ್ಮ publicity ಯನ್ನು ನೋಡಿಕೊಂಡು ಕನ್ನಡಿಯಲ್ಲಿ ಏನೋ ಗಂಟನ್ನು ತೋರಿಸಿದ್ದಾರೆ ಎಂದು ತಮ್ಮ ನೋವನ್ನು ನುಂಗಿಕೊಂಡಿದ್ದಾರೆ ತೊಂದರೆಗಳು, ಕಷ್ಟಗಳು, ನೋವುಗಳನ್ನು ಜನ ಸಹಿಸುತ್ತಿದ್ದಾರೆ ಆದರೆ ಅದಕ್ಕೂ ಒಂದು ಲಿಮಿಟ್ ಇದೆ ಆ ಲಿಮಿಟ್ ದಾಟಿ ಅವರ ಸಹನೆಯನ್ನೇನಾದರೂ ಪರೀಕ್ಷೆ ಮಾಡಿದರೆ ಖಂಡಿತವಾಗಿ ಜನರು ಎಂದೂ ಕೂಡ ಸಹಿಸುವುದಿಲ್ಲ ಮತ್ತು ಅದರ ಫಲವನ್ನು ತಾವು ಅನುಭವಿಸಬೇಕಾಗುತ್ತದೆ ನನಗೆ ಇಷ್ಟು ಸಮಯ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸುತ್ತೇನೆ ಕೊನೆಯದಾಗಿ, ನಾನು ಅವರಿಗೆ ಇಷ್ಟೇ ಕೇಳುತ್ತೇನೆ, ಮೊದಲನೆಯದಾಗಿ ಸದನ ಸಮಿತಿ ಮಾಡಬೇಕು, ಎರಡನೆಯದಾಗಿ, Empower Committee ಯವರು ಎಲ್ಲ ಕಡೆಗೂ ಹಣವನ್ನು ಬಿಡುಗಡೆ ಮಾಡಬೇಕು ಹಣವಿಲ್ಲದಿದ್ದರೆ, ಬೇರೆ ಕೆಲಸಗಳನ್ನು ನಿಲ್ಲಿಸಿದರೂ ಅಡ್ಡಿಯಿಲ್ಲ, ಇದಕ್ಕೆ ಆದ್ಯತೆ ಕೊಟ್ಟು ಮಾಡಬೇಕು ಎನ್ನುವ ಮಾತನ್ನು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ

9 ಅಧ್ಯಕ್ಷರ ಅಪ್ಪಣೆ ಮೇರೆಗೆ

ಅ) ವಿಷಯ ಕಾವೇರಿ ವಿವಾದದ ಬಗ್ಗೆ ಫೆಬ್ರವರಿ 5 ರಂದು ಹೊರಬೀಳಲಿರುವ ತೀರ್ಪಿನ ಬಗ್ಗೆ

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಯವರು ಇವತ್ತು ಸಂಜೆ 6 ಗಂಟೆಗೆ, ಕಾವೇರಿ ವಿಚಾರದ ಬಗ್ಗೆ ಚರ್ಚೆ ಮಾಡಬೇಕು ಎಂದು ನಮ್ಮನ್ನೆಲ್ಲ ಒಂದು ಸಭೆಗೆ ಕರೆದಿದ್ದಾರೆ 5ನೇ ತಾರೀಖು ಅದರ ತೀರ್ಪು ಬರತಕ್ಕಂಥಾದ್ದು ಇದೆ ಇವತ್ತು ಆರು ಗಂಟೆಗೆ ಏಕೆ ಸಭೆಯನ್ನು ಕರೆದಿದ್ದಾರೆ ಎನ್ನುವುದು ಗೊತ್ತಿಲ್ಲ